# ಕೆನರಾ ವೆಲ್‌ಫೇರ್ ಟ್ರಸ್ಟ್

## ಅಂಕೋಲಾ (ಉ.ಕ.)

**ಟ್ರಸ್ಟಿನ ಸಂಸ್ಥೆಗಳ, ಧರ್ಮದರ್ಶಿಗಳ, ಮೆನೆಜಿಂಗ್ ಕಮಿಟಿ ಸದಸ್ಯರ,**
**ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರ, ಪ್ರಥಮ ಸಹಾಯಕರ ಮತ್ತು ಕಾರ್ಯಾಲಯ**
**ಮುಖ್ಯಸ್ಥರ ಸಂಯುಕ್ತ ವಾರ್ಷಿಕ ಸಭೆ – ದಿನಾಂಕ 15–07–2012**

# ಆಡಳಿತಾಧಿಕಾರಿ ವರದಿ 2011–2012

# ಪರಿವಿಡಿ


| ಅ. ನಂ. | ವಿಷಯ | ಪುಟ ಸಂ. |
|---|---|---|
| 1. | ಸ್ವಾಗತ ಹಾಗೂ ಉಪೋದ್ಘಾತ | 03 – 05 |
| 2. | ಶೈಕ್ಷಣಿಕ ಹಾಗೂ ಸಾಮಾಜಿಕ ವಿಚಾರದ ಕುರಿತು ಟ್ರಸ್ಟಿನ ಧ್ಯೇಯ | 06 – 07 |
| 3. | ಕಳೆದ ವರ್ಷದ ವಾರ್ಷಿಕ ಸಭೆಯಲ್ಲಿ ಅಂಗೀಕರಿಸಿದ ನಿರ್ಣಯಗಳ ಅನುಷ್ಠಾನದ ಕುರಿತು | 07 – 08 |
| 4. | ವಿದ್ಯಾರ್ಥಿಗಳ ದಾಖಲಾತಿ ಹಾಗೂ ಸಿಬ್ಬಂದಿಗಳ ವಿವರ | 08 – 11 |
| 5. | ಶೈಕ್ಷಣಿಕ ಪ್ರಗತಿ: 2011–2012ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಎಸ್.ಎಸ್.ಎಲ್.ಸಿ., ಪಿ.ಯು.ಸಿ. ಹಾಗೂ ಪದವಿ ಪರೀಕ್ಷೆಯಲ್ಲಿ ಮಾಡಿದ ಸಾಧನೆ | 11 – 16 |
| 6. | 2011–12ನೇ ಶೈಕ್ಷಣಿಕ ವರ್ಷದಲ್ಲಿ ಅಧ್ಯಾಪಕರ ವಿಶೇಷ ಸಾಧನೆ | 16 |
| 7. | ಪಠ್ಯ ಮತ್ತು ಪಠ್ಯೇತರ ಚಟುವಟಿಕೆಯಲ್ಲಿ ವಿದ್ಯಾರ್ಥಿಗಳ ಸಾಧನೆ | 17 – 18 |
| 8. | ಅನುಮೋದಿತ ಹುದ್ದೆಗಳಲ್ಲಿ ನೇಮಕಾತಿ ಹೊಂದಿದ ಶಿಕ್ಷಕರ ಹಾಗೂ ಖಾಲಿ ಇರುವ ಹುದ್ದೆಗಳ ಕುರಿತು | 18 – 19 |
| 9. | ಟ್ರಸ್ಟು ಪ್ರಕಟಿಸಿದ ಪುಸ್ತಕ | 20 |
| 10. | ಆಫೀಸ ಹಾಗೂ ಲೆಕ್ಕಪತ್ರ ನಿರ್ವಹಣೆಯ ಕಾರ್ಯಗಾರ | 21 |
| 11. | ಟ್ರಸ್ಟಿನ ತ್ರೈಮಾಸಿಕ ಸಂಚಿಕೆ | 21 – 22 |
| 12. | ಟ್ರಸ್ಟಿನ ವಿವಿಧ ಕೇಂದ್ರಗಳಲ್ಲಿ ನಡೆದ ಅಭಿವೃದ್ಧಿ ಹಾಗೂ ಇತರ ಕೆಲಸಗಳು | 22 – 27 |
| 13. | ಕ್ರುಗರ ಫೌಂಡೇಶನ ಕಾರವಾರ ಇವರು ತಾತ್ಕಾಲಿಕ ಶಿಕ್ಷಕರಿಗೆ ನೀಡಿದ ಸಹಾಯಧನ | 27 – 28 |
| 14. | 2011–12ನೇ ಸಾಲಿನಲ್ಲಿ ಆರ್ಥಿಕ ಸಹಾಯ ಪಡೆದವರ ವಿವರ | 28 – 29 |
| 15. | ಜಿಲ್ಲಾ ಮಟ್ಟದ ಅಂತರ ಕಾಲೇಜು ಚರ್ಚಾಸ್ಪರ್ದೆ | 29 – 30 |
| 16. | ಉತ್ತಮ ನಾಳೆಗಾಗಿ ಪರಿವರ್ತನಾಗಾರರು (Project Change Makers for a Better Tomorrow) | 31 |
| 17. | ಟ್ರಸ್ಟಿಗೆ ದೇಣಿಗೆ ನೀಡಿದವರ ವಿವರ | 32 |
| 18. | ಟ್ರಸ್ಟಿಗೆ ಬರುವ ಆದಾಯದ ಕುರಿತು | 32 – 34 |
| 19. | 2011–2012ನೇ ಸಾಲಿನಲ್ಲಿ ನಿವೃತ್ತಿ ಹೊಂದಿದ ಬೋಧಕ ಬೋಧಕೇತರರು | 34 – 35 |
| 20. | ಶೈಕ್ಷಣಿಕ ಪ್ರಗತಿ ಹಾಗೂ ಲೆಕ್ಕ ಪತ್ರ ಪರಿಶೀಲನಾ ಕಾರ್ಯಕ್ರಮ | 35 – 36 |
| 21. | ಪ್ರಗತಿ ಪರಿಶೀಲನಾ ತಂಡದ ಸಲಹೆಗಳು | 36 – 37 |
| 22. | ಆಫೀಸ ಹಾಗೂ ಲೆಕ್ಕ ಪತ್ರ ನಿರ್ವಹಣೆ ಕುರಿತು ಪರಿಶೀಲನೆಯ ವರದಿ | 37 – 39 |
| 23. | ಸಾಮಾನ್ಯ ಸೂಚನೆಗಳು | 39 – 41 |
| 24. | ಶಿಕ್ಷಣಕ್ಕಾಗಿ ಆರ್ಥಿಕ ನೆರವು – 2012–13ನೇ ಸಾಲಿನಲ್ಲಿ ಟ್ರಸ್ಟು ರೂಪಿಸಿದ ಹೊಸದಾದ ಯೋಜನೆ | 41 – 43 |
| 25. | ಕೆನರಾ ವೆಲ್‌ಫೆರ್ ಟ್ರಸ್ಟಿಗೆ 2012ರ ಶೈಕ್ಷಣಿಕ ರಂಗದ ಸಾಧನೆಗೆ ಪುರಸ್ಕಾರ | 43 |
| 26. | ಆಡಳಿತ ಮಂಡಳಿಯ ನೋಂದಣಿ | 43 – 44 |
| 27. | ಕೊನೆಯ ಮಾತು ಹಾಗೂ ಉಪಕಾರ ಸ್ಮರಣೆ | 44 – 46 |

# ಆಡಳಿತಾಧಿಕಾರಿ ವರದಿ – 2011–2012

## 1. ಸ್ವಾಗತ ಹಾಗೂ ಉಪೋದ್ಘಾತ

ಕೆನರಾ ವೆಲ್‌ಫೆರ್ ಟ್ರಸ್ಟು ನಡೆಸುತ್ತಿರುವ ಎಲ್ಲ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರ, ಹಿರಿಯ ಉಪನ್ಯಾಸಕರ / ಮೆನೆಜಿಂಗ ಕಮಿಟಿಯ ಸದಸ್ಯರ ಹಾಗೂ ಟ್ರಸ್ಟಿನ ಪದಾಧಿಕಾರಿಗಳ ವಾರ್ಷಿಕ ಸಭೆಯನ್ನು ಪ್ರತಿ ವರ್ಷದಂತೆ ಈ ವರ್ಷವೂ ಟ್ರಸ್ಟಿನ ಅಧ್ಯಕ್ಷರಾದ ಮಾನ್ಯ ಶ್ರೀ ಎಸ್.ಪಿ.ಕಾಮತರವರ ಸಲಹೆಯಂತೆ ಇಂದು ದಿನಾಂಕ 15–07–2012 ರಂದು ಗೋಖಲೆ ಸೆಂಟಿನರಿ ಕಾಲೇಜಿನ ಯು.ಜಿ.ಸಿ. ಹಾಲಿನಲ್ಲಿ ಕರೆಯಲಾಗಿದೆ.

ಇಂದಿನ ಈ ಸಭೆಗೆ ಆಗಮಿಸಿದ ಟ್ರಸ್ಟಿನ ಅಧ್ಯಕ್ಷರಾದ ಮಾನ್ಯ ಶ್ರೀ ಎಸ್.ಪಿ.ಕಾಮತರವರಿಗೆ, ಟ್ರಸ್ಟಿಗಳಾದ ಪ್ರೊ.ಜಿ.ವಿ.ಭಟ್ಟರವರಿಗೆ ಹಾಗೂ ಮೆನೇಜಿಂಗ್ ಕಮಿಟಿ ಸದಸ್ಯರಿಗೆ, ಸಂಸ್ಥೆಗಳ ಎಲ್ಲ ಮುಖ್ಯಸ್ಥರಿಗೆ, ಹಿರಿಯ ಉಪನ್ಯಾಸಕರಿಗೆ, ಹಿರಿಯ ಸಹ ಶಿಕ್ಷಕರಿಗೆ, ಆಫೀಸ ಸಹಾಯಕರಿಗೆ, ಆಮಂತ್ರಿತರಿಗೆ ಟ್ರಸ್ಟಿನ ಪರವಾಗಿ ಹಾಗೂ ವೈಯಕ್ತಿಕವಾಗಿ ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ.

ಕೆನರಾ ವೆಲ್‌ಫೆರ್ ಟ್ರಸ್ಟಿನ, ಧರ್ಮದರ್ಶಿಗಳು, ಹಾಗೂ ಕೋಶಾಧ್ಯಕ್ಷರು ಆದ ಶ್ರೀಯುತ ವಾಮನ ಎನ್.ಪೈಯರವರು ದಿನಾಂಕ 15–03–2012 ರಂದು ನಿಧನ ಹೊಂದಿದ ವಿಷಯ ತಮಗೆಲ್ಲ ಗೊತ್ತಿದೆ. ಅವರು ಟ್ರಸ್ಟಿಗೆ ಹಾಗೂ ಶಿಕ್ಷಣ ಸಂಸ್ಥೆಗಳಿಗೆ ಅಪಾರವಾದ ಸೇವೆಯನ್ನು ಸಲ್ಲಿಸಿರುತ್ತಾರೆ. ಅವರ ಸೇವೆ ಅವಿಸ್ಮರಣೀಯವಾದದ್ದು. ಟ್ರಸ್ಟು ನಡೆಸುತ್ತಿರುವ ಎಲ್ಲ ಸಂಸ್ಥೆಗಳು ಶ್ರೀಯುತ ವಾಮನ ಪೈಯವರ ನಿಧನದ ಬಗ್ಗೆ ಸಂತಾಪ ಸೂಚಕ ಸಭೆಗಳನ್ನು ನಡೆಸಿ ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೋರಿರುತ್ತಾರೆ. ಇಂದು ಟ್ರಸ್ಟಿನ ಆಡಳಿತ ಮಂಡಳಿಯವರು ಹಾಗೂ ಸಂಸ್ಥೆಯ ಮುಖ್ಯಸ್ಥರೆಲ್ಲರೂ ಇಲ್ಲಿ ಕೂಡಿರುವದರಿಂದ ದಿವಂಗತ ವಾಮನ ಪೈಯವರ ಸೇವೆ ನೆನೆಸುತ್ತಾ ಅವರ ಆತ್ಮಕ್ಕೆ ಚಿರಶಾಂತಿ ಕೋರಿ ಒಂದು ನಿಮಿಷ ಮೌನ ಆಚರಿಸಬೇಕಾಗಿ ತಮ್ಮಲ್ಲಿ ವಿನಂತಿಸುತ್ತೇನೆ.

ಇಂದು ನಡೆಯುತ್ತಿರುವ ಈ ಸಭೆ ಶೈಕ್ಷಣಿಕವಾಗಿ ಹಾಗೂ ಆಡಳಿತಾತ್ಮಕವಾಗಿ ಬಹಳ ಮಹತ್ವಪೂರ್ಣವಾದುದು. ಈ ಸಭೆಯಲ್ಲಿ ಟ್ರಸ್ಟು ನಡೆಸುತ್ತಿರುವ ಎಲ್ಲ ಶಿಕ್ಷಣ ಸಂಸ್ಥೆಗಳ ಶೈಕ್ಷಣಿಕ ಪ್ರಗತಿ ಪರಿಶೀಲನೆ, ಸಾಧನೆ, ಲೆಕ್ಕಪತ್ರ ನಿರ್ವಹಣೆ, ಅಭಿವೃದ್ಧಿ ಕಾರ್ಯಗಳು ಮತ್ತು ಪಠ್ಯ–ಪಠ್ಯೇತರ ಚಟುವಟಿಕೆಯಲ್ಲಿ ವಿದ್ಯಾರ್ಥಿಗಳು ಮಾಡಿದ ಸಾಧನೆ ಹಾಗೂ 2012–2013ನೇ ಸಾಲಿನ ಕಾರ್ಯಯೋಜನೆ ಕುರಿತು ಮುಕ್ತವಾಗಿ ಚರ್ಚಿಸಿ ನಿರ್ಣಯ ಕೈಗೊಂಡು ಅದನ್ನು ಜಾರಿಗೊಳಿಸುವ ಬಗ್ಗೆ ಚಿಂತನೆ ನಡೆಸಬೇಕಾಗಿದೆ.

ಕಳೆದ ವರ್ಷ 09–07–2011 ರಂದು ನಡೆದ ವಾರ್ಷಿಕ ಸಭೆಯಲ್ಲಿ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಸ್.ಪಿ.ಕಾಮತರವರು ಉಲ್ಲೇಖಿಸಿದ ಮಾತು ತಮ್ಮ ಗಮನಕ್ಕೆ ತರಲು ಇಚ್ಛಿಸುತ್ತೇನೆ.

"ಟ್ರಸ್ಟು ಈಗಿನ ಸಾಧನೆಗೆ ತೃಪ್ತಿಪಡದೆ ಬಹಳಷ್ಟು ಮುಂದೆ ಹೋಗಬೇಕಾಗಿದೆ. ಮುಂಬರುವ ದಿನಗಳಲ್ಲಿ ಟ್ರಸ್ಟಿಗೆ Qualitative Changes ಅಗತ್ಯವಾಗಿ ಬೇಕಾಗಿದೆ. ಟ್ರಸ್ಟಿನಲ್ಲಿ ಕೆಲಸಮಾಡುವ ಪ್ರತಿಯೊಬ್ಬರು Change Makers ಆಗಬೇಕಾಗಿದೆ. ದಾರ್ಶನಿಕ ಬುದ್ದನಿಂದ ಪ್ರೇರಣೆ ಪಡೆದ ಅಶೋಕನಂತೆ, ನಮ್ಮ ಮಹತ್ವಾಕಾಂಕ್ಷೆ, ಪ್ರಯತ್ನ ಸಾಗಬೇಕಾಗಿದೆ. ನಿಜಮಾನವವನ್ನು ರೂಪಿಸುವ ಶಿಕ್ಷಣ ಟ್ರಸ್ಟಿನ ಆಧ್ಯತೆಯಾಗಿದೆ. ಇಂದು ಬೇಕಾಗಿರುವುದು ಮೌಲ್ಯಾಧಾರಿತ ಶಿಕ್ಷಣ (Value Based Education) ನಮ್ಮ ಶಿಕ್ಷಣದ ದಾರಿ ದಿಕ್ಕುಗಳು ಹೇಗೆ ಸಾಗಬೇಕು, ಅದನ್ನು ಹೇಗೆ ಪ್ರಯೋಗಕ್ಕೆ ತರಬೇಕು. ನೀವೆಲ್ಲರೂ ಬರೀ ಶಿಕ್ಷಕರಾಗಿರದೆ, ಗುರುತತ್ವಕ್ಕೆ ಬದ್ಧರಾಗಿ ಪಠ್ಯದೊಂದಿಗೆ ಕರಗಿರಿ. ನಿಮ್ಮ ಒಳಗಿನ ಶಕ್ತಿಯು ಮುಂದಿರುವ ವಿದ್ಯಾರ್ಥಿಗಳ ಮೇಲೆ ಅದ್ಭುತವಾದ ಪರಿಣಾಮ ಬೀರುತ್ತದೆ." ಇಂದು ಈ ದಿಶೆಯಲ್ಲಿ ನಾವು ಸಾಗಬೇಕಾದ ಅವಶ್ಯಕತೆ ಇದೆ. ಆ ಕುರಿತು ಚಿಂತನೆ ನಡೆಸಬೇಕು. ಇಂತಹ ಅನೇಕ ವಿಚಾರಗಳನ್ನು ತಮ್ಮ ಮುಂದೆ ಇಟ್ಟಿದರು.

ಶ್ರೀಯುತ ವಿಷ್ಣು ನಾಯ್ಕುಯವರು ತಮ್ಮ ಉಪೋದ್ಘಾತದಲ್ಲಿ 1953 ರಲ್ಲಿ ಪ್ರಾರಂಭವಾದ ಟ್ರಸ್ಟು 2013 ರಲ್ಲಿ ವಜ್ರಮಹೋತ್ಸವ ಕಾಣುತ್ತದೆ. ಆ ಸಂದರ್ಭದಲ್ಲಿ ಟ್ರಸ್ಟಿನಲ್ಲಿ ಸೇವೆ ಸಲ್ಲಿಸುತ್ತಿರುವವರು ವಿಧಾಯಕ ಕಾರ್ಯಗಳ ಮೂಲಕ ವಿಶೇಷವಾದುದನ್ನು ಸಾಧಿಸಲು ಆದ್ಯತೆ ನೀಡುವುದು ಅಪೇಕ್ಷಣೀಯ ಎಂದು ಉಲ್ಲೇಖಿಸಿದ್ದರು. ಈ ಬಗ್ಗೆಯೂ ತಾವು ಗಮನ ಹರಿಸಬೇಕು.

1953 ರಲ್ಲಿ ಪ್ರಾರಂಭಿಸಿದ ಟ್ರಸ್ಟಿಗೆ 2013 ರಲ್ಲಿ 60 ವರ್ಷಗಳು ತುಂಬುತ್ತದೆ. ಈ ಒಂದು ಶುಭ ಸಂದರ್ಭದಲ್ಲಿ ಟ್ರಸ್ಟಿನ ವಜ್ರ ಮಹೋತ್ಸವವನ್ನು ವಿಶಿಷ್ಟ ರೀತಿಯಲ್ಲಿ ಆಚರಿಸುವ ಬಗ್ಗೆ ಚಿಂತನೆಯನ್ನು ಇಂದಿನ ಸಭೆಯಲ್ಲಿ ಮಾಡಬೇಕಾದ ಅವಶ್ಯಕತೆ ಇದೆ ಎಂದು ನನ್ನ ಅನಿಸಿಕೆ.

ಟ್ರಸ್ಟು ನಡೆಸುತ್ತಿರುವ ಎಲ್ಲ ಶಿಕ್ಷಣ ಸಂಸ್ಥೆಗಳಲ್ಲಿ ಉತ್ತಮ ಗುಣಮಟ್ಟದ ಶೈಕ್ಷಣಿಕ ವಾತಾವರಣ ನಿರ್ಮಾಣ ಮಾಡುವ ಕುರಿತು ಹಾಗೂ ಮೂಲಭೂತ ಸೌಕರ್ಯ ಒದಗಿಸುವ ಕುರಿತು ಅಧ್ಯಕ್ಷರು ಸಂಸ್ಥೆಯ ಮುಖ್ಯಸ್ಥರೊಡನೆ, ಟ್ರಸ್ಟಿಗಳೊಂದಿಗೆ, ಮೆನೆಜಿಂಗ ಕಮಿಟಿಯ ಸದಸ್ಯರೊಂದಿಗೆ ಚರ್ಚಿಸಿ ಸೂಕ್ತ ನಿರ್ಣಯ ತೆಗೆದುಕೊಳ್ಳಲಿದ್ದಾರೆ. ಟ್ರಸ್ಟು ನಡೆಸುತ್ತಿರುವ ಈ ವಾರ್ಷಿಕ ಸಭೆ ಅಭಿವೃದ್ದಿ ದೃಷ್ಟಿಯಿಂದ, ಆಡಳಿತಾತ್ಮಕ ದೃಷ್ಟಿಯಿಂದ ಹಾಗೂ ಸಂಪನ್ಮೂಲ ಕ್ರೋಢಿಕರಿಸುವ ದೃಷ್ಟಿಯಿಂದ ಅತ್ಯಂತ ಮಹತ್ವದ್ದಾಗಿರುತ್ತದೆ.

ಟ್ರಸ್ಟು ನಡೆಸುತ್ತಿರುವ ಎಲ್ಲ ಸಂಸ್ಥೆಗಳಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳ ಮಾಹಿತಿ, ಹಾಜರಾತಿ, ಪರೀಕ್ಷಾ ಪರಿಣಾಮ, ಸಿಬ್ಬಂದಿಗಳ ಸಮಗ್ರ ಮಾಹಿತಿ, ಲೆಕ್ಕ ಪತ್ರ ನಿರ್ವಹಣೆ, ಮುಂತಾದ ವಿಷಯಗಳ ಕುರಿತು ಮಾಹಿತಿಯನ್ನು Online ಮೂಲಕ ಟ್ರಸ್ಟ್ ಆಫೀಸಿನಲ್ಲಿ ಪಡೆಯಲಾಗುತ್ತದೆ. ಈ ಬಗ್ಗೆ ಎಲ್ಲ ಸಂಸ್ಥೆಗಳಿಗೆ ಪ್ರತ್ಯೇಕ Email I.D. ಯನ್ನು ನೀಡಿರುವದರಿಂದ ಎಲ್ಲಾ ಸಂಸ್ಥೆಗಳು ಕೇಂದ್ರ ಕಛೇರಿಯಿಂದ ಕೇಳಿದ ಮಾಹಿತಿಗಳನ್ನು ಕೂಡಲೆ Email ಮೂಲಕ ಕಳುಹಿಸಲು ಅನುಕೂಲವಾಗಿದೆ.

ಟ್ರಸ್ಟಿನ Website ಕೆಲಸ ಪ್ರಗತಿಯಲ್ಲಿದೆ. ಇನ್ನು ಕೆಲವೇ ದಿವಸಗಳಲ್ಲಿ Website ಕಾರ್ಯ ಪೂರ್ಣಗೊಳ್ಳಲಿದೆ. ಈ Website ಮೂಲಕ ಟ್ರಸ್ಟಿನ ಮಾಹಿತಿಯನ್ನು ಕಾರ್ಯ–ಚಟುವಟಿಕೆಯನ್ನು ಅಂತರಜಾಲದ ಮೂಲಕ ಜಗತ್ತಿನ ಯಾವದೇ ಸ್ಥಳದಿಂದ ವೀಕ್ಷಿಸಿಬಹುದಾಗಿದೆ. ಈ Website ಪ್ರಾರಂಭವಾದ ಮೇಲೆ ಕಾಲಕಾಲಕ್ಕೆ ಟ್ರಸ್ಟಿನಲ್ಲಿ ನಡೆಯುವ ಹೊಸಹೊಸ ಯೋಜನೆಗಳ ಮಾಹಿತಿಯನ್ನು ಸೇರಿಸಿ Update ಮಾಡಲಾಗುವದು. ಟ್ರಸ್ಟಿನ ಸಂಸ್ಥೆಗಳಲ್ಲಿ ನಡೆಯುತ್ತಿರುವ ವಿಶೇಷ ಕಾರ್ಯಕ್ರಮ, ಸಾಧನೆ, ಅಭಿವೃದ್ಧಿ ಕಾರ್ಯಗಳಿದ್ದರೆ ಅವುಗಳ ಕುರಿತು ಕಾಲಕಾಲಕ್ಕೆ ಮಾಹಿತಿಯನ್ನು ಸಲ್ಲಿಸುತ್ತಿರಬೇಕು. ಎಲ್ಲ ಸಂಸ್ಥೆಗಳು ಈ ಬಗ್ಗೆ ಗಮನ ಹರಿಸಿ ಕಾರ್ಯ ಪ್ರವೃತ್ತರಾದರೆ ಆಡಳಿತಾತ್ಮಕವಾಗಿ ತುಂಬಾ ಅನುಕೂಲವಾಗುತ್ತದೆ. Internet ಸೌಲಭ್ಯವಿಲ್ಲದ ಸಂಸ್ಥೆಗಳು ಕೂಡಲೆ Internet ಸೌಲಭ್ಯ ಪಡೆಯಬೇಕು. ಈ ಬಗ್ಗೆ ಹೆಚ್ಚಿನ ಮಾಹಿತಿ ಬೇಕಿದ್ದಲ್ಲಿ ಶ್ರೀ ಪ್ರಶಾಂತ ರಾವ್, ಸ್ಪೇಷಲ್ ಕೋ–ಆರ್ಡಿನೇಟರ ಅವರನ್ನು ಸಂಪರ್ಕಿಸಬಹುದು.

ಪ್ರತಿ ವರ್ಷ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿ ಸಂಸ್ಥೆಯ ಮುಖ್ಯಸ್ಥರ ಸಭೆಯನ್ನು ಕಳೆದ ಅನೇಕ ವರ್ಷಗಳಿಂದ ಟ್ರಸ್ಟಿನ ಅಧ್ಯಕ್ಷರು ನಡೆಸಿಕೊಂಡು ಬಂದಿದ್ದಾರೆ. ಈ ಸಭೆಯಲ್ಲಿ ಕೈಗೊಳ್ಳುವ ಪ್ರತಿಯೊಂದು ನಿರ್ಣಯಗಳ ಪ್ರಯೋಜನ ಎಲ್ಲ ಸಂಸ್ಥೆಗಳಿಗೆ ಲಭಿಸಬೇಕು. ಟ್ರಸ್ಟಿನ ಎಲ್ಲ ಸಂಸ್ಥೆಗಳಲ್ಲಿ ಉತ್ತಮ ಶೈಕ್ಷಣಿಕ ವಾತಾವರಣ ಮೂಡಿಬರಬೇಕು ಹಾಗೂ ಎಲ್ಲ ಸಂಸ್ಥೆಗಳಲ್ಲಿ ಪ್ರಾಮಾಣಿಕತೆ, ಲೆಕ್ಕಪತ್ರ ನಿರ್ವಹಣೆಯಲ್ಲಿ ಪಾರದರ್ಶಕತೆ ಇರಬೇಕೆನ್ನುವದು ಅಧ್ಯಕ್ಷರ ಪ್ರಾಮಾಣಿಕ ಅನಿಸಿಕೆ ಹಾಗೂ ಕಳಕಳಿಯಾಗಿದೆ. ಇದನ್ನು ಕಾರ್ಯರೂಪಕ್ಕೆ ತರುವದು ನಮ್ಮ ನಿಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.

2011–2012ನೇ ಶೈಕ್ಷಣಿಕ ವರ್ಷದಲ್ಲಿ ಟ್ರಸ್ಟಿನ ವಿವಿಧ ಶಿಕ್ಷಣ ಸಂಸ್ಥೆಗಳು ನಿರ್ವಹಿಸಿದ ಕಾರ್ಯ, ಅಭಿವೃದ್ಧಿ, ಸಾಧನೆ, ಪರೀಕ್ಷಾ ಪರಿಣಾಮ, ಲೆಕ್ಕಪತ್ರ ನಿರ್ವಹಣೆ ಕುರಿತು ಸಂಕ್ಷಿಪ್ತ ವರದಿಯನ್ನು ಸಲ್ಲಿಸುತ್ತಿದ್ದೇನೆ.

## 2. ಶೈಕ್ಷಣಿಕ ಹಾಗೂ ಸಾಮಾಜಿಕ ವಿಚಾರದ ಕುರಿತು ಟ್ರಸ್ಟಿನ ಧ್ಯೇಯ

1. ಟ್ರಸ್ಟಿನ ಸಂಸ್ಥೆಗಳಲ್ಲಿ ಕಲಿಯುತ್ತಿರುವ ಎಲ್ಲ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ಸಿಗುವುದರ ಜೊತೆಗೆ ಶಾಲಾ, ಕಾಲೇಜುಗಳಲ್ಲಿ ಒಳ್ಳೆಯ ವಾತಾವರಣ, ಒಳ್ಳೆಯ ಪರಿಸರ ದೊರೆಯುವಂತೆ ಪ್ರಯತ್ನಿಸುವದು. ಶಿಕ್ಷಣದ ಗುಣ ಮಟ್ಟ ಸುಧಾರಿಸುವದರ ಜೊತೆಗೆ ಪಠ್ಯ ಪಠ್ಯೇತರ ವಿಷಯದಲ್ಲಿ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡುವಂತೆ ಎಲ್ಲ ಮುಲಭೂತ ಸೌಲಭ್ಯ ಒದಗಿಸಿ ಶಿಕ್ಷಣದಲ್ಲಿ ಮಹತ್ವಪೂರ್ಣ ಬದಲಾವಣೆ ತರುವಲ್ಲಿ ಎಲ್ಲರೂ ಪ್ರಾಮಾಣಿಕವಾದ ಪ್ರಯತ್ನ ಮಾಡುವದು.
2. "ಶಿಕ್ಷಣದ ಮೂಲಕ ಸಾಮಾಜಿಕ ಬದಲಾವಣೆ" ಎಂಬ ಟ್ರಸ್ಟಿನ ನಿಲುವನ್ನು ಮನಸಾ ಸ್ವೀಕರಿಸಿ ಆಯಾ ಭಾಗಗಳಲ್ಲಿ ಟ್ರಸ್ಟಿನ ಶಿಕ್ಷಣ ಸಂಸ್ಥೆಗಳು ಸಮಾಜಸೇವಾ ಕಾರ್ಯಕ್ಕೆ ತಮ್ಮನ್ನು ತೊಡಗಿಸಿಕೊಂಡು ಕಾರ್ಯ ನಿರ್ವಹಿಸುವದು.
3. ಪರಿಹಾರ ಬೋಧನಾ ಕಾರ್ಯವನ್ನು ಹೆಚ್ಚು ಸಮರ್ಪಕವಾಗಿ ಎಲ್ಲ ಶಾಲೆಗಳಲ್ಲಿಯೂ ನಿರ್ವಹಿಸುವಂತೆ ಹಾಗೂ ಪರೀಕ್ಷಾ ಫಲಿತಾಂಶ ಉತ್ತಮ ಪಡಿಸುವದರ ಜೊತೆಗೆ ಪ್ರತಿಭಾವಂತ ವಿದ್ಯಾರ್ಥಿಗಳ ಬಗ್ಗೆಯೂ ಹೆಚ್ಚಿನ ಗಮನ ಹರಿಸಿ ಅವರ ಸಾಧನೆ ರಾಜ್ಯಮಟ್ಟದಲ್ಲಿ ಗುರುತಿಸುವಂತೆ ಪ್ರಾಮಾಣಿಕ ಪ್ರಯತ್ನ ಮಾಡುವದು.
4. ಪಠ್ಯೇತರ ಚಟುವಟಿಕೆಗಳಲ್ಲೂ ಕೂಡಾ ವಿಶೇಷ ಗಮನ ಹರಿಸಿ, ಪ್ರತಿಭೆಯುಳ್ಳ ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡುವ ದಿಕ್ಕಿನಲ್ಲಿ ಗಮನ ಹರಿಸುವದು.
5. ಗ್ರಾಮೀಣ ಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಟ್ರಸ್ಟಿನ ಸಂಸ್ಥೆಗಳು ಸಾಕ್ಷರತೆ ಪ್ರಮಾಣ ನೂರಕ್ಕೆ ನೂರರಷ್ಟು ಆಗುವಂತೆ ಸ್ವಯಂಪ್ರೇರಣೆಯಿಂದ ಕಾರ್ಯಯೋಜನೆಗಳನ್ನು ಹಾಕಿಕೊಂಡು ಸಂಸ್ಥೆಯ ಸಿಬ್ಬಂದಿಗಳನ್ನು ಹಾಗೂ ವಿದ್ಯಾರ್ಥಿಗಳನ್ನು ಸಾಮೂಹಿಕವಾಗಿ ತೊಡಗಿಸಿಕೊಂಡು ಪ್ರಯತ್ನಿಸುವದು.
6. ಸರಕಾರದ ಮಳೆಕೊಯ್ಲು ಯೋಜನೆ, ಸಂಪೂರ್ಣ ನಿರ್ಮಲಗ್ರಾಮ ಯೋಜನೆಗಳಿಗೆ ನಮ್ಮ ಸಂಸ್ಥೆಗಳು ತಮ್ಮ ಭಾಗಗಳಲ್ಲಿ ಕೈಜೋಡಿಸಿ ಅವು ಯಶಸ್ವಿಯಾಗುವಂತೆ ನೋಡಿಕೊಳ್ಳುವದು.
7. ಪ್ರತಿಯೊಂದು ಸಂಸ್ಥೆಯವರು (ಪ್ರಾಥಮಿಕ, ಪ್ರೌಢ ಮತ್ತು ಕಾಲೇಜುಗಳು ಸೇರಿದಂತೆ) ಕಡ್ಡಾಯವಾಗಿ ಪಾಲಕರ ಸಭೆಯನ್ನು ಕರೆದು ವಿದ್ಯಾರ್ಥಿಗಳ ಶೈಕ್ಷಣಿಕ ವಿಚಾರವಾಗಿ, ನಡವಳಿಕೆಯ ವಿಚಾರವಾಗಿ, ಹಾಜರಾತಿಯ ವಿಚಾರವಾಗಿ ಮುಕ್ತವಾಗಿ ಚರ್ಚಿಸಿ ಸಲಹೆ–ಸೂಚನೆಗಳನ್ನು ನೀಡುವದು ಮತ್ತು ಅವರಿಂದ ಬರುವ ಸಲಹೆ ಸೂಚನೆಗಳಿದ್ದರೆ, ಆಕ್ಷೇಪಗಳಿದ್ದರೆ ಅವನ್ನು ದಾಖಲೆಗೊಳಪಡಿಸಿ ಪರಿಹಾರದ ದಾರಿ ಕಂಡುಕೊಳ್ಳುವದು.

8. ಒಟ್ಟಾರೆಯಾಗಿ ಶಿಕ್ಷಕರು ತಮ್ಮ ಕ್ರಿಯಾಶೀಲತೆಯನ್ನು ಹೆಚ್ಚಿಸಿಕೊಂಡು, ತಾವು ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಣ ಸಂಸ್ಥೆಗಳಲ್ಲಿ ಕಲಿಯುತ್ತಿರುವ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡಿ ವಿದ್ಯಾರ್ಥಿಗಳ, ಪಾಲಕರ ಹಾಗೂ ಸಮಾಜದ ಗೌರವ ಸಂಪಾದಿಸಿಕೊಂಡು ಕಾರ್ಯ ನಿರ್ವಹಿಸುವದು.

ಟ್ರಸ್ಟಿನ ಧ್ಯೇಯ ಹಾಗೂ ಸಾಮಾಜಿಕ ಚಿಂತನೆಗಳ ಕುರಿತು ದಿನಾಂಕ 09–07–2011 ರಂದು ನಡೆದ ಟ್ರಸ್ಟಿನ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರ ಸಭೆಯಲ್ಲಿ ಅಧ್ಯಕ್ಷರು ಚರ್ಚಿಸಿ ಎಲ್ಲ ಸಂಸ್ಥೆಗಳ ಮುಖ್ಯಸ್ಥರು 2011–12ನೇ ಶೈಕ್ಷಣಿಕ ವರ್ಷದಿಂದ ಈ ಯೋಜನೆಗಳನ್ನು ಪ್ರಾಮಾಣಿಕವಾಗಿ ಕಾರ್ಯರೂಪಕ್ಕೆ ತರುವಂತೆ ಎಲ್ಲರೂ ಪ್ರಯತ್ನಿಸಬೇಕೆಂದು ಸಲಹೆ ನೀಡಿದ್ದರು. ಈ ಸಲಹೆಯನ್ನು ಯಾವ ರೀತಿಯಲ್ಲಿ ಕಾರ್ಯರೂಪಕ್ಕೆ ತರಲಾಗಿದೆ ಎನ್ನುವದರ ಬಗ್ಗೆ ಸಂಸ್ಥೆಯ ಮುಖ್ಯಸ್ಥರು ತಮ್ಮ ವರದಿಯಲ್ಲಿ ಸಂಕ್ಷಿಪ್ತವಾಗಿ ತಿಳಿಸಬೇಕು.

## 3. ಕಳೆದ ವರ್ಷದ ವಾರ್ಷಿಕ ಸಭೆಯಲ್ಲಿ ಅಂಗೀಕರಿಸಿದ ನಿರ್ಣಯಗಳ ಅನುಷ್ಠಾನದ ಕುರಿತು

1. ಹೈಸ್ಕೂಲಗಳಲ್ಲಿ ವಿಜ್ಞಾನ ವಿಷಯ ಬೋಧಿಸುವಾಗ ಕೆಲವೊಂದು ಪ್ರಯೋಗಗಳನ್ನು ಮಾಡುವಾಗ ಕೆಮಿಕಲ್ಸ (Chemicals) ಬೇಕಾಗುತ್ತದೆ. ಅವರಿಗೆ ಬೇಕಾಗುವ ಕೆಮಿಕಲ್ಸನ್ನು ಟ್ರಸ್ಟಿನ ವತಿಯಿಂದ ತರಿಸಿ ಬೇಕಾದ ಸಂಸ್ಥೆಗೆ ನೀಡುವಂತೆ ನಿರ್ಣಯಿಸಲಾಗಿತ್ತು. ಈ ಬಗ್ಗೆ ಇಂಡೆಂಟ ಕಳಿಸುವಂತೆ ಸಂಸ್ಥೆಗೆ ತಿಳಿಸಲಾಗಿತ್ತು. 9 ಸಂಸ್ಥೆಗಳಿಂದ ಬೇಡಿಕೆ ಬಂದಿದ್ದು ಅವರ ಬೇಡಿಕೆಗೆ ಅನುಗುಣವಾಗಿ ಕೆಮಿಕಲ್ಸನ್ನು ಪೂರೈಸಲಾಗಿದೆ. ಇದಕ್ಕೆ ತಗಲಿದ ಒಟ್ಟೂ ವೆಚ್ಚ ರೂ. 26,468.
2. ಅದೇ ರೀತಿ ಅನೇಕ ಸಂಸ್ಥೆಗಳಲ್ಲಿ Microscope ಸುಸ್ಥಿತಿಯಲಿಲ್ಲವೆಂದು ಮುಖ್ಯಾಧ್ಯಾಪಕರು ತಿಳಿಸಿದ್ದರು. ಟ್ರಸ್ಟಿನ ವತಿಯಿಂದ ರಿಪೇರಿಯನ್ನು ಮಾಡಿಸಿಕೊಡಲಾಗುವದೆಂದು ನಿರ್ಣಯಿಸಲಾಗಿತ್ತು. ಈ ಕುರಿತು ಎಲ್ಲ ಸಂಸ್ಥೆಗಳಿಗೂ ಪತ್ರ ಬರೆಯಲಾಗಿತ್ತು. ಆದರೆ ಧಾರೇಶ್ವರ ಮತ್ತು ಶಿರಾಲಿ ಶಾಲೆಯಿಂದ ಒಂದೊಂದು Microscope ರಿಪೇರಿಗಾಗಿ ಬಂದಿರುತ್ತದೆ. ಉಳಿದ ಯಾವ ಶಾಲೆಯವರು Microscopeನ್ನು ರಿಪೇರಿಗಾಗಿ ಕಳುಹಿಸಿರುವದಿಲ್ಲ.
3. ಸಭೆಯಲ್ಲಿ ನಿರ್ಣಯಿಸಿದಂತೆ, ಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳಿಗೆ ಸಾದಿಲ್ವಾರ ವೆಚ್ಚಕ್ಕಾಗಿ ರೂ.7500/– ನೀಡುವಂತೆ ನಿರ್ಣಯಿಸಲಾಗಿತ್ತು. ಅವರ ಬೇಡಿಕೆಯಂತೆ ಸಾದಿಲ್ವಾರ ವೆಚ್ಚವಾಗಿ ರೂ.7500 ನೀಡಲಾಗಿದೆ. ಇದಕ್ಕೆ ತಗಲಿದ ಹಣ ಒಟ್ಟೂ ರೂ. 1,05,000.
4. ಟ್ರಸ್ಟಿನಲ್ಲಿ ಏಕರೂಪ ಲೆಕ್ಕಪತ್ರ ನಿರ್ವಹಣೆ ಹಾಗೂ ಕೆ.ಸಿ.ಎಸ್.ಆರ್.ನಿಯಮಗಳ ಕುರಿತು ತಿಳುವಳಿಕೆ ಕಾರ್ಯಗಾರ ನಡೆಸುವಂತೆ ನಿರ್ಣಯಿಸಲಾಗಿತ್ತು. ಅದನ್ನು ಏರ್ಪಡಿಸಲಾಗಿದೆ.

5. ಅನುದಾನ ರಹಿತ ಸಿಬ್ಬಂದಿಗಳಿಗೆ ನಿಯಮದಂತೆ ಪಿ.ಎಪ್.ಸೌಲಭ್ಯ ಒದಗಿಸಲಾಗಿದೆ.
6. Spoken ಇಂಗ್ಲೀಷ ತರಬೇತಿ ಶಿಬಿರ ನಡೆಸಲು Resource Persons ಸರಿಯಾದ ವೇಳೆಯಲ್ಲಿ ಲಭ್ಯವಾಗದ್ದರಿಂದ ಹಾಗೂ ಯಾವದೇ ಸಂಸ್ಥೆಯವರು ತಾವು ನಡೆಸುವದಾಗಿ ಜವಾಬ್ದಾರಿ ತಗೆದುಕೊಳ್ಳದ್ದರಿಂದ ಈ ತರಬೇತಿ ಶಿಬಿರ ನಡೆಸಲು ಸಾಧ್ಯವಾಗಲಿಲ್ಲ. ಈ ಶೈಕ್ಷಣಿಕ ವರ್ಷದಲ್ಲಿ ನಡೆಸಲಾಗುವದು. ಈ ತರಬೇತಿ ಶಿಬಿರ ನಡೆಸಲು ಸಂಸ್ಥೆಗಳು ಮುಂದೆ ಬರಬೇಕು.

## 4. ವಿದ್ಯಾರ್ಥಿಗಳ ದಾಖಲಾತಿ ಹಾಗೂ ಸಿಬ್ಬಂದಿಗಳ ವಿವರ

2011–2012ನೇ ಶೈಕ್ಷಣಿಕ ವರ್ಷದಲ್ಲಿ ಟ್ರಸ್ಟು ನಡೆಸುತ್ತಿರುವ ವಿವಿಧ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳ ಹಾಗೂ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕ–ಶಿಕ್ಷಕೇತರ ಸಿಬ್ಬಂದಿಯವರ ವಿವರ ಈ ಕೆಳಗಿನಂತಿದೆ.

| ಅ. ನಂ. | ಶಾಲೆ/ಕಾಲೇಜಿನ ಹೆಸರು | ವಿದ್ಯಾರ್ಥಿಗಳ ಸಂಖ್ಯೆ | ಕಾರ್ಯ ನಿರ್ವಹಿಸುತ್ತಿರುವವರ ಸಂಖ್ಯೆ | | | |
|---|---|---|---|---|---|---|
| | | | ಅನುದಾನಿತ | | ಆಡಳಿತ ಮಂಡಳಿ ಮಾಡಿದ ನೇಮಕಾತಿ | |
| | | | ಅಧ್ಯಾಪಕರು | ಅಧ್ಯಾಪಕೇತರರು | ಅಧ್ಯಾಪಕರು | ಅಧ್ಯಾಪಕೇತರರು |
| | **DEGREE COLLEGES** | | | | | |
| 1. | Gokhale Centenary College, Ankola | 348 | 25 | 9 | 8 | 14 |
| 2. | Divekar College Of Commerce, Karwar | 290 | 10 | 6 | 4 | 6 |
| 3. | KWT's College of Education, Dandeli | 53 | - | - | 7 | 3 |
| 4. | B.C.A. College, Karwar | 35 | - | - | 4 | 1 |
| | **Total** | **726** | **35** | **15** | **23** | **24** |

| | | | | | | |
|---|---|---|---|---|---|---|
| | **JUNIOR COLLEGES** | | | | | |
| 5. | Gokhale Centenary P.U. College, Ankola | 286 | - | 2 | 12 | 8 |
| 6. | Divekar P.U. Commerce College, Karwar | 193 | 1 | - | 7 | 3 |
| 7. | J.V.Comp. Jr. College, Dandeli | 215 | 7 | 6 | 1 | 1 |
| 8. | J.V.Comp. Jr. College, Kadtoka | 160 | 5 | 2 | 1 | - |
| 9. | J.V.Comp. Jr. College, Shirali, Bhatkal | 497 | 7 | 1 | 7 | 5 |
| 10. | P.M. Comp. Jr. College, Ankola | 109 | - | - | 6 | 3 |
| 11. | Divekar P.U. Science College, Karwar | 80 | - | - | 5 | 2 |
| | **Total** | **1540** | **20** | **11** | **39** | **22** |


| | | | | | | |
|---|---|---|---|---|---|---|
| | **HIGH SCHOOLS** | | | | | |
| 12. | P.M. High School, Ankola | 543 | 15 | 2 | 5 | 3 |
| 13. | P.M. Eng.Medium High School, Ankola | 55 | - | - | 3 | 1 |
| 14. | Janata Vidyalaya, Baad-Kagal, Kumta | 276 | 9 | - | 1 | 4 |
| 15. | Janata Vidyalaya, Shirali, Bhatkal | 309 | 7 | 2 | 2 | - |
| 16. | Janata Vidyalaya, Dandeli | 962 | 20 | 2 | 7 | 7 |
| 17. | Janata Vidyalaya, Kadwad, Karwar | 114 | 7 | 1 | - | 1 |
| 18. | Janata Vidyalaya, Kasarkod, Honnavar | 261 | 7 | 3 | 1 | 1 |
| 19. | Janata Vidyalaya, Murdeshwar, Bhatkal | 552 | 5 | - | 8 | 3 |
| 20. | Janata Vidyalaya, Mirjan-Kodkani, Kumta | 394 | 10 | 4 | - | 2 |
| 21. | Janata Vidyalaya, Kadtoka | 235 | 9 | 3 | - | - |
| 22. | Janata Vidyalaya, Mudga, Karwar | 130 | 7 | 1 | 1 | 2 |
| 23. | Janata Vidyalaya, Dhareshwar, Kumta | 141 | 8 | 2 | - | - |
| 24. | Janata Vidyalaya, Bedkani, Siddapur | 167 | 6 | - | 2 | 1 |
| 25. | S.K.P. High School, Katgal, Kumta | 251 | 6 | 1 | 3 | - |
| 26. | Janata Vidyalaya, Anilgod, Honnavar | 101 | 7 | 2 | - | - |
| 27. | Janata Vidyalaya, Kulve-Baroor, Sirsi | 110 | 6 | 2 | 2 | 1 |
| | **Total** | **4601** | **129** | **25** | **35** | **26** |

| | | | | | | |
|---|---|---|---|---|---|---|
| | **PRIMARY AND PRE-PRIMARY SCHOOLS** | | | | | |
| 28. | English Medium Primary School, Dandeli | 1084 | 11 | - | 10 | 3 |
| 29. | Kannada Medium Primary School, Dandeli | 389 | - | - | 8 | 2 |
| 30. | Dr. Dinkara Desai Primary School, Ankola | 456 | - | - | 11 | 2 |
| 31. | J.V. Dinkara Primary School, Dhareshwar | 153 | - | - | 4 | 1 |
| 32. | Shrimat Sadyajat Shankarashram Swamiji Balamandir, Shirali | 27 | - | - | 4 | - |
| 33. | English Medium Nursery School, Dandeli | 307 | - | - | 4 | 3 |
| 34. | Kannada Medium Nursery School, Dandeli | 118 | - | - | 2 | 1 |
| 35. | Thakkar Bapa Nursery School, Ankola | 181 | - | - | 3 | 1 |
| 36. | Janata Vidyalaya Dinkara Pre-Primary School, Dhareshwar | 76 | - | - | 7 | 1 |
| 37. | Anandashrama Balavikasa Kendra, Mundgod | 15 | - | - | 2 | - |
| | **Total** | **2806** | **11** | **-** | **54** | **14** |


| | | | | | | |
|---|---|---|---|---|---|---|
| | **OTHER SOCIAL SERVICE INSTITUTIONS** | | | | | |
| 38. | Thakkar Bapa Tailoring School, Ankola | **23** | - | - | 1 | - |
| 39. | Tailoring School, Mundgod | **15** | - | - | 1 | - |
| 40. | Dinkar Kalaniketan Music School, Ankola | **05** | - | - | 1 | - |
| 41. | Dinkar Kalaniketan Music School, Karwar | **25** | - | - | | - |
| 42. | Satyasai Balawadi & Balavikas Kendra, Kodibag, Karwar | **10** | - | - | 1 | 1 |
| 43. | Computer Traing Centre, Karwar | **160** | - | - | 2 | 2 |
| 44. | Computer Training Centre, Dandeli | **745** | - | - | 3 | 1 |
| | **Total** | **983** | **-** | **-** | **9** | **4** |

## ABSTRACT

| Sl. | Institutions | Student Strength | Teachers (Aided) | Non-Teaching Staff (Aided) | Mgt. Appointed | |
|---|---|---|---|---|---|---|
| | | | | | Teachers | Non-Teaching Staff |
| 1. | **Degree Colleges** | **726** | **35** | **15** | **23** | **24** |
| 2. | **Junior Colleges** | **1540** | **20** | **11** | **39** | **22** |
| 3. | **High Schools** | **4601** | **129** | **25** | **35** | **26** |
| 4. | **Primary And Pre-Primary Schools** | **2806** | **11** | **-** | **55** | **14** |
| 5. | **Other Institutions** | **983** | **-** | **-** | **9** | **4** |
| | **GRAND TOTAL** | **10656** | **195** | **51** | **161** | **90** |



## STAFF POSITION 2011-2012





| | Degree Colleges | Junior Colleges | High Schools | Primary And Pre-Primary Schools | Other Institutions |
|---|---|---|---|---|---|
| Teachers (Aided) | 35 | 20 | 129 | 11 | 0 |
| Non-T.Staff (Aided) | 15 | 11 | 25 | 0 | 0 |
| Teachers (Mgt.) | 23 | 39 | 35 | 55 | 9 |
| Non-T. Staff (Mgt.) | 24 | 22 | 26 | 14 | 4 |

ಟ್ರಸ್ಟು ನಡೆಸುತ್ತಿರುವ ವಿವಿಧ ಶಿಕ್ಷಣ ಸಂಸ್ಥೆಗಳಲ್ಲಿ ಒಟ್ಟೂ 10656 ವಿದ್ಯಾರ್ಥಿಗಳು 2011–2012ನೇ ಸಾಲಿನಲ್ಲಿ ವಿವಿಧ ತರಗತಿಗಳಿಗೆ ಪ್ರವೇಶ ಪಡೆದಿರುತ್ತಾರೆ. ವಿವಿಧ ಸಂಸ್ಥೆಗಳಲ್ಲಿ ಒಟ್ಟೂ 195 ಅನುಮೋದಿತ ಅಧ್ಯಾಪಕರು, 51 ಅಧ್ಯಾಪಕೇತರರು ಕಾರ್ಯ ನಿರ್ವಹಿಸುತ್ತಿದ್ದಾರೆ. ಇದರ ಹೊರತಾಗಿ ಆಡಳಿತ ಮಂಡಳಿಯಿಂದ ನೇಮಕಾತಿ ಹೊಂದಿದ ಪೂರ್ಣಕಾಲಿಕ ಹಾಗೂ ಅರೆಕಾಲಿಕ 161 ಅಧ್ಯಾಪಕರು ಹಾಗೂ 90 ಶಿಕ್ಷಕೇತರರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಿಕ್ಷಣ ಸಂಸ್ಥೆಗಳಲ್ಲಿ ಒಟ್ಟೂ 497 ಸಿಬ್ಬಂದಿಗಳು ಹಾಗೂ ಟ್ರಸ್ಟ ಕಾರ್ಯಾಲಯದಲ್ಲಿ 4 ಸಿಬ್ಬಂದಿಗಳು ಸೇರಿ ಒಟ್ಟೂ 501 ಸಿಬ್ಬಂದಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ.

## 5. ಶೈಕ್ಷಣಿಕ ಪ್ರಗತಿ: 2011–2012ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಎಸ್.ಎಸ್.ಎಲ್.ಸಿ., ಪಿ.ಯು.ಸಿ. ಹಾಗೂ ಪದವಿ ಪರೀಕ್ಷೆಯಲ್ಲಿ ಮಾಡಿದ ಸಾಧನೆ

2011–2012ನೇ ಶೈಕ್ಷಣಿಕ ವರ್ಷದಲ್ಲಿ ಜರುಗಿದ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ನಮ್ಮ ಟ್ರಸ್ಟಿನ ಎಲ್ಲ ಸಂಸ್ಥೆಗಳಲ್ಲಿ ಪರೀಕ್ಷೆ ಪರಿಣಾಮದ ವಿವರ ಈ ಕೆಳಗಿನಂತೆ ಇದೆ.

| % of passing 2010-2011 | Name of the School | Students appeared | Students passed | % of passing 2011-2012 |
|---|---|---|---|---|
| *94.55* | **P.M.High School, Ankola** | 176 | 172 | **97.73** |
| *95.38* | **S.K.P.High School, Katgal** | 76 | 74 | **97.37** |
| *92.31* | **Janata Vidyalaya, Mudga** | 36 | 35 | **97.22** |
| *87.80* | **Janata Vidyalaya Anilgod** | 30 | 29 | **96.67** |
| *100.00* | **Janata Vidyalaya, Kulve-Baroor** | 29 | 28 | **96.55** |
| *83.67* | **Janata Vidyalaya, Bedkani** | 58 | 56 | **96.55** |
| *99.09* | **Janata Vidyalaya, Shirali** | 116 | 111 | **95.69** |
| *95.76* | **Janata Vidyalaya, Dandeli** | 251 | 240 | **95.62** |
| *89.02* | **Janata Vidyalaya Baad-Kagal** | 94 | 89 | **94.68** |
| *100.00* | **Janata Vidyalaya, Kadwad** | 38 | 35 | **92.11** |
| *90.38* | **Janata Vidyalaya, Dhareshwar** | 44 | 40 | **90.91** |
| *92.86* | **Janata Vidyalaya, Mirjan** | 120 | 109 | **90.83** |
| *96.25* | **Janata Vidyalaya, Kadatoka** | 59 | 52 | **88.14** |
| *75.61* | **Janata Vidyalaya. Kasarkod** | 68 | 59 | **86.76** |
| *86.36* | **Janata Vidyalaya, Murdeshwar** | 213 | 177 | **83.10** |





ಜನತಾ ವಿದ್ಯಾಲಯ ದಾಂಡೇಲಿಯಲ್ಲಿ ಆಂಗ್ಲ ಮಾಧ್ಯಮದಲ್ಲಿ ಓದುತ್ತಿರುವ (1) ಅಕ್ಷತಾ ಗುರಯ್ಯ ಅಣ್ಣಿಗೇರಿ (2) ದೀಕ್ಷಾ ದೇವಿದಾಸ ಭಂಡಾರಿ ಮತ್ತು (3) ದೀಕ್ಷಾ ವಾಸುದೇವ ಪ್ರಭು ಈ ಮೂರು ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಅನುಕ್ರಮವಾಗಿ 95.84%, 95.52% ಹಾಗೂ 95.36% ಅಂಕ ಪಡೆದು ಶಾಲೆಗೆ, ಜಿಲ್ಲೆಗೆ ಹಾಗೂ ಟ್ರಸ್ಟಿಗೆ ಕೀರ್ತಿ ತಂದಿರುವರು.

ಮಾರ್ಚ 2012ರಲ್ಲಿ ನಡೆದ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ನಮ್ಮ ಟ್ರಸ್ಟು ನಡೆಸುತ್ತಿರುವ ಪಿ.ಎಂ.ಹೈಸ್ಕೂಲ, ಅಂಕೋಲಾ ಶೇಕಡಾ 97.73 ರಷ್ಟು ಫಲಿತಾಂಶ ನೀಡಿ ಪ್ರಥಮ ಸ್ಥಾನದಲ್ಲಿದೆ. ಶೇಕಡಾ 97.37 ರಷ್ಟು ಫಲಿತಾಂಶ ನೀಡಿ ಎಸ್.ಕೆ.ಪಿ.ಹೈಸ್ಕೂಲ ಕತಗಾಲ ದ್ವಿತೀಯ ಸ್ಥಾನದಲ್ಲಿದ್ದರೆ, ಶೇಕಡಾ 97.22 ರಷ್ಟು ಫಲಿತಾಂಶ ನೀಡಿ ಜನತಾ ವಿದ್ಯಾಲಯ, ಮುದಗಾ ತೃತೀಯ ಸ್ಥಾನದಲ್ಲಿದೆ. ಶೇಕಡಾ 96.67 ರಷ್ಟು ಫಲಿತಾಂಶ ನೀಡಿದ ಜನತಾ ವಿದ್ಯಾಲಯ, ಅನಿಲಗೋಡ ನಾಲ್ಕನೇ ಸ್ಥಾನದಲ್ಲಿದೆ. ಜನತಾ ವಿದ್ಯಾಲಯ, ಕುಳವೆ–ಬರೂರ ಹಾಗೂ ಜನತಾ ವಿದ್ಯಾಲಯ ಬೇಡ್ಕಣಿ ಶಾಲೆ ಶೇಕಡಾ 96.55 ರಷ್ಟು ಫಲಿತಾಂಶ ನೀಡಿ 5ನೇ ಸ್ಥಾನದಲ್ಲಿದ್ದರೆ, ಜನತಾ ವಿದ್ಯಾಲಯ ಶಿರಾಲಿ ಶೇಕಡಾ 95.69 ರಷ್ಟು ಫಲಿತಾಂಶ ನೀಡಿ 6ನೇ ಸ್ಥಾನದಲ್ಲಿದೆ. ಜನತಾ ವಿದ್ಯಾಲಯ, ದಾಂಡೇಲಿ ಶಾಲೆ 95.62 ರಷ್ಟು ಫಲಿತಾಂಶ ನೀಡಿ 7ನೇ ಸ್ಥಾನದಲ್ಲಿದೆ. ಜನತಾ ವಿದ್ಯಾಲಯ, ಬಾಡ–ಕಾಗಾಲ ಶಾಲೆ ಶೇಕಡಾ 94.68 ರಷ್ಟು ಫಲಿತಾಂಶ ನೀಡಿ 8ನೇ ಸ್ಥಾನದಲ್ಲಿದೆ. ಜನತಾ ವಿದ್ಯಾಲಯ, ಕಡವಾಡ ಶಾಲೆ ಶೇಕಡಾ 92.11 ರಷ್ಟು ಫಲಿತಾಂಶ ನೀಡಿ 9ನೇ ಸ್ಥಾನದಲ್ಲಿದೆ. ಜನತಾ ವಿದ್ಯಾಲಯ, ಧಾರೇಶ್ವರ 90.91 ರಷ್ಟು ಮಿರ್ಜಾನ 90.83 ರಷ್ಟು, ಜನತಾ ವಿದ್ಯಾಲಯ ಕಡತೋಕಾ 88.14 ರಷ್ಟು, ಜನತಾ ವಿದ್ಯಾಲಯ ಕಾಸರಕೋಡ ಶೇಕಡಾ 86.76 ರಷ್ಟು ಫಲಿತಾಂಶ ನೀಡಿ ನಂತರದ ಸ್ಥಾನದಲ್ಲಿದೆ. ಜನತಾ ವಿದ್ಯಾಲಯ ಮುರ್ಡೇಶ್ವರ ಶಾಲೆ ಶೇಕಡಾ 83.10 ರಷ್ಟು ಫಲಿತಾಂಶ ನೀಡಿ ಕೊನೆಯ ಸ್ಥಾನದಲ್ಲಿದೆ. ಜನತಾ ವಿದ್ಯಾಲಯ ಮುರ್ಡೇಶ್ವರ ಶಾಲೆಯ ಫಲಿತಾಂಶ ಜಿಲ್ಲಾ ಮಟ್ಟದ ಸರಾಸರಿಗಿಂತ ಕಡಿಮೆಯಾಗಿರುವದು ನಿರಾಶದಾಯಕವಾಗಿದೆ. ಮುಖ್ಯಾಧ್ಯಾಪಕರು ಹಾಗೂ ಶಿಕ್ಷಕ ವರ್ಗದವರು ಈ ಕುರಿತು ಚಿಂತನೆ ಮಾಡಿ ಇದು ಪುನರಾವರ್ತನೆ ಆಗದಂತೆ ವಿಶೇಷ ಕಾಳಜಿ ವಹಿಸಿ ಕಾರ್ಯ ನಿರ್ವಹಿಸಬೇಕಾಗಿದೆ. ಬರುವ ವರ್ಷ ಶಾಲೆಯ ಮುಖ್ಯಾಧ್ಯಾಪಕರು ಹಾಗೂ ಶಿಕ್ಷಕರು ಹೆಚ್ಚು ಶ್ರಮವಹಿಸಿ ಫಲಿತಾಂಶ ಉತ್ತಮಗೊಳಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸುವಂತೆ ಈ ಮೂಲಕ ತಿಳಿಸಲಾಗಿದೆ. ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಅತಿ ಹೆಚ್ಚು ಫಲಿತಾಂಶ ನೀಡಿದ ಪಿ.ಎಂ.ಹೈಸ್ಕೂಲ ಅಂಕೋಲಾದವರಿಗೂ ಹಾಗೂ ಉತ್ತಮ ಫಲಿತಾಂಶ ನೀಡಿ ಉಳಿದ ಸ್ಥಾನ ಅಲಂಕರಿಸಿದ ಎಲ್ಲ ಶಾಲೆಯ ಮುಖ್ಯಾಧ್ಯಾಪಕರಿಗೂ ಹಾಗೂ ವಿದ್ಯಾರ್ಥಿಗಳಿಗೂ ಟ್ರಸ್ಟಿನ ಪರವಾಗಿ ಅಭಿನಂದನೆ ಸಲ್ಲಿಸುತ್ತೇನೆ. 2012ರ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಟ್ರಸ್ಟು ನಡೆಸುತ್ತಿರುವ 12 ಸಂಸ್ಥೆಗಳು ಶೇಕಡಾ 90ಕ್ಕಿಂತ ಹೆಚ್ಚು ಫಲಿತಾಂಶ ನೀಡಿರುವದು ಹೆಮ್ಮೆಯ ವಿಷಯ ಅವರೆಲ್ಲರಿಗೂ ಇನ್ನೊಮ್ಮೆ ಅಭಿನಂದನೆ ಸಲ್ಲಿಸುತ್ತೇನೆ. ಬರುವ ಶೈಕ್ಷಣಿಕ ವರ್ಷದಲ್ಲಿ ಎಲ್ಲ ಶಾಲೆಗಳು ಇನ್ನೂ ಉತ್ತಮ ಫಲಿತಾಂಶ ನೀಡಿ ಟ್ರಸ್ಟಿಗೆ, ಜಿಲ್ಲೆಗೆ ಹಾಗೂ ರಾಜ್ಯಕ್ಕೆ ಕೀರ್ತಿ ತರುವಂತೆ ಎಲ್ಲ ಶಿಕ್ಷಕ ವೃಂದದವರು ಪ್ರಾಮಾಣಿಕ ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ತಿಳಿಸಲು ಬಯಸುತ್ತೇನೆ.

ದ್ವಿತೀಯ ಪದವಿ ಪೂರ್ವ ಪರೀಕ್ಷೆಯ ಫಲಿತಾಂಶವನ್ನು ಈ ಕೆಳಗೆ ನೀಡಲಾಗಿದೆ.

| % of passing 2010-2011 | Name of the College | Stream | Students appeared | Students passed | % of passing 2011-2012 |
|---|---|---|---|---|---|
| *87.33* | **J.V.Comp. Jr. College, Shirali** | Com | 60 | 59 | **98.33** |
| *79.31* | | Arts | 156 | 150 | **96.15** |
| *92.47* | **J.V.Comp. Jr. College, Kadtoka** | Arts | 75 | 70 | **93.33** |
| *72.09* | **P.M.Comp. Jr. College, Ankola** | Arts | 63 | 54 | **85.71** |
| *48.94* | **J.V.Comp. Jr. College, Dandeli** | Arts | 34 | 25 | **73.53** |
| *40.00* | | Com | 41 | 35 | **85.37** |
| *54.74* | **Divekar P.U. College, Karwar** | Com | 97 | 84 | **86.60** |
| *28.30* | | Sci | 47 | 28 | **59.57** |
| *41.38* | **G.C.P.U.College, Ankola** | Arts | 26 | 16 | **61.54** |
| *52.63* | | Com | 34 | 31 | **91.18** |
| *52.50* | | Sci | 88 | 58 | **65.91** |





ದ್ವಿತೀಯ ಪಿ.ಯು. ಪರೀಕ್ಷೆಯ ವಾಣಿಜ್ಯ ವಿಭಾಗದಲ್ಲಿ ಶೇಕಡಾ 98.33 ಹಾಗೂ ಕಲಾ ವಿಭಾಗದಲ್ಲಿ 96.15 ರಷ್ಟು ಫಲಿತಾಂಶ ನೀಡಿದ ಜನತಾ ವಿದ್ಯಾಲಯ ಸಂಯುಕ್ತ ಪದವಿ ಪೂರ್ವ ಕಾಲೇಜ, ಶಿರಾಲಿ ಮೊದಲ ಸ್ಥಾನದಲ್ಲಿದೆ. ಕಲಾ ವಿಭಾಗದಲ್ಲಿ 93.33 ರಷ್ಟು ಫಲಿತಾಂಶ ಜನತಾ ವಿದ್ಯಾಲಯ ಸಂಯುಕ್ತ ಪದವಿ ಪೂರ್ವ ಕಾಲೇಜು ಕಡತೋಕಾ ದ್ವಿತೀಯ ಸ್ಥಾನದಲ್ಲಿದೆ. ವಾಣಿಜ್ಯ ವಿಭಾಗದಲ್ಲಿ ಶೇಕಡಾ 91.18 ರಷ್ಟು ಫಲಿತಾಂಶ ನೀಡಿ ಗೋಖಲೆ ಸೆಂಟೆನರಿ ಪದವಿ ಪೂರ್ವ ಕಾಲೇಜು ತೃತೀಯ ಸ್ಥಾನದಲ್ಲಿದೆ. ದಿವೇಕರ ವಾಣಿಜ್ಯ ಪದವಿ ಪೂರ್ವ ಕಾಲೇಜು, ಕಾರವಾರ ಹಾಗೂ ಪಿ.ಎಂ. ಪದವಿ ಪೂರ್ವ ಕಾಲೇಜು, ಜನತಾ ವಿದ್ಯಾಲಯ ಪದವಿ ಪೂರ್ವ ಕಾಲೇಜು, ದಾಂಡೇಲಿ ನಂತರದ ಸ್ಥಾನದಲ್ಲಿದೆ. ಉತ್ತಮ ಸಾಧನೆ ಮಾಡಿದ ಎಲ್ಲ ಕಾಲೇಜಿನ ಪ್ರಾಚಾರ್ಯರಿಗೂ, ಅಧ್ಯಾಪಕರಿಗೂ ಹಾಗೂ ವಿದ್ಯಾರ್ಥಿಗಳಿಗೂ ಅಭಿನಂದನೆ ಸಲ್ಲಿಸುತ್ತೇನೆ.

ಪದವಿ ಪರೀಕ್ಷೆಯ ಫಲಿತಾಂಶವನ್ನು ಈ ಕೆಳಗೆ ನೀಡಲಾಗಿದೆ.

| % of passing 2010-2011 | Name of the College | Stream | Students appeared | Students passed | % of passing 2011-2012 |
|---|---|---|---|---|---|
| *77.27* | **G.C.Degree College, Ankola** | BA | 44 | 38 | **86.36** |
| *85.71* | | BSc | 67 | 64 | **95.52** |
| *96.66* | **Divekar Degree College, Karwar** | BCom | 89 | 84 | **94.38** |
| *100.00* | **KWT's BCA College, Karwar** | BCA | 13 | 13 | **100.00** |
| *98.65* | **KWT's B.Ed. College, Dandeli** | B.Ed. | 49 | 49 | **100.00** |

ಪದವಿ ವಿಭಾಗದ ಬಿ.ಎಸ್.ಸಿ.ಅಂತಿಮ ಪರೀಕ್ಷೆಯಲ್ಲಿ ಗೋಖಲೆ ಸೆಂಟಿನರಿ ಕಾಲೇಜು ಅಂಕೋಲಾ 95.52 ರಷ್ಟು ಫಲಿತಾಂಶ ನೀಡಿ ಉತ್ತಮ ಸಾಧನೆ ಮಾಡಿದೆ. ಕಲಾ ವಿಭಾಗದಲ್ಲಿ (ಬಿ.ಎ.) 86.36 ರಷ್ಟು ಫಲಿತಾಂಶ ನೀಡಿದೆ. ಅದೇ ರೀತಿ ದಿವೇಕರ ವಾಣಿಜ್ಯ ಕಾಲೇಜು ಬಿ.ಕಾಂ. ಪದವಿ ಪರೀಕ್ಷೆಯಲ್ಲಿ 94.38 ರಷ್ಟು ಫಲಿತಾಂಶ ನೀಡಿ ಉತ್ತಮ ಸಾಧನೆ ಮಾಡಿದೆ.




ಟ್ರಸ್ಟಿನ ಕಾರವಾರದ ಬಿ.ಸಿ.ಎ. ಕಾಲೇಜು ಹಾಗೂ ದಾಂಡೇಲಿಯ ಬಿ.ಎಡ್.ಕಾಲೇಜು ಶೇಕಡಾ 100 ರಷ್ಟು ಫಲಿತಾಂಶ ನೀಡಿ ಅತ್ಯುತ್ತಮ ಸಾಧನೆ ಮಾಡಿದ್ದಾರೆ. ಪ್ರಾಚಾರ್ಯರು, ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಅಭಿನಂದನಾರ್ಹರು.

ಬರುವ ವರ್ಷ ಇನ್ನೂ ವಿಶೇಷ ಪ್ರಯತ್ನ ಮಾಡಿ ಫಲಿತಾಂಶ ಇನ್ನೂ ಹೆಚ್ಚಾಗುವ ದಿಕ್ಕಿನಲ್ಲಿ ಎಲ್ಲರೂ ಪ್ರಾಮಾಣಿಕ ಪ್ರಯತ್ನ ಮಾಡಿ ಕಾರ್ಯ ನಿರ್ವಹಿಸಬೇಕಾಗಿದೆ. ಈ ಕುರಿತು ಮುಖ್ಯಾಧ್ಯಾಪಕರು ಪ್ರಾಚಾರ್ಯರು ಹೆಚ್ಚು ಗಮನ ಹರಿಸಬೇಕು. ವಿಷಯ ಬೋಧನೆ ಮಾಡುವ ಉಪನ್ಯಾಸಕರು ತಮ್ಮ ತಮ್ಮ ವಿಷಯದಲ್ಲಿ ಫಲಿತಾಂಶ ಹೆಚ್ಚಾಗುವ ದಿಕ್ಕಿನಲ್ಲಿ ವಿಶೇಷ ಕಾಳಜಿ ವಹಿಸಿ ಬೋಧನೆ ಮಾಡಬೇಕು.

## 6. 2011–12ನೇ ಶೈಕ್ಷಣಿಕ ವರ್ಷದಲ್ಲಿ ಅಧ್ಯಾಪಕರ ವಿಶೇಷ ಸಾಧನೆ

1. ಗೋಖಲೆ ಸೆಂಟಿನರಿ ಪದವಿ ಕಾಲೇಜಿನಲ್ಲಿ ರಸಾಯನಶಾಸ್ತ್ರ ವಿಭಾಗದಲ್ಲಿ Associate Professor ರಾಗಿ ಕಾರ್ಯ ನಿರ್ವಹಿಸುತ್ತಿರುವ ಡಾ.ಇಮ್ತಿಯಾಜ ಖಾನರವರು ಬರೆದ 43 ಪ್ರಬಂಧಗಳ ಅಂತರರಾಷ್ಟ್ರೀಯ ಮಟ್ಟದ International Journals ನಲ್ಲಿ ಪ್ರಕಟಗೊಂಡಿದೆ. ಹಾಗೂ ಅವರಿಗೆ ಮಲೇಶಿಯಾ ವಿಶ್ವವಿದ್ಯಾಲಯವು ಪ್ರತಿಭಾ ಪುರಸ್ಕಾರ ನೀಡಿ ಒಂದು ಲಕ್ಷ ರೂಪಾಯಿ ಬಹುಮಾನ ನೀಡಿದೆ. ಇದು ಕಾಲೇಜಿಗೂ, ಟ್ರಸ್ಟಿಗೂ, ವಿಶ್ವವಿದ್ಯಾಲಯಕ್ಕೂ ಸಂದ ಗೌರವವಾಗಿದೆ. ಈ ಸಂದರ್ಭದಲ್ಲಿ ಅವರಿಗೆ ಟ್ರಸ್ಟಿನ ಪರವಾಗಿ ಹೃತ್ಪೂರ್ವಕ ಅಭಿನಂದನೆ ಸಲ್ಲಿಸುತ್ತೇನೆ.
2. ಅರ್ಥಶಾಸ್ತ್ರ ವಿಭಾಗದಲ್ಲಿ Associate Professor ರಾಗಿ ಕಾರ್ಯ ನಿರ್ವಹಿಸುತ್ತಿರುವ ಪ್ರೊ.ಪಿ.ಎಚ್.ನಾಯಕ ಹಾಗೂ ಪ್ರೊ.ಬಿ.ಎಚ್.ನಾಯಕ ಅವರು ಬರೆದ ಪ್ರಬಂಧಗಳಿಗೆ ಹಾಗೂ ಪ್ರೊ.ಎಸ್.ವಿ.ವಸ್ತ್ರದ ಅವರಿಗೆ ರಾಜ್ಯಶಾಸ್ತ್ರ ವಿಷಯದಲ್ಲಿ ಬರೆದ ಪ್ರಬಂಧಕ್ಕೆ ಕರ್ನಾಟಕ ವಿಶ್ವವಿದ್ಯಾಲಯ ಡಾಕ್ಟರೇಟ (Ph.D.) ಪದವಿ ನೀಡಿದೆ. ಅವರಿಗೆ ಅಭಿನಂದನೆಗಳು.
3. ಜನತಾ ವಿದ್ಯಾಲಯ ಮಿರ್ಜಾನ ಪ್ರೌಢ ಶಾಲೆಯ ಶಿಕ್ಷಕಿಯಾದ ಕುಮಾರಿ ಭಾರತಿ ಆರ್.ಹೆಗಡೆ ಇವರು ಗಾಯನ ಸ್ಪರ್ದೆಯಲ್ಲಿ ರಾಜ್ಯಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದಿರುವರು. ಇವರಿಗೂ ಟ್ರಸ್ಟಿನ ಪರವಾಗಿ ಅಭಿನಂದನೆ ಸಲ್ಲಿಸುತ್ತೇನೆ.
4. ಜನತಾ ವಿದ್ಯಾಲಯ ಅನೀಲಗೋಡ ಶಾಲೆಯ ಶಿಕ್ಷಕರಾದ ಶ್ರೀ ಜಿ.ಐ.ಭಟ್ಟ ಅವರು ಜಿಲ್ಲಾಮಟ್ಟದ Best Teacher ಪ್ರಶಸ್ತಿ ಪಡೆದಿರುವರು. ಇವರು ಬರೆದ ಪುಸ್ತಕಕ್ಕೆ Academy of Science & Technology, Bangalore ಅವರಿಂದ Best Author ಪ್ರಶಸ್ತಿ ಬಂದಿದೆ.

## 7. ಪಠ್ಯ ಮತ್ತು ಪಠ್ಯೇತರ ಚಟುವಟಿಕೆಯಲ್ಲಿ ವಿದ್ಯಾರ್ಥಿಗಳ ಸಾಧನೆ

1. ಜಿ.ಸಿ.ಕಾಲೇಜಿನ ಅಂತಿಮ ವರ್ಷದ ಪದವಿ ತರಗತಿಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳಲ್ಲಿ 18 ವಿದ್ಯಾರ್ಥಿಗಳು Campus Selection ನಲ್ಲಿ ಆಯ್ಕೆಯಾಗಿದ್ದು ಅವರಲ್ಲಿ 11 ಜನ ವಿಜಯ ಬ್ಯಾಂಕಿಗೂ ಹಾಗೂ 7 ಜನ ಜಿಂದಾಲ ಹಾಗೂ ವಿಪ್ರೊ ಕಂಪನಿಗೂ ಆಯ್ಕೆಯಾಗಿ ನೇಮಕಗೊಂಡಿದ್ದಾರೆ.
2. ಜಿ.ಸಿ.ಪದವಿ ಕಾಲೇಜಿನಲ್ಲಿ ಓದುತ್ತಿರುವ 5 ವಿದ್ಯಾರ್ಥಿಗಳು ಕರ್ನಾಟಕ ವಿಶ್ವವಿದ್ಯಾಲಯದ Meritorious Awardಗೆ ಆಯ್ಕೆಯಾಗಿದ್ದಾರೆ. ಅವರು ತಲಾ ರೂ.10,000 ದಂತೆ 3 ವರ್ಷ ಸ್ಕಾಲರಶಿಫ ರೂಪದಲ್ಲಿ ಈ ಹಣ ಪಡೆಯಲಿದ್ದಾರೆ. ಇವರೆಲ್ಲರಿಗೂ ಹೃತ್ಪೂರ್ವಕ ಅಭಿನಂದನೆಗಳು.
3. ಬಿ.ಎಸ್ಸಿ ಅಂತಿಮ ಪರೀಕ್ಷೆಯಲ್ಲಿ ಹೇಮಾ ನಾಯಕ ಇವರು ಶೇಕಡಾ 97 ಅಂಕಗಳನ್ನು ಪಡೆದಿದ್ದು ಕರ್ನಾಟಕ ಯುನಿವರ್ಸಿಟಿಯ ರ‍್ಯಾಂಕಿನ ನಿರೀಕ್ಷೆಯಲ್ಲಿದ್ದಾರೆ. ಅವರಿಗೂ ಟ್ರಸ್ಟಿನ ಪರವಾಗಿ ಹಾಗೂ ತಮ್ಮೆಲ್ಲರ ಪರವಾಗಿ ಹಾರ್ದಿಕವಾಗಿ ಅಭಿನಂದಿಸಿ ಶುಭವನ್ನು ಕೋರುತ್ತೇನೆ.
4. ಯು.ಜಿ.ಸಿ.ಧನ ಸಹಾಯ ಆಯೋಗದ ಅಡಿಯಲ್ಲಿ ಗೋಖಲೆ ಸೆಂಟಿನರಿ ಕಾಲೇಜಿನವರು National Level Seminar on "Radiation Effects on Environment" ಅರ್ಥಪೂರ್ಣವಾಗಿ ಸಂಘಟನೆ ಮಾಡಿದ್ದಾರೆ.
5. ಕಾರವಾರದ ಬಿ.ಸಿ.ಎ ಕಾಲೇಜಿನಲ್ಲಿ ಅಂತಿಮ ತರಗತಿಯಲ್ಲಿ ಓದುತ್ತಿರುವ ಕುಮಾರಿ ಸ್ಮಿತಾ ರಾವಲ ಅವರು Campus Interview ದಲ್ಲಿ ಆಯ್ಕೆಯಾಗಿದ್ದಾಳೆ. ಅವರಿಗೆ Wipro ದಲ್ಲಿ Selection ಆಗಿರುತ್ತದೆ.
6. ಅಂಕೋಲಲದ ಜಿ. ಸಿ. ಪದವಿ ಪೂರ್ವ ಕಾಲೇಜಿನಲ್ಲಿ ಓದುತ್ತಿರುವ ಶ್ರೀ ಪ್ರಣೇಶ ಪ್ರಭಾಕರ ಕಲ್ಮನೆ ಇವರು ರಾಜ್ಯಮಟ್ಟದ ಪೆಂಟಿಂಗ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಗಳಿಸಿ ಕಾಲೇಜಿಗೂ, ಟ್ರಸ್ಟಿಗೂ, ಇಲಾಖೆಗೂ ಕೀರ್ತಿ ತಂದಿರುವರು. ಕು.ಗಾಯಿತ್ರಿ ಶೆಟ್ಟಿ ರಾಜ್ಯಮಟ್ಟದ ಇಂಗ್ಲೀಷ ಪ್ರಬಂಧ ಸ್ಪರ್ದೆಯಲ್ಲಿ ಪ್ರಥಮ ಸ್ಥಾನ ಗಳಿಸಿರುವಳು
7. ಕಡತೋಕಾದ ಜನತಾ ವಿದ್ಯಾಲಯ ಸಂಯುಕ್ತ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿ ಕಳೆದ ವರ್ಷ ದ್ವಿತೀಯ ಪಿ.ಯು.ಸಿ.ಯಲ್ಲಿ 7ನೇ ರ‍್ಯಾಂಕ ಪಡೆದಿರುತ್ತಾನೆ.
8. ಶಿರಾಲಿಯ ಜನತಾ ವಿದ್ಯಾಲಯ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿ ಕಳೆದ ವರ್ಷ ಲಾಂಗ ಜಂಪ ಸ್ಪರ್ದೆಯಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೇದಿರುವನು.
9. ಶಿರಾಲಿಯ ಜನತಾ ವಿದ್ಯಾಲಯ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಕುಮಾರ ಗಣಪತಿ ನಾಯ್ಕ ಇವರು ಪೋಲವಾಲ್ಟನಲ್ಲಿ ರಾಜ್ಯಮಟ್ಟದಲ್ಲಿ ತೃತೀಯ ಸ್ಥಾನ ಪಡೆದಿರುತ್ತಾನೆ.

10. ಪಿ.ಎಂ.ಹೈಸ್ಕೂಲಿನ ವಿದ್ಯಾರ್ಥಿನಿ ಕುಮಾರಿ ವಿನಂತಿ ಶ್ರೀಧರ ನಾಯ್ಕ ಇವರು ರಾಜ್ಯ ಮಟ್ಟದಲ್ಲಿ Young Ecologist ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಪಡೆದು ರಾಷ್ಟ್ರಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದ್ದಾಳೆ.
11. ಜನತಾ ವಿದ್ಯಾಲಯ, ದಾಂಡೇಲಿ ಹೈಸ್ಕೂಲಿನ ವಿದ್ಯಾರ್ಥಿನಿ ಕುಮಾರಿ ರಾಜೇಶ್ವರಿ ಎಮ್.ಹಾರ್ವಾಡೇಕರ ಇವರು ಕಳೆದ ವರ್ಷ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ರಾಜ್ಯಕ್ಕೆ 3ನೇ ಸ್ಥಾನ ಗಳಿಸಿರುತ್ತಾರೆ.
12. ಜನತಾ ವಿದ್ಯಾಲಯ, ದಾಂಡೇಲಿಯ ವಿದ್ಯಾರ್ಥಿನಿ ದೀಕ್ಷಾ ಭಂಡಾರಿ ಇವರು ರಾಜ್ಯ ಮಟ್ಟದ ವಿಜ್ಞಾನ ಚಿಂತನ ಪರೀಕ್ಷೆಯಲ್ಲಿ ಬಂಗಾರದ ಪದಕ ಪಡೆದಿರುತ್ತಾಳೆ.
13. ಜನತಾ ವಿದ್ಯಾಲಯ, ಮಿರ್ಜಾನ–ಕೋಡಕಣಿ ಶಾಲೆಯ 12 ವಿದ್ಯಾರ್ಥಿಗಳು Scouts and Guides ನಲ್ಲಿ ಭಾಗವಹಿಸಿ Punjab ರಾಜ್ಯ ದಲ್ಲಿ ಏರ್ಪಡಿಸಲಾಗಿದ್ದ National Integration Camp 2011-2012 ರಲ್ಲಿ ಅತಿ ಉನ್ನತ ಪ್ರಶಸ್ತಿ ಪಡೆದಿರುವರು. ಇದೇ ಶಾಲೆಯ 16 ವಿದ್ಯಾರ್ಥಿಗಳು ರಾಜ್ಯ ಮಟ್ಟದ ಸ್ಪರ್ಧೆಯಲ್ಲಿ ಬಹುಮಾನ ಗಳಿಸಿದ್ದಾರೆ. 2010–11ರಲ್ಲಿ 15 ವಿದ್ಯಾರ್ಥಿಗಳು ಕರ್ನಾಟಕ ಸರಕಾರದ ರಾಜ್ಯಪಾಲರ ಪ್ರಶಸ್ತಿ ಪಡೆದಿರುವದು ಉಲ್ಲೇಖನೀಯ.
14. ಎಸ್.ಕೆ.ಪಿ.ಹೈಸ್ಕೂಲಿನ ವಿದ್ಯಾರ್ಥಿನಿ ಕುಮಾರಿ ಸುಧಾ ಎಮ್.ಗೌಡ ಇವರು ಹೈಜಂಪನಲ್ಲಿ ರಾಜ್ಯಕ್ಕೆ ತೃತೀಯ ಸ್ಥಾನ ಪಡೆದಿರುವರು
15. ಜನತಾ ವಿದ್ಯಾಲಯ, ಅನಿಗೋಡ ಶಾಲೆಯ ವಿದ್ಯಾರ್ಥಿ ಕುಮಾರ ಅನಿಲ ಎಮ್.ಹೆಗಡೆ ಇವರು 2011ರಲ್ಲಿ ಜರುಗಿದ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇಕಡಾ 97.28 ಅಂಕ ಪಡೇದು ಹೊನ್ನಾವರ ತಾಲೂಕಿಗೆ ತೃತೀಯ ಸ್ಥಾನ ಸಂಪಾದಿಸಿದ್ದಾರೆ. ಹಾಗೂ ಕನ್ನಡ ವಿಷಯದಲ್ಲಿ 125 ಅಂಕ ಪಡೆದು ಕನ್ನಡ ಅಭಿವೃದ್ಧಿ ಪ್ರಾಧಿಕಾರದಿಂದ ಬಹುಮಾನ ಗಳಿಸಿರುವರು.

## 8. ಅನುಮೋದಿತ ಹುದ್ದೆಗಳಲ್ಲಿ ನೇಮಕಾತಿ ಹೊಂದಿದ ಶಿಕ್ಷಕರ ಹಾಗೂ ಖಾಲಿ ಇರುವ ಹುದ್ದೆಗಳ ಕುರಿತು

2011–2012ನೇ ಸಾಲಿನಲ್ಲಿ ಜನತಾ ವಿದ್ಯಾಲಯ, ದಾಂಡೇಲಿ ಮತ್ತು ಕುಳವೆ–ಬರೂರ ಶಾಲೆಯಲ್ಲಿ ಖಾಲಿ ಇರುವ ಅನುಮೋದಿತ ಹುದ್ದೆಗಳ ನೇಮಕಾತಿಗೆ ಶಿಕ್ಷಣ ಇಲಾಖೆಯಿಂದ ಅನುಮೋದನೆ ಪಡೆದು 6 ಶಿಕ್ಷಕರ ನೇಮಕಾತಿಯ ಕುರಿತು ದಿನಾಂಕ 08–07–2012ರಂದು ಸಂದರ್ಶನ ನಡೆಸಿ ನೇಮಕಾತಿ ಅನುಮೋದನೆಗಾಗಿ ಪ್ರಸ್ತಾವನೆಯನ್ನು ಇಲಾಖೆಗೆ ಸಲ್ಲಿಸಲಾಗಿದೆ. ಇನ್ನು ಒಂದು ತಿಂಗಳಲ್ಲಿ ಅವರು ಸೇವೆಗೆ ಹಾಜರಾಗಲಿದ್ದಾರೆ. ಶೈಕ್ಷಣಿಕ ಜಿಲ್ಲೆ ಕಾರವಾರಕ್ಕೆ ಸಂಬಂಧಿಸಿದ ಡಿಸೆಂಬರ 2008ರ ವರೆಗೆ ಖಾಲಿ ಇರುವ ಒಟ್ಟೂ 6 ಶಿಕ್ಷಕರ ಹುದ್ದೆಗಳ ನೇಮಕಾತಿ ಪ್ರಸ್ತಾವನೆ ಈಗ ಮಾನ್ಯ ಆಯುಕ್ತರ ಕಛೇರಿ ಧಾರವಾಡದಲ್ಲಿದ್ದು ಸಧ್ಯದಲ್ಲಿಯೆ ಆಯುಕ್ತರಿಂದ ನೇಮಕಾತಿಗೆ ಅನುಮೋದನೆ ದೊರೆಯಲಿದೆ.

ಪಿ.ಎಂ.ಪದವಿ ಪೂರ್ವ ಕಾಲೇಜು ಸ್ಥಾಪನೆಯಾಗಿ ಇಂದಿಗೆ 18 ವರ್ಷಗಳಾಗಿವೆ. ಸರ್ಕಾರದಿಂದ ಮಾನ್ಯತೆ ಪಡೆದು ಅನುದಾನ ರಹಿತವಾಗಿ 1993–94ನೇ ಸಾಲಿನಲ್ಲಿ ಪ್ರಾರಂಭಿಸಿದ ಸಂಸ್ಥೆ. 2010 ರಲ್ಲಿ ಸರಕಾರದ ಅನುದಾನ ನೀತಿಗೆ ಒಳಪಡಬೇಕಾಗಿತ್ತು. ಆದರೆ ಎರಡು ವರ್ಷ ಕಳೆದರೂ ಕೂಡಾ ಇದುವರೆಗೆ ಸರ್ಕಾರ ಅನುದಾನಕ್ಕೆ ಈ ಕಾಲೇಜನ್ನು ಒಳಪಡಿಸದೇ ಇರುವದರಿಂದ ಕಾಲೇಜು ನಡೆಸುವದು ಟ್ರಸ್ಟಿಗೆ ಆರ್ಥಿಕವಾಗಿ ಬಹಳ ಕಷ್ಟದಾಯಕವಾಗಿದೆ. ಅನುದಾನ ನೀಡುವ ಪ್ರಕ್ರಿಯೆಯು ಎಲ್ಲ ಹಂತಗಳು ಮುಗಿದಿದ್ದರು ರಾಜ್ಯ ಸರಕಾರ ವಿಳಂಬ ನೀತಿಯಿಂದ ಇದುವರೆಗೆ ಆದೇಶ ಹೊರಡಿಸಿರುವದಿಲ್ಲ. ಅನುಮೋದನೆಯ ಆದೇಶ ಸರ್ಕಾರ ನೀಡಬಹುದೆಂಬ ನಿರೀಕ್ಷಣೆಯಲ್ಲಿದ್ದೇವೆ.

ಕರ್ನಾಟಕ ಸರಕಾರದವರು 2001 ರಲ್ಲಿ ಪಿ.ಯು.ಸಿ. ವಿಭಾಗವನ್ನು ಪದವಿ ವಿಭಾಗದಿಂದ ಪ್ರತ್ಯೇಕಗೊಳಿಸಿ ಆದೇಶ ಹೊರಡಿಸಿದ್ದರು. ಆ ಪ್ರಕಾರ ದಿವೇಕರ ಪದವಿ ಪೂರ್ವ ಕಾಲೇಜು ಹಾಗೂ ಗೋಖಲೆ ಸೆಂಟೆನರಿ ಪದವಿ ಪೂರ್ವ ಕಾಲೇಜನ್ನು ಪದವಿ ಕಾಲೇಜಿನಿಂದ ಪ್ರತ್ಯೇಕಿಸಲಾಗಿತ್ತು. ಈ ಕಾಲೇಜುಗಳಿಗೆ ಸರ್ಕಾರ ಇದುವರೆಗೆ ಉಪನ್ಯಾಸಕರನ್ನು ನೇಮಿಸಿಕೊಳ್ಳಲು ಅನುಮತಿ ನೀಡಿರುವದಿಲ್ಲ. ಈ ಕಾಲೇಜುಗಳಿಗೆ ಬೇಕಾಗುವ ಅಧ್ಯಾಪಕರನ್ನು 2001 ರಿಂದ ಅಂದರೆ ಕಳೆದ 11 ವರ್ಷಗಳಿಂದ ಆಡಳಿತ ಮಂಡಳಿಯವರೇ ತಾತ್ಕಾಲಿಕವಾಗಿ ಉಪನ್ಯಾಸಕರನ್ನು ನೇಮಿಸಿಕೊಂಡು ಇದುವರೆಗೆ ಅವರ ವೇತನ ನೀಡುತ್ತ ಬಂದಿದೆ. ಈ ರೀತಿ ಕಾಲೇಜನ್ನು ನಡೆಸಿಕೊಂಡು ಬರುವದು ಆಡಳಿತ ಮಂಡಳಿಗೆ ಅತಿ ದೊಡ್ಡ ಸಮಸ್ಯೆಯಾಗಿದೆ. ಕಳೆದ ವರ್ಷ ಜಿ.ಸಿ.ಪದವಿ ಪೂರ್ವ ಕಾಲೇಜ್, ದಿವೇಕರ ಪದವಿ ಪೂರ್ವ ಕಾಲೇಜ ಹಾಗೂ ಪಿ.ಎಂ.ಪದವಿ ಪೂರ್ವ ಕಾಲೇಜಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಟ್ರಸ್ಟಿನಿಂದ ನೀಡಿದ ಒಟ್ಟು ವೇತನ ರೂ.7,31,830 ಕರ್ನಾಟಕ ಸರ್ಕಾರ ಹುದ್ದೆಗಳನ್ನು ತುಂಬಲು ಅನುಮತಿ ನೀಡುವದಾಗಿ ಹೇಳುತ್ತಿದ್ದರು ಇದುವರೆಗೆ ನೀಡದಿರುವದು ತುಂಬಾ ತೊಂದರೆಗೆ ಈಡು ಮಾಡಿದೆ.

ಗೋಖಲೆ ಸೆಂಟೆನರಿ ಪದವಿ ಪೂರ್ವ ಕಾಲೇಜ ಹಾಗೂ ದಿವೇಕರ ಪದವಿ ಪೂರ್ವ ಕಾಲೇಜಿನಲ್ಲಿ ಖಾಲಿ ಇರುವ ಒಟ್ಟು 12 ಉಪನ್ಯಾಸಕರ ಹುದ್ದೆಗೆ ನೇಮಕಾತಿ ಮಾಡಿಕೊಳ್ಳುವ ಪ್ರಸ್ತಾವನೆ ಇಲಾಖೆಗೆ ಸಲ್ಲಿಸಲಾಗಿದ್ದು ಅದರಲ್ಲಿ 9 ಹುದ್ದೆಗಳಿಗೆ ಅನುಮೋದನೆ ದೊರೆತು 3 ವರ್ಷಗಳಾದರೂ ಸರ್ಕಾರ ಇದುವರೆಗೆ ನೇಮಕಾತಿಗೆ ಅನುಮತಿ ನೀಡಿರುವದಿಲ್ಲ. ಸರ್ಕಾರ ಈ ಹುದ್ದೆಗಳಿಗೆ ಆದಷ್ಟು ಬೇಗನೆ ನೇಮಕಾತಿ ಮಾಡಲು ಅನುಮತಿ ನೀಡಿದರೆ ಆಡಳಿತ ಮಂಡಳಿಯ ಆರ್ಥಿಕ ಹೊರೆ ಸ್ವಲ್ಪ ಮಟ್ಟಿಗೆ ಕಡಿಮೆಯಾಗಬಹುದೆಂದು ಆಶಿಸಲಾಗದೆ. ಸರ್ಕಾರಿಂದ ಅನುಮತಿ ಪಡೆಯಲು ಪ್ರಯತ್ನ ಮುಂದುವರೆದಿದೆ. ಸರ್ಕಾರ ಕೂಡಲೆ ಹುದ್ದೆಗಳ ನೇಮಕಾತಿಗೆ ಅನುಮೋದನೆ ನೀಡಬೇಕೆಂದು ಈ ಮೂಲಕ ವಿನಂತಿಸುತ್ತೇನೆ. ಸರಕಾರದ ವಿಳಂಬ ನೀತಿ ಇದೇ ರೀತಿ ಮುಂದುವರೆದರೆ ಇನ್ನು ಮುಂದೆ ಟ್ರಸ್ಟಿಗೆ ಪಿ.ಯು.ಕಾಲೇಜುಗಳನ್ನು ನಡೆಸಿಕೊಂಡು ಹೋಗುವದು ಒಂದು ಸಮಸ್ಯೆಯಾಗಬಹುದು.

ಈ ಬಗ್ಗೆ ಎಲ್ಲ ಆಡಳಿತ ಮಂಡಳಿಗಳು ಫೆಡರೇಶನ ಮೂಲಕ ಹೊರಾಟ ಮಾಡಿ ಸರಕಾರದಿಂದ ಸಮಸ್ಯೆ ಬಗೆಹರಿಸಿಕೊಳ್ಳಬೇಕೆಂದು ಆಡಳಿತ ಮಂಡಳಿಯಲ್ಲಿ ಹಾಗೂ ಅಧ್ಯಕ್ಷರಲ್ಲಿ ವಿನಂತಿಸುತ್ತೇನೆ.

## 9. ಟ್ರಸ್ಟು ಪ್ರಕಟಿಸಿದ ಪುಸ್ತಕ

1. ಡಾ.ದಿನಕರ ದೇಸಾಯಿಯವರ ಜನ್ಮ ಶತಾಬ್ದಿ ಸವಿನೆನಪಿಗಾಗಿ ಟ್ರಸ್ಟು ಜನವರಿ, 2008 ರಲ್ಲಿ ಡಾ.ದಿನಕರ ದೇಸಾಯಿಯವರ ಸಮಗ್ರ ಕಾವ್ಯ ಗ್ರಂಥವನ್ನು ಪ್ರಕಟಿಸಿ ಬಿಡುಗಡೆ ಮಾಡಿತ್ತು. ಈ ಪುಸ್ತಕದ ಪ್ರಕಟಣೆಗೆ ಟ್ರಸ್ಟನಿಂದ ರೂ.89,000 ಖರ್ಚು ಮಾಡಲಾಗಿತ್ತು. ಈ ಪುಸ್ತಕದ ಮಾರಾಟದಿಂದ ಟ್ರಸ್ಟಿಗೆ ಇದುವರೆಗೆ ರೂ.1,55,000 ಜಮಾ ಆಗಿರುತ್ತದೆ. ಒಟ್ಟೂ ಮುದ್ರಣ ಮಾಡಿದ 1000 ಪ್ರತಿಗಳಲ್ಲಿ 262 ಪ್ರತಿಗಳು ಶಿಲ್ಕು ಇರುತ್ತದೆ. ಈ ಪ್ರತಿಗಳ ಮಾರಾಟವಾಗಬೇಕಿದೆ.
2. ಈ ಹಿಂದೆ ಟ್ರಸ್ಟು ಪ್ರಕಟಿಸಿದ ಡಾ.ದಿನಕರ ದೇಸಾಯಿಯವರ ಚೌಪದಿ ಪುಸ್ತಕಗಳು ಲಭ್ಯವಿಲ್ಲದ್ದರಿಂದ ಮಾರ್ಚ 2011ರಲ್ಲಿ 'ದಿನಕರ ಚೌಪದಿ' ಪುಸ್ತಕ (ಪರಿಷ್ಕೃತ ಆವೃತ್ತಿ) 1000 ಪ್ರತಿಗಳನ್ನು ಮುದ್ರಿಸಲಾಗಿದೆ. ಈ ಪುಸ್ತಕದ ಪ್ರಕಟಣೆಗೆ ಟ್ರಸ್ಟಿನಿಂದ ರೂ.1,13,426 ಖರ್ಚು ಮಾಡಲಾಗಿದೆ. ಈ ಪುಸ್ತಕಗಳ ಮಾರಾಟದಿಂದ ಇದುವರೆಗೆ ರೂ.1,62,350 ಸಂಗ್ರಹವಾಗಿದೆ. ಮುದ್ರಣ ಮಾಡಿದ 1000 ಪ್ರತಿಗಳಲ್ಲಿ ಈಗ 347 ಪ್ರತಿಗಳು ಉಳಿದಿದೆ. ಅವು ಕೂಡ ಮಾರಾಟವಾಗಬೇಕಿದೆ.

ಈಗ ನಮ್ಮ ಹತ್ತಿರ ಶಿಲ್ಕು ಇರುವ ಒಟ್ಟೂ 636 ಪ್ರತಿಗಳು ಮಾರಾಟವಾದರೆ ಟ್ರಸ್ಟಿಗೆ ಮತ್ತೆ ಒಂದು ಲಕ್ಷ 20 ಸಾವಿರದಷ್ಟು ಹಣ ಸಂದಾಯವಾಗುತ್ತದೆ. ನಮ್ಮ ಸಂಸ್ಥೆಯ ಎಲ್ಲ ಮುಖ್ಯಸ್ಥರಲ್ಲಿ ವಿನಂತಿಸುವದೇನೆಂದರೆ ಶಾಲಾ ಕಾಲೇಜುಗಳಲ್ಲಿ ನಡೆಯುವ ಮಹತ್ವದ ಕಾರ್ಯಕ್ರಮಕ್ಕೆ ಬರುವ ಅತಿಥಿಗಳಿಗೆ ಬಹುಮಾನ ವಿಜೇತರಿಗೆ ನೆನಪಿನ ಕಾಣಿಕೆ ನೀಡುವದಿದ್ದರೆ ಅವರಿಗೆ ಈ ಪುಸ್ತಕವನ್ನು ನೀಡಬಹುದೆಂದು ಮಾನ್ಯ ಅಧ್ಯಕ್ಷರು ಸಲಹೆ ನೀಡಿದ್ದಾರೆ. ಈ ಎರಡು ಪುಸ್ತಕಗಳ ಮುಖಬೆಲೆ ಕೂಡಿ ರೂ.650 ಆಗುತ್ತದೆ. ಅದನ್ನು ಸಂಸ್ಥೆಗಳಿಗೆ ಕೇವಲ ರೂ.400 ಕ್ಕೆ ನೀಡಲಾಗುವದು. ಇದರ ಪ್ರಯೋಜನ ಎಲ್ಲರೂ ಪಡೆಯಬೇಕಾಗಿ ಕೋರಿಕೆ. ಬರುವ ವರ್ಷ ಬಾಕಿ ಇರುವ ಎಲ್ಲ ಪ್ರತಿಗಳು ಮಾರಾಟವಾಗುವಂತೆ ಸಹಕರಿಸಲು ಕೋರಲಾಗಿದೆ.

ಈ ಗ್ರಂಥ ಪ್ರಕಟಿಸುವಲ್ಲಿ ಹಾಗೂ ಮಾರಾಟ ಮಾಡುವಲ್ಲಿ ಶ್ರೀ ವಿಷ್ಣು ನಾಯ್ಕರು ತುಂಬಾ ಶ್ರಮಿಸಿದ್ದಾರೆ ಈ ಎರಡು ಪುಸ್ತಕಗಳ ಒಟ್ಟೂ 600 (300+300) ಪ್ರತಿಯನ್ನು ಕರ್ನಾಟಕ ಸರಕಾರದ ಗ್ರಂಥಾಲಯ ಇಲಾಖೆಯವರು ಖರೀದಿಸುವಲ್ಲಿ ವಿಶೇಷ ಪ್ರಯತ್ನ ಮಾಡಿದ್ದಾರೆ. ಹಾಗೂ ಅವರೂ ಕೂಡಾ ವೈಯಕ್ತಿಕವಾಗಿ 232 ಪ್ರತಿಗಳನ್ನು ಮಾರಾಟ ಮಾಡಿ ಟ್ರಸ್ಟಿಗೆ ಹಣ ಜಮಾ ಮಾಡಿರುತ್ತಾರೆ. ಅವರಿಗೆ ಟ್ರಸ್ಟಿನ ಪರವಾಗಿ ಅಭಿನಂದಿಸಿ ಕೃತಜ್ಞತೆ ಸಲ್ಲಿಸುತ್ತಿದ್ದೇನೆ.

## 10. ಆಫೀಸ ಹಾಗೂ ಲೆಕ್ಕಪತ್ರ ನಿರ್ವಹಣೆಯ ಕಾರ್ಯಗಾರ

ದಿನಾಂಕ 09–07–2011ರ ಕೆನರಾ ವೆಲ್‌ಫೆರ್ ಟ್ರಸ್ಟಿನ ಸಂಸ್ಥೆಗಳ ಮುಖ್ಯಸ್ಥರ ಸಭೆಯಲ್ಲಿ ನಿರ್ಣಯಿಸಿದಂತೆ, ಕೆನರಾ ವೆಲ್‌ಫೆರ್ ಟ್ರಸ್ಟಿನ ಆಶ್ರಯದಲ್ಲಿ ದಿನಾಂಕ 20–08–2011 ರಂದು ಪಿ.ಎಂ. ಹೈಸ್ಕೂಲಿನಲ್ಲಿ ಟ್ರಸ್ಟಿನ ಎಲ್ಲ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರಿಗೆ ಹಾಗು ಆಫೀಸ ಸಿಬ್ಬಂದಿಯವರಿಗೆ ಒಂದು ದಿನದ ಆಫೀಸ ಹಾಗೂ ಲೆಕ್ಕಪತ್ರ ನಿರ್ವಹಣೆಯ ಕಾರ್ಯಗಾರವನ್ನು ನಡೆಸಲಾಯಿತು. ಈ ಕಾರ್ಯಗಾರದಲ್ಲಿ ಎಲ್ಲ ಶಿಕ್ಷಣ ಸಂಸ್ಥೆಯ ಮುಖ್ಯಸ್ಥರು ಹಾಗೂ ಆಫೀಸ ಸಿಬ್ಬಂದಿಯವರು ಭಾಗವಹಿಸಿದ್ದರು. ಈ ಕಾರ್ಯಗಾರದಲ್ಲಿ ಅವರಿಗೆ ಆಫೀಸ ಕಾರ್ಯನಿರ್ವಹಣೆಯ ಕುರಿತು, (Uniform Accounting System) ಏಕರೂಪದ ಲೆಕ್ಕಪತ್ರ ನಿರ್ವಹಣೆ ಕುರಿತು, ಕರ್ನಾಟಕ ನಾಗರಿಕ ಸೇವಾ ನಿಯಮಗಳ ಕುರಿತು ಮಾಹಿತಿ ನೀಡಲಾಯಿತು. ಟ್ರಸ್ಟಿನ ಆಡಳಿತಾಧಿಕಾರಿಗಳಾದ ಶ್ರೀ ಕೇ.ವಿ.ಶೆಟ್ಟಿಯವರು ಈ ಕಾರ್ಯಗಾರ ನಡೆಸಿಕೊಟ್ಟರು. ಅವರಿಗೆ ಸಹಾಯಕರಾಗಿ ಶ್ರೀ ಪ್ರಶಾಂತ ರಾವ್, ಶ್ರೀ ರಾಜು ನಾಯ್ಕ, ಶ್ರೀ ದಾಮೋದರ ಜಿ.ನಾಯ್ಕ ಮತ್ತು ಶ್ರೀಮತಿ ಮೀನಾಕ್ಷಿ ನಾಯ್ಕ ಅವರು ಕಾರ್ಯ ನಿರ್ವಹಿಸಿದರು.

ಪಿ.ಎಂ.ಪ್ರೌಢ ಶಾಲೆಯ ಪ್ರಾಚಾರ್ಯರಾದ ಶ್ರೀ ರವೀಂದ್ರ ಕೇಣಿಯವರು ಕಾರ್ಯಕ್ರಮ ನಡೆಸಲು ಎಲ್ಲ ರೀತಿಯ ಸಹಕಾರ ನೀಡಿ ಕಾರ್ಯಕ್ರಮದ ಯಶಸ್ವಿಗೆ ಕಾರಣರಾದರು. ಅವರಿಗೆ ಸಂಸ್ಥೆಯ ಪರವಾಗಿ ಧನ್ಯವಾದ ಸಲ್ಲಿಸುತ್ತೇನೆ.

ಕಾರ್ಯಕ್ರಮದ ಕೊನೆಯಲ್ಲಿ ಸಂಸ್ಥೆಯ ಎಲ್ಲ ಮುಖ್ಯಸ್ಥರಿಗೆ ಅವರವರ ಸಂಸ್ಥೆಗೆ ಬೇಕಾದಷ್ಟು ಲೆಕ್ಕಪತ್ರ ಬರೆಯುವ ಪುಸ್ತಕ, ಲೆಡ್ಜರ ಇತ್ಯಾದಿ ಟ್ರಸ್ಟಿನ ವತಿಯಿಂದ ಪ್ರಿಂಟು ಮಾಡಿಸಿ ಯೋಗ್ಯ ದರದಲ್ಲಿ ನೀಡಲಾಯಿತು. ಸಂಸ್ಥೆಯ ಮುಖ್ಯಸ್ಥರು ತಮ್ಮ ತಮ್ಮ ಸಂಸ್ಥೆಯಲ್ಲಿ ಲೆಕ್ಕಪತ್ರ ಹಾಗೂ ಆಫೀಸ ಕಾರ್ಯ ನಿರ್ವಹಣೆ ಕಟ್ಟುಕಟ್ಟಾಗಿ ನಿರ್ವಹಿಸುವಂತೆ ಲಕ್ಷ ವಹಿಸಲು ಈ ಮೂಲಕ ವಿನಂತಿಸಲಾಗಿದೆ.

## 11. ಟ್ರಸ್ಟಿನ ತ್ರೈಮಾಸಿಕ ಸಂಚಿಕೆ

ಕೆನರಾ ವೆಲ್‌ಫೆರ್ ಟ್ರಸ್ಟು ಜನವರಿ 2007 ರಿಂದ ತ್ರೈಮಾಸಿಕ ಸಂಚಿಕೆ “ಸಂದೇಶ ಪತ್ರ” ವನ್ನು ಪ್ರಕಟಿಸಿಸುತ್ತ ಬಂದಿದ್ದು ಇದುವರೆಗೆ ಒಟ್ಟೂ 13 ಸಂಚಿಕೆಯನ್ನು ಹೊರತರಲಾಗಿದೆ. ತ್ರೈಮಾಸಿಕ ಸಂಚಿಕೆಯಲ್ಲಿ ಮುಖ್ಯವಾಗಿ ಸಂಸ್ಥೆಗಳ ಪರಿಚಯ ನೀಡುವದು, ಪ್ರಶಸ್ತಿ ವಿಜೇತರ ಬಗ್ಗೆ ಮಾಹಿತಿ, ಶಾಲಾ ಕಾಲೇಜುಗಳಲ್ಲಿ ನಡೆಯುವ ಶೈಕ್ಷಣಿಕ ಕಾರ್ಯಾಗಾರದ ಕುರಿತು ಮಾಹಿತಿ, ವಿದ್ಯಾರ್ಥಿಗಳ ಪಠ್ಯ ಮತ್ತು ಪಠ್ಯೇತರ ವಿಭಾಗದಲ್ಲಿ ತೋರಿಸಿದ ವಿಶೇಷ ಸಾಧನೆ, ಸೇವಾ ನಿವೃತ್ತಿ ಹೊಂದಿದವರ ಮಾಹಿತಿ, ಮಹತ್ವದ

ಸುತ್ತೋಲೆ ಮತ್ತು ಸರ್ಕಾರಿ ಆದೇಶದ ಮಾಹಿತಿ, ಸೇವಾ ಜೇಷ್ಠತೆ ಯಾದಿ, ಶಿಕ್ಷಣಕ್ಕೆ ಸಂಬಂಧಿಸಿದ ಹೊಸ ವಿಚಾರಗಳು ಮುಂತಾದ ವಿವರಗಳನ್ನು ಒಳಗೊಂಡಿರುತ್ತದೆ. ಈ ಕುರಿತು ಸಂಸ್ಥೆಯ ಮುಖ್ಯಸ್ಥರು ಕಾಲಕಾಲಕ್ಕೆ ಸರಿಯಾಗಿ ಮಾಹಿತಿಯನ್ನು ಟ್ರಸ್ಟಿನ ಕಾರ್ಯಾಲಯಕ್ಕೆ ಸಲ್ಲಿಸುತ್ತಿರಬೇಕು. ಅಂದರೆ ಮಾತ್ರ ಸಕಾಲದಲ್ಲಿ ಸಂದೇಶ ಪತ್ರ ಪ್ರಕಟಿಸಲು ಸಾಧ್ಯವಾಗುತ್ತದೆ. ಈ ದಿಶೆಯಲ್ಲಿ ಎಲ್ಲ ಸಂಸ್ಥೆಯ ಮುಖ್ಯಸ್ಥರು ಸರಿಯಾಗಿ ಸ್ಪಂದಿಸಿದರೆ ಮಾತ್ರ ಟ್ರಸ್ಟು ಪ್ರಕಟಿಸುತ್ತಿರುವ ತ್ರೈಮಾಸಿಕ ಸಂದೇಶ ಪತ್ರದ ಉಪಯೋಗ ಹಾಗೂ ಸಾರ್ಥಕತೆ ಆಗಲು ಸಾಧ್ಯ. ಕಳೆದ ವರ್ಷ ಮಾರ್ಚ 2011ರಲ್ಲಿ ಸಂದೇಶ ಪತ್ರ ಹೊರತರಲು ವಿಳಂಬವಾಗಿತ್ತು. ಕಳೆದ ವರ್ಷ ನಡೆದ ವಾರ್ಷಿಕ ಸಭೆಯಲ್ಲಿ ಈ ಕುರಿತು ಚರ್ಚಿಸಿ 6 ತಿಂಗಳಿಗೊಂದು ಸಂದೇಶ ಪತ್ರವನ್ನು ಪ್ರಕಟಿಸುವಂತೆ ನಿರ್ಣಯಿಸಲಾಗಿತ್ತು. ಈ ಸಂದೇಶ ಪತ್ರದಲ್ಲಿ ಅಳವಡಿಸುವ ವಿಷಯದ ಕುರಿತು ಕಾಲಕಾಲಕ್ಕೆ ಮಾಹಿತಿಯನ್ನು ಕೆಲವು ಸಂಸ್ಥೆಯ ಮುಖ್ಯಸ್ಥರು ಸಲ್ಲಿಸದೇ ಇದ್ದುದರಿಂದ 14ನೇ ಸಂದೇಶ ಪತ್ರ ಹೊರ ತರಲು ವಿಳಂಬವಾಗಿದೆ. ಸಂಸ್ಥೆಯ ಮುಖ್ಯಸ್ಥರು ಕಾಲಕಾಲಕ್ಕೆ ತಮ್ಮ ತಮ್ಮ ಸಂಸ್ಥೆಗಳ ಮಾಹಿತಿಯನ್ನು ತಾವಾಗಿಯೇ ಸಲ್ಲಿಸಿದರೆ ಸಕಾಲದಲ್ಲಿ ಸಂದೇಶ ಪತ್ರ ಹೊರತರಲು ಸಾಧ್ಯವಿದೆ. ಆದ್ದರಿಂದ ಸಂಸ್ಥೆಯ ಎಲ್ಲ ಮುಖ್ಯಸ್ಥರು ತಮ್ಮತಮ್ಮ ಸಂಸ್ಥೆಗೆ ಸಂಬಂಧಿಸಿದ ಮಾಹಿತಿಯನ್ನು ಕೂಡಲೆ ಸಲ್ಲಿಸಲು ಇನ್ನೊಮ್ಮೆ ಕೋರಲಾಗಿದೆ. ಎಲ್ಲ ಸಂಸ್ಥೆಗಳು ಸಕಾಲದಲ್ಲಿ ಮಾಹಿತಿಯನ್ನು ನೀಡದಿದ್ದರೆ ತ್ರೈಮಾಸಿಕ ವರದಿಯನ್ನು ಇನ್ನು ಮುಂದು ನಿಯಮಿತ ಅವಧಿಯಲ್ಲಿ ಹೊರತರಲು ಅಸಾಧ್ಯವಾಗಬಹುದು. ಈ ಸಂದೇಶ ಪತ್ರ ಪ್ರಕಟಿಸುವ ಹಿಂದೆ ಇರುವ ಅಧ್ಯಕ್ಷರ ಸಾಮಾಜಿಕ ಕಳಕಳಿ ಹಾಗೂ ಪ್ರಯತ್ನವನ್ನು ತಾವೆಲ್ಲರೂ ಅರ್ಥ ಮಾಡಿಕೊಳ್ಳಬೇಕು.

## 12. ಟ್ರಸ್ಟಿನ ವಿವಿಧ ಕೇಂದ್ರಗಳಲ್ಲಿ ನಡೆದ ಅಭಿವೃದ್ಧಿ ಹಾಗೂ ಇತರ ಕೆಲಸಗಳು

1) ಜಿ.ಸಿ.ಕಾಲೇಜಿನಲ್ಲಿ 15 ಕೆ.ವಿ. ಜನರೇಟರ ಅಳವಡಿಸಲಾಗಿದೆ. 8 ಶೌಚಾಲಯಗಳನ್ನು ನಿರ್ಮಿಸಲಾಗಿದೆ. ಹಾಗು ಭೌತಶಾಸ್ತ್ರ, ರಸಾಯನಶಾಸ್ತ್ರ ಪ್ರಯೋಗಾಲಯ ಅಭಿವೃದ್ಧಿಪಡಿಸಲಾಗಿದೆ. ಈ ಎಲ್ಲ ಕಾರ್ಯಗಳಿಗೆ ಒಟ್ಟು ರೂ.12,89,273 ಖಾರ್ಚಾಗಿದ್ದು ಈ ಹಣವನ್ನು ಯು.ಜಿ.ಸಿ. ಅನುದಾನದಿಂದ ಹಾಗೂ ಸ್ಟೇಟ್ ಬ್ಯಾಂಕ ಆಪ್ ಇಂಡಿಯಾದ ನೆರವಿನಿಂದ ಮಾಡಿಸಲಾಗಿದೆ.

2) ಬಿ.ಸಿ.ಎ. ಕಾಲೇಜಿನ ಸಾಯನ್ಸ ಲ್ಯಾಬೋರೆಟರಿಗೆ ಒಟ್ಟೂ ರೂ.94,350 ಖರ್ಚು ಮಾಡಾಲಾಗಿದೆ. ಈ ಹಣವನ್ನು ಕಾಲೇಜ ಮೆನೆಜಮೆಂಟ ಖಾತೆಯಿಂದ ನಿರ್ವಹಿಸಲಾಗಿದೆ.

3) ಜನತಾ ವಿದ್ಯಾಲಯ ಸಂಯುಕ್ತ ಪದವಿ ಪೂರ್ವ ಕಾಲೇಜ, ಕಡತೋಕಾದಲ್ಲಿ ಆಟದ ಮೈದಾನ ಅಭಿವೃದ್ಧಿ, ಬಾವಿ ರಿಪೇರಿ ಹಾಗೂ ಶೌಚಾಲಯ ನಿರ್ಮಾಣಕ್ಕೆ ಒಟ್ಟೂ ರೂ.4,50,000 ಖರ್ಚು ಮಾಡಲಾಗಿದೆ. ಈ ಹಣವನ್ನು ಜಿಲ್ಲಾ ಪಂಚಾಯತ ಅನುದಾನ ತಾಲೂಕ ಪಂಚಾಯತ ಅನುದಾನದಿಂದ ಮಾಡಲಾಗಿದೆ.

4) ಜನತಾ ವಿದ್ಯಾಲಯ ಸಂಯುಕ್ತ ಪದವಿ ಪೂರ್ವ ಕಾಲೇಜ, ಶಿರಾಲಿಯ ಗಾರ್ಡನ ಅಭಿವೃದ್ದಿ, ಕಾಲೇಜು ವಿಭಾಗದ ಒಂದು ವರ್ಗದ ಕೋಣೆ ನಿರ್ಮಾಣ, ಪಿಠೋಪಕರಣ ಖರೀದಿ ಹೀಗೆ ಒಟ್ಟೂ ಅಭಿವೃದ್ದಿ ಕಾರ್ಯಗಳಿಗೆ ರೂ.4,16,000 ಖರ್ಚು ಮಾಡಲಾಗಿದೆ. ಈ ಹಣವನ್ನು ಆಡಳಿತ ಮಂಡಳಿಯಿಂದ ನಿರ್ವಹಿಸಲಾಗಿದೆ.

5) ಜನತಾ ವಿದ್ಯಾಲಯ ಬಾಡ–ಕಾಗಾಲ ಶಾಲೆಯ ಬಾವಿ ದುರಸ್ತಿ ಪಂಪಸೆಟ ಹಾಗೂ ಉಪಕರಣ ಖರೀದಿಯ ಬಗ್ಗೆ ರೂ.30,500 ಖರ್ಚು ಮಾಡಲಾಗಿದೆ. ಈ ಹಣವನ್ನು ಗ್ರಾಮಪಂಚಾಯತ ಹಾಗೂ ದಾನಿಗಳಿಂದ ಭರಿಸಲಾಗಿದೆ.

6) ಜನತಾ ವಿದ್ಯಾಲಯ ಕಡವಾಡ ಶಾಲೆಯ ಆವಾರ ಗೋಡೆ, ರಸ್ತೆ, ನೀರಿನ ವ್ಯವಸ್ಥೆ, ಶೌಚಾಲಯ ನಿರ್ಮಾಣ ಹಾಗೂ ಗಣಕ ಯಂತ್ರ ಖರೀದಿಗೆ ಒಟ್ಟೂ ರೂ.14,69,031 ಖರ್ಚು ಮಾಡಲಾಗಿದೆ. ಈ ಹಣವನ್ನು ಗ್ರಾಮ ಪಂಚಾಯತ ಕಡವಾಡ ಇವರ ನೆರವಿನಿಂದ ಮಾಡಲಾಗಿದೆ.

7) ಜನತಾ ವಿದ್ಯಾಲಯ, ಕಾಸರಕೋಡ ಶಾಲೆಯ ಶೌಚಾಲಯ ಹಾಗೂ ಇನ್ನಿತರ ರಿಪೇರಿಗಾಗಿ ರೂ.29,239 ಖರ್ಚು ಮಾಡಲಾಗಿದೆ. ಈ ಹಣವನ್ನು ಆಡಳಿತ ಮಂಡಳಿಯ ಖಾತೆಯಿಂದ ಭರಿಸಲಾಗಿದೆ.

8) ಜನತಾ ವಿದ್ಯಾಲಯ ಮಿರ್ಜಾನ ಶಾಲೆಯ ಉದ್ಯಾನವನದ ಸಲುವಾಗಿ ರೂ.65,000 ಖರ್ಚು ಮಾಡಲಾಗಿದೆ. ಈ ಕೆಲಸವನ್ನು ಎಸ್.ಡಿ.ಎಂ.ಸಿ.ಯವರು ನಿರ್ವಹಿಸಿರುತ್ತಾರೆ.

9) ಜನತಾ ವಿದ್ಯಾಲಯ ಬೇಡ್ಕಣಿ ಶಾಲೆಯಲ್ಲಿ ಪಿಠೋಪಕರಣ ಖರೀದಿಗೆ ರೂ.1,18,550 ಖರ್ಚು ಮಾಡಿರುತ್ತಾರೆ. ಈ ಹಣವನ್ನು ತಾಲೂಕಾ ಪಂಚಾಯತ ಅನುದಾನದಿಂದ ಹಾಗೂ ದೇಣಿಗೆಯಿಂದ ಭರಿಸಲಾಗಿದೆ.

10) ಎಸ್.ಕೆ.ಪಿ.ಹೈಸ್ಕೂಲ ಕತಗಾಲ ಶಾಲೆಯ ಗಾರ್ಡನ ಅಭಿವೃದ್ಧಿ, ಊಟದ ಕೋಣೆಗೆ ಟೈಲ್ಸ ಹಾಕುವ ಬಗ್ಗೆ ಒಟ್ಟೂ ರೂ.72,302 ಖರ್ಚು ಮಾಡಲಾಗಿದೆ. ಈ ಹಣವನ್ನು ತಾಲೂಕ ಪಂಚಾಯತ ಅನುದಾನದಿಂದ ಮಾಡಲಾಗಿದೆ.

11) ಜನತಾ ವಿದ್ಯಾಲಯ, ಅನಿಲಗೋಡ ಶಾಲೆಯ ಕಂಪೌಂಡಿಗೆ, ಕುಡಿಯುವ ನೀರಿನ ವ್ಯವಸ್ಥೆಗೆ ಹಾಗೂ ಶೌಚಾಲಯ ರಿಪೇರಿಗೆ ಒಟ್ಟೂ ರೂ.3,34,000 ಖರ್ಚು ಮಾಡಲಾಗಿದೆ, ಈ ಹಣವನ್ನು ಸರ್ಕಾರದ ಉದ್ಯೋಗ ಖಾತ್ರಿ ಯೋಜನೆಯಿಂದ ನಿರ್ವಹಿಸಲಾಗಿದೆ.

12) ಜನತಾ ವಿದ್ಯಾಲಯ, ಕುಳವೆ–ಬರೂರ ಶಾಲೆಯಲ್ಲಿ ಗಣಕ ಯಂತ್ರದ ಕೋಣೆ ನಿರ್ಮಾಣಕ್ಕೆ ರೂ.10,00,000 ಖರ್ಚು ಮಾಡಲಾಗಿದೆ. ಈ ಕಟ್ಟಡಕ್ಕೆ ಶ್ರೀ ರಾಜು ಚಂದ್ರಶೇಖರ, ರಾಜ್ಯ ಸಭಾ ಸದಸ್ಯರ ನಿಧಿಯಿಂದ ಬಂದ ಹಣವನ್ನು ಬಳಸಲಾಗಿದೆ. ಗಂಡು ಮಕ್ಕಳ ಶೌಚಾಲಯ ನಿರ್ಮಿಸಲಾಗಿದೆ ಇದಕ್ಕೆ ರೂ.85,000 ಖರ್ಚಾಗಿದೆ. ಈ ಕಾರ್ಯವನ್ನು ಸ್ಥಳೀಯರ ದೇಣಿಗೆ ಹಾಗೂ ಟ್ರಸ್ಟಿನ ಸಹಾಯದಿಂದ ನಿರ್ವಹಿಸಲಾಗಿದೆ.

13) ಜನತಾ ವಿದ್ಯಾಲಯ ಧಾರೇಶ್ವರ ಶಾಲೆಯ ಪ್ರಾಥಮಿಕ ಶಾಲೆಗೆ 4 ಕೋಣೆಗಳನ್ನು ನಿರ್ಮಿಸಲಾಗಿದೆ. ಇದರಲ್ಲಿ 3 ಕೋಣೆ ನಿರ್ವಹಣೆಗೆ ಶ್ರೀ ಸದಾನಂದ ಶೇಟ ಅವರು ದೇಣಿಗೆಯಾಗಿ ಹಣವನ್ನು ನೀಡಿರುತ್ತಾರೆ. ಒಂದು ಕೋಣೆಗೆ ಬೇಕಾಗುವ ಖರ್ಚು ರೂ.3,00,000 ಆಡಳಿತ ಮಂಡಳಿ ನೀಡಿರುತ್ತದೆ. ಒಟ್ಟೂ ಈ ಕಟ್ಟಡಕ್ಕೆ ಈ ವರ್ಷ ರೂ.9,43,329 ಖರ್ಚಾಗಿರುತ್ತದೆ.

14) ಇಂಗ್ಲೀಷ ಮೀಡಿಯಮ ಸ್ಕೂಲ ದಾಂಡೇಲಿ ಶಾಲೆಯಲ್ಲಿ ಕನ್ನಡ ಪ್ರಥಮಿಕ ಶಾಲೆಯ ಕಟ್ಟಡ ಕೆಲಸಕ್ಕಾಗಿ ಹಾಗೂ ಗ್ರಿಲ್ ಕೂಡ್ರಿಸಲು ರೂ.80,743 ಖರ್ಚು ಮಾಡಲಾಗಿದೆ. ಈ ಹಣವನ್ನು ಆಡಳಿತ ಮಂಡಳಿಯ ಖಾತೆಯಿಂದ ಭರಿಸಲಾಗಿದೆ.

15) ಪಿ. ಎಂ. ಹೈಸ್ಕೂಲ ಅಂಕೋಲಾದಲ್ಲಿ ನಿರ್ಮಿಸಿರುವ ಡಾ. ದಿನಕರ ದೇಸಾಯಿ ಸ್ಮಾರಕ ಆಂಗ್ಲ ಮಾದ್ಯಮ ಶಾಲೆಯ ಕಟ್ಟಡಕ್ಕೆ ರೂ.10,98,230 ಖರ್ಚು ಮಾಡಲಾಗಿದೆ. ಇದಕ್ಕೆ ತಗಲಿದ ಖರ್ಚನ್ನು ಎಮ್.ಎಲ್.ಸಿ. ನಿಧಿಯಿಂದ, ದೇಣಿಗೆ ಸಂಗ್ರಹಣೆಯಿಂದ ಹಾಗೂ ಆಡಳಿತ ಮಂಡಳಿ ನೀಡಿದ ಹಣದಿಂದ ನಿರ್ಮಿಸಲಾಗಿದೆ.


| ಅ. ನಂ. | ಶಾಲೆ/ಕಾಲೇಜಿನ ಹೆಸರು | ತಾತ್ಕಾಲಿಕ ಸಿಬ್ಬಂದಿಗಳಿಗೆ ನೀಡಿದ ವೇತನ | ಟ್ರಸ್ಟಿನಿಂದ ನೀಡಿದ ಮೆಂಟೆನನ್ಸ ಹಣ | ಕಟ್ಟಡ ನಿರ್ಮಾಣ, ಅಬಿವೃದ್ಧಿ ಕಾರ್ಯಕ್ಕೆ ವಿನಿಯೋಗಿಸಿದ ಹಣ |
|---|---|---|---|---|
| | **Degree Colleges** | | | |
| 1. | Gokhale Centenary College, Ankola | 9,60,430 | - | 12,89,273 |
| 2. | Divekar College Of Commerce, Karwar | 4,71,136 | - | 20,58,657 |
| 3. | KWT's College of Education, Dandeli | 8,27,696 | - | - |
| 4 | B.C.A. College, Karwar | 3,65,000 | - | 94,350 |
| | **Junior Colleges** | | | |
| 5 | Gokhale Centenary P.U. College, Ankola | 9,17,855 | - | - |
| 6 | Divekar P.U. Commerce College, Karwar | 5,93,257 | - | - |
| 7 | Janata Vidyalaya Comp. Junior College, Dandeli | 1,25,600 | - | - |
| 8 | Janata Vidyalaya Comp. Junior College, Kadtoka | 60,000 | 7500 | 4,50,000 |
| 9 | Janata Vidyalaya Comp. Junior College, Shirali, Bhatkal | 3,38,400 | 7500 | 2,65,000 |
| 10 | P.M. Comp. Junior College, Ankola | 5,66,220 | - | - |
| 11 | Divekar P.U. Science College, Karwar | 7,30,944 | - | - |

| | | | | |
|---|---|---|---|---|
| | **High Schools** | | | |
| 12 | P. M. High School, Ankola | 2,25,600 | 7500 | 10,98,230 |
| 13 | Janata Vidyalaya, Baad-Kagal, Kumta | 84,800 | 7500 | 30,500 |
| 14 | Janata Vidyalaya, Shirali, Bhatkal | 1,46,025 | - | 1,51,000 |
| 15 | Janata Vidyalaya, Dandeli | 4,13,527 | - | 1,06,114 |
| 16 | Janata Vidyalaya, Kadwad, Karwar | 18,000 | 7500 | 14,69,031 |
| 17 | Janata Vidyalaya, Kasarkod, Honnavar | 44,200 | 7500 | 23,239 |
| 18 | Janata Vidyalaya, Murdeshwar, Bhatkal | 2,79,700 | 7500 | - |
| 19 | Janata Vidyalaya, Mirjan-Kodkani | 81,500 | 7500 | 65000 |
| 20 | Janata Vidyalaya, Kadtoka | 76,000 | - | 4,50,000 |
| 21 | Janata Vidyalaya, Mudga, Karwar | 55,000 | 7500 | - |
| 22 | Janata Vidyalaya, Dhareshwar, Kumta | - | 7500 | 56,096 |
| 23 | Janata Vidyalaya, Bedkani, Siddapur | 47,500 | 7500 | 1,18,550 |
| 24 | S.K.P. High School, Katgal, Kumta | 1,10,100 | 7500 | 72,302 |
| 25 | Janata Vidyalaya, Anilgod, Honnavar | 4500 | 7500 | 3,34,000 |
| 26 | Janata Vidyalaya, Kulve-Baroor, Sirsi | 47,500 | 7500 | 10,85,000 |
| 27 | P.M.Eng. Medium High School,Ankola | 1,50,000 | 7500 | - |
| | **Primary And Pre-Primary Schools** | | | |
| 28 | English/Kannada Medium Pre-Primary & Primary School, Dandeli | 19,48,553 | - | 4,04,943 |
| 29 | Balamandir & Tailoring School Mundgod | 20,000 | - | 8610 |
| 30 | Dr. Dinkar Desai Pre-Primary/ Primary School, Ankola | 7,77,288 | - | - |
| 31 | Janata Vidyalaya Dinkar Pre-Primary/Primary School, Dhareshwar, Kumta | 2,67,985 | - | 9,43,329 |
| 32 | Shrimat Sadyojat Shankarashram Swamiji Balamandir, Shirali, Bhatkal | 82,770 | - | 8,00,000 |
| | **Other Social Service Institutions** | | | |
| 33 | Thakkar Bapa Tailoring School, Ankola | 12,000 | - | - |
| 34 | Trust Office Staff & Dinkar Kalaniketan Music School, Ankola & Karwar | 3,64,500 | - | - |
| | **Total (Rs.)** | **1,12,13,586** | **1,12,500** | **1,13,73,224** |

2011–12ನೇ ಸಾಲಿನಲ್ಲಿ ಟ್ರಸ್ಟು ನಡೆಸುತ್ತಿರುವ ವಿವಿಧ ಶಾಲಾ ಕಾಲೇಜುಗಳ ತಾತ್ಕಾಲಿಕ ನೌಕರರ ಭವಿಷ್ಯ ನಿಧಿಗಾಗಿ ಟ್ರಸ್ಟಿನ ವತಿಯಿಂದ ಪಾವತಿಸಿದ ಒಟ್ಟೂ ಹಣ ರೂ.7,59,425 ಈ ಹಣವನ್ನು ಟ್ರಸ್ಟಿನಿಂದ ಹಾಗೂ ಶಾಲಾ–ಕಾಲೇಜುಗಳ ಆಡಳಿತ ಮಂಡಳಿ ಖಾತೆಯಿಂದ ಭರಿಸಲಾಗಿದೆ.

## ABSTRACT

| | | |
|---|---|---|
| I | ತಾತ್ಕಾಲಿಕ ಸಿಬ್ಬಂದಿಗಳ ವೇತನಕ್ಕೆ | 1,12,13,586 |
| II | ನಿರ್ವಹಣಾ ವೆಚ್ಚಕ್ಕಾಗಿ ನೀಡಿದ ಹಣ | 1,12,500 |
| III | ಅಭಿವೃದ್ಧಿ ಕಾರ್ಯಗಳಿಗೆ ವಿನಿಯೋಗಿಸಿದ್ದು | 1,13,73,224 |
| IV | ಭವಿಷ್ಯನಿಧಿ ವಂತಿಗೆ ಸಂದಾಯ ಮಾಡಿದ್ದು | 7,59,425 |
| V | ಕ್ರೂಗರ ಫೌಂಡೇಶನ ವತಿಯಿಂದ ತಾತ್ಕಾಲಿಕ ಸಿಬ್ಬಂದಿಗಳಿಗೆ ನೀಡಿದ ಹಣ | 4,13,500 |
| | ಒಟ್ಟೂ ರೂ. | 2,38,72,235 |




2011–12ನೇ ಸಾಲಿನಲ್ಲಿ ಅನುದಾನ ರಹಿತ ಸಿಬ್ಬಂದಿ ವೇತನಕ್ಕಗಿ, ಅಭಿವೃದ್ಧಿ ಕಾರ್ಯಗಳಿಗಾಗಿ, ಭವಿಷ್ಯ ನಿಧಿ ವಂತಿಗೆಗಾಗಿ ಹಾಗೂ ಇನ್ನಿತರ ಕಾರ್ಯಕ್ಕಾಗಿ ಒಟ್ಟು ರೂ.2,38,72,235 (ರೂಪಾಯಿ ಎರಡು ಕೋಟಿ ಮೊವತ್ತೆಂಟು ಲಕ್ಷ ಎಪ್ಪತ್ತೆರಡು ಸಾವಿರದ ಎರಡು ನೂರಾ ಮೊವತ್ತೈದು) ಖರ್ಚು ಮಾಡಲಾಗಿದೆ. ಈ ಎಲ್ಲ ಕಾರ್ಯಕ್ಕೆ ಮಾಡಿದ ವೆಚ್ಚವನ್ನು ಟ್ರಸ್ಟು ನಡೆಸುತ್ತಿರುವ ವಿವಿಧ ಕೇಂದ್ರಗಳಲ್ಲಿ ಆಡಳಿತ ಮಂಡಳಿ ಖಾತೆಗೆ ಸಂಗ್ರಹಿಸಿದ ಹಣದಿಂದ, ದಾನಿಗಳಿಂದ ಸಂಗ್ರಹಿಸಿದ ಹಣದಿಂದ, ಜಿಲ್ಲಾ


ಪಂಚಾಯತ, ತಾಲೂಕ ಪಂಚಾಯತ, ಎಂ.ಎಲ್.ಎ., ಎಂ.ಪಿ. ನಿಧಿಯಿಂದ ನೀಡಿದ ಅನುದಾನದ ಹಣದಿಂದ ಹಾಗೂ ಟ್ರಸ್ಟು ನೀಡಿದ ಹಣದಿಂದ ನಿರ್ವಹಿಸಲಾಗಿದೆ. ಈ ಕಾರ್ಯಕ್ಕೆ ದೇಣಿಗೆ ನೀಡಿ ಸಹಕರಿಸಿದ ಎಲ್ಲರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಇನ್ನು ಮುಂದಿನ ದಿನದಲ್ಲಿಯೂ ಸಂಸ್ಥೆಯ ಅಭಿವೃದ್ಧಿ ಕಾರ್ಯಕ್ಕೆ ಇದೇ ರೀತಿಯ ಸಹಕಾರ ದೊರೆಯಲಿ ಎಂದು ಆಶಿಸುತ್ತೇನೆ.

## 13. ಕ್ರುಗರ ಫೌಂಡೇಶನ ಕಾರವಾರ ಇವರು ತಾತ್ಕಾಲಿಕ ಶಿಕ್ಷಕರಿಗೆ ನೀಡಿದ ಸಹಾಯಧನ

ಟ್ರಸ್ಟು ನಡೆಸುತ್ತಿರುವ ಎಲ್ಲ ಶಾಲೆಗಳಲ್ಲಿಯೂ ಶಿಕ್ಷಕರ ಕೊರತೆ ಇದೆ. ಈ ಕೊರತೆ ನೀಗಿಸಲು ಆಡಳಿತ ಮಂಡಳಿಯವರು ಪ್ರತಿ ವರ್ಷ ನೂರಾರು ಶಿಕ್ಷಕರನ್ನು ತಾತ್ಕಾಲಿಕವಾಗಿ ನೇಮಕ ಮಾಡಿಕೊಂಡು ಶಾಲೆಗಳ ಶೈಕ್ಷಣಿಕ ಮಟ್ಟ ಕುಸಿಯದಂತೆ ನೋಡಿಕೊಂಡು ಅವರಿಗೆ ಸಂಭಾವನೆ ನೀಡುತ್ತ ಬಂದಿದೆ. ಅವರಿಗೆ ನೀಡುತ್ತಿರುವ ಸಂಭಾವನೆ ಮೊತ್ತ ಕಡಿಮೆ ಇರುವದನ್ನು ಮನಗಂಡು ಟ್ರಸ್ಟಿನ ಅಧ್ಯಕ್ಷರು 2006–07ನೇ ಸಾಲಿನಿಂದ ಎಲ್ಲ ತಾತ್ಕಾಲಿಕ ಶಿಕ್ಷಕರಿಗೆ ಪ್ರತಿ ತಿಂಗಳು ರೂ.500 ರಂತೆ ಕ್ರುಗರ್ ಫೌಂಡೆಶನ್ ವತಿಯಿಂದ ಸಹಾಯಧನವಾಗಿ ನೀಡುತ್ತ ಬಂದಿದ್ದಾರೆ. 2010–11ನೇ ಸಾಲಿನಲ್ಲಿ ಈ ಸಂಭಾವನೆಯನ್ನು ರೂ.1000 ಕ್ಕೆ ಹೆಚ್ಚಿಸಿರುವರು. ಈ ಸಂಭಾವನೆ ಪಡೆಯುವ ಎಲ್ಲ ಶಿಕ್ಷಕರು ಶಾಲೆಯಲ್ಲಿ ಶೈಕ್ಷಣಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ವಿಶೇಷ ತರಬೇತಿ ನೀಡಿ ಅವರ ಶೈಕ್ಷಣಿಕ ಮಟ್ಟವನ್ನು ಹೆಚ್ಚಿಸುವದು ಇದರ ಮುಖ್ಯ ಉದ್ದೇಶವಾಗಿದೆ. ಈ ಉದ್ದೇಶವನ್ನು ಈಡೇರಿಸಲು ತಾತ್ಕಾಲಿಕ ಸಿಬ್ಬಂದಿಗಳು ಪ್ರಾಮಾಣಿಕವಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಕ್ರುಗರ ಪೌಂಡೇಶನನಿಂದ ಇದುವರೆಗೆ ಸಹಾಯ ಪಡೆದ ಫಲಾನುಭವಿಗಳ ಸಂಖ್ಯೆ ಹಾಗೂ ನೀಡಿದ ಸಹಾಯಧನದ ವಿವರ ಈ ಕೆಳಗಿನಂತೆ ಇದೆ.

| ವರ್ಷ | ಫಲಾನುಭವಿಗಳ ಸಂಖ್ಯೆ | ಕ್ರುಗರ ಫೌಂಡೇಶನ ನೀಡಿದ ಸಹಾಯ ಧನ | ತಾತ್ಕಾಲಿಕ ಶಿಕ್ಷಕರಿಗೆ ನೀಡಿದ ಒಟ್ಟು ಸಂಭಾವನೆ |
|---|---|---|---|
| 2006–2007 | 86 | 3,00,000 | 2,64,500 |
| 2007–2008 | 88 | 3,50,000 | 3,81,500 |
| 2008–2009 | 90 | 4,00,000 | 3,84,000 |
| 2009–2010 | 79 | 3,50,000 | 3,39,500 |
| 2010–2011 | 78 | 5,00,000 | 5,33,500 |
| 2011–2012 | 52 | 4,59,000 | 4,13,500 |
| **ಒಟ್ಟು** | **473** | **23,59,000** | **23,16,500** |




ಈ ಯೋಜನೆಯಿಂದ ಶೈಕ್ಷಣಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ವಿಶೇಷ ಪ್ರಯೋಜನವಾಗುವದರ ಜೊತೆಗೆ ತಾತ್ಕಾಲಿಕವಾಗಿ ಕಾರ್ಯ ನಿರ್ವಹಿಸುವ ಶಿಕ್ಷಕರಿಗೂ ಕೆಲಸ ನಿರ್ವಹಿಸಲು ಉತ್ತೇಜನ ನೀಡಿದಂತಾಗಿದೆ. ಈ ಯೋಜನೆಗೆ ಕ್ರುಗರ್ ಫೌಂಡೇಶನ್ ಕಾರವಾರ ಇಲ್ಲಿಯವರೆಗೆ ರೂ.23,59,000 ಸಹಾಯಧನ ನೀಡಿದೆ. ಈ ಬಗ್ಗೆ ಸಂಸ್ಥೆಯ ಅಧ್ಯಕ್ಷರಿಗೂ ಕ್ರುಗರ್ ಫೌಂಡೇಶನ್ ಕಾರವಾರ ಇವರಿಗೂ ಟ್ರಸ್ಟಿನ ಪರವಾಗಿ ಹಾಗೂ ಎಲ್ಲ ಸಂಸ್ಥೆಯ ಪರವಾಗಿ ಧನ್ಯವಾದ ಅರ್ಪಿಸುತ್ತೇನೆ.

2012–2013ನೇ ಶೈಕ್ಷಣಿಕ ವರ್ಷದಲ್ಲಿಯೂ ಈ ಯೋಜನೆ ಮುಂದೆವರೆಸಬೇಕಾಗಿ ಮಾನ್ಯ ಅಧ್ಯಕ್ಷರಿಗೆ ತಮ್ಮೆಲ್ಲರ ಪರವಾಗಿ ವಿನಂತಿಸುತ್ತೇನೆ.

## 14. 2011–2012ನೇ ಸಾಲಿನಲ್ಲಿ ಆರ್ಥಿಕ ಸಹಾಯ ಪಡೆದವರ ವಿವರ

1. ಬಿ.ಎಡ್. ಕಾಲೇಜ್ ದಾಂಡೇಲಿಯಲ್ಲಿ ಉಪನ್ಯಾಸಕರಾಗಿ ಕಾರ್ಯ ನಿರ್ವಹಿಸುತ್ತಿರುವ ಶ್ರೀ ನೀಲಕಂಠ ನಾಯ್ಕ ಅವರಿಗೆ ಮೂತ್ರ ಪಿಂಡದ ಕಾಯಿಲೆಯಿಂದ ಬಳಲುತ್ತಿದ್ದ ಸಂದರ್ಭದಲ್ಲಿ ಅವರಿಗೆ ಟ್ರಸ್ಟಿನಿಂದ ರೂ.10,000 ಹಾಗೂ ಕ್ರುಗರ ಪೌಂಡೇಶನನಿಂದ ರೂ.15,000 ಸಹಾಯಧನ ನೀಡಲಾಗಿದೆ. ಈಗ ಶ್ರೀ ನೀಲಕಂಠ ನಾಯ್ಕ ಅವರು ಆರೋಗ್ಯದಿಂದ ಇದ್ದು ಉಪನ್ಯಾಸಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.
2. ಗೋಖಲೆ ಸೆಂಟಿನರಿ ಕಾಲೇಜಿನಲ್ಲಿ ಎಟೆಂಡರರಾಗಿ ಕಾರ್ಯ ನಿರ್ವಹಿಸುತ್ತಿರುವ ಶ್ರೀ ನಾರಾಯಣ ಬಿ.ಆಗೇರ ಇವರ ಮಗಳು ಕತ್ತದ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದಾಗ ಆಕಸ್ಮಿಕವಾಗಿ ಅವಳ ಕೈ ಯಂತ್ರದಲ್ಲಿ ಸಿಲುಕಿ ಕೈ ಬೆರಳು ತುಂಡಾಗಿರುತ್ತದೆ ಅವರು ಸಲ್ಲಿಸಿದ ಅರ್ಜಿ ಪರಿಶೀಲಿಸಿ ಮಾನ್ಯ ಅಧ್ಯಕ್ಷರು ಅವಳಿಗೆ ಟ್ರಸ್ಟಿನಿಂದ ರೂ.15,000 ಹಾಗೂ ಕ್ರುಗರ ಪೌಂಡೇಶನ್ ಕಾರವಾರದಿಂದ ರೂ.25,000 ಸಹಾಯಧನ ನೀಡಿರುತ್ತಾರೆ.

3. ಶ್ರೀ ಉದಯ ಎಮ್.ನಾಯ್ಕ, ಮಂಜಗುಣಿ ಇವರು ಬಿ.ಎ., ಬಿ.ಎಡ್.ಪದವಿಧರರಾಗಿದ್ದು, ಆಕಸ್ಮಿಕವಾಗಿ ಮನೆಯಲ್ಲಿ ಜಾರಿಬಿದ್ದು ಅವರ ಎರಡು ಕಾಲುಗಳ ಸ್ವಾದೀನ ತಪ್ಪಿ ಅಸಹಾಯಕ ಪರಿಸ್ಥಿತಿಯಲ್ಲಿದ್ದಾರೆ. ಅವರಿಗೆ ಹೆಂಡತಿ ಹಾಗೂ 5 ವರ್ಷದ ಮಗಳಿದ್ದಾಳೆ. ಅವರು ಯಾವದೇ ಕೆಲಸ ಮಾಡಲು ಸಾಧ್ಯವಿಲ್ಲದ ಪರಿಸ್ಥಿತಿಯಲ್ಲಿದ್ದಾರೆ. ಅವರು ಸಲ್ಲಿಸಿದ ಅರ್ಜಿಯನ್ನು ಪರಿಶೀಲಿಸಿ ಮಾನ್ಯ ಅದ್ಯಕ್ಷರು, ಕ್ರುಗರ್ ಪೌಂಡೇಶನ್ ವತಿಯಿಂದ ಶ್ರೀ ಉದಯ ನಾಯ್ಕ ಮತ್ತು ಅವರ ಹೆಂಡತಿ ಹೆಸರಿನಲ್ಲಿ ಜಂಟಿಯಾಗಿ ರೂ.1 ಲಕ್ಷ 20 ಸಾವಿರ ಅಂಕೋಲಾ ಸಿಂಡಿಕೇಟ ಬ್ಯಾಂಕಿನಲ್ಲಿ ಇಟ್ಟು ಅದರಿಂದ ಪ್ರತಿ ತಿಂಗಳು ರೂ.1 ಸಾವಿರ ಬಡ್ಡಿ ಹಣ ದೊರೆಯುವಂತೆ ಮಾಡಿದ್ದಾರೆ. ಹಾಗೂ ಅವರ ಔಷದಕ್ಕಾಗಿ ಪ್ರತಿ ತಿಂಗಳು ರೂ.1000 ಕ್ರುಗರ್ ಪೌಂಡೇಶನ್ ನೀಡುತ್ತಿದ್ದಾರೆ. ಅವರ ಮಗಳಿಗೆ ಶಿಕ್ಷಣಕ್ಕಾಗಿ ಬೇಕಾಗುವ ಸಹಾಯ ಸಲ್ಲಿಸುವದಾಗಿ ತಿಳಿಸಿದ್ದಾರೆ.
4 ಕಲಾಶ್ರೀ ಸಂಗೀತ ವಿದ್ಯಾಲಯ ಹಾಗೂ ಸಾಂಸ್ಕೃತಿಕ ವೇದಿಕೆ ಕತಗಾಲ ಇವರು ನಡೆಸುವ ಸಂಸ್ಕೃತಿ ಶಿಬಿರಕ್ಕೆ ರೂ.10,000 ಟ್ರಸ್ಟಿನಿಂದ ದೇಣಿಗೆಯಾಗಿ ದಿನಾಂಕ 20–04–2011 ರಂದು ನೀಡಲಾಗಿದೆ.
5 ಸ್ವರ ಸಾಧನ ಸಂಗೀತ ಕಲಾ ಕೇಂದ್ರ, ನಂದನಗದ್ದಾ ಇವರು ನಡೆಸುವ ಕಾರ್ಯಕ್ರಮಕ್ಕೆ ದಿನಾಂಕ 18–02–2012 ರಂದು ರೂ.10,000 ಟ್ರಸ್ಟಿನಿಂದ ದೇಣಿಗೆಯಾಗಿ ನೀಡಲಾಗಿದೆ.

## 15. ಜಿಲ್ಲಾ ಮಟ್ಟದ ಅಂತರ ಕಾಲೇಜು ಚರ್ಚಾಸ್ಪರ್ದೆ

2011–12ನೇ ಸಾಲಿನಲ್ಲಿ ದಿವಂಗತ ಪಿ.ಎಸ್.ಕಾಮತ ಸ್ಮರಣಾರ್ಥ ಜಿಲ್ಲಾ ಮಟ್ಟದ ಅಂತರ ಕಾಲೇಜ್ ಚರ್ಚಾ ಸ್ಪರ್ದೆಯನ್ನು ಏರ್ಪಡಿಸಲಾಗಿತ್ತು. ಚರ್ಚಾ ವಿಷಯ "ಪ್ರಸ್ತಾವಿತ ಭೃಷ್ಟಾಚಾರ ವಿರೋಧಿ ಕಾನೂನುಗಳು ಅಥವಾ ಶಾಸನಗಳು ಭಾರತದಲ್ಲಿ ಭೃಷ್ಟಾಚಾರವನ್ನು ನಿರ್ಮೂಲನೆ ಮಾಡುತ್ತದೆ" / "The Proposed Anti-Corruption Laws/Enactments Will Eliminate Corruption in India"

ವಿದ್ಯಾರ್ಥಿಗಳಲ್ಲಿ, ಯುವಕರಲ್ಲಿ ಸಾಮಾಜಿಕ, ಆರ್ಥಿಕ, ರಾಜಕೀಯ ಅನಿಷ್ಟಗಳ ಹಾಗೂ ಸಮಸ್ಯೆಗಳ ವಿರುದ್ಧ ಹೋರಾಟ ಮಾಡುವ ಹಾಗೂ ನಾಯಕತ್ವ ಬೆಳೆಸುವ ಅಭಿಯಾನದ ಅಂಗವಾಗಿ ಈ ಸಮಗ್ರ ಚರ್ಚಾಸ್ಪರ್ದೆಯನ್ನು ಸುಪ್ರೀಮ ಕೋರ್ಟಿನ ನ್ಯಾಯವಾದಿಗಳಾದ ಶ್ರೀ ದೇವದತ್ತ ಕಾಮತರವರು ದಿ.ಪಿ.ಎಸ್.ಕಾಮತರವರ ಸ್ಮರಣಾರ್ಥ ಈ ಕಾರ್ಯಕ್ರಮವನ್ನು ಟ್ರಸ್ಟಿನ ಮೂಲಕ ನಡೆಸಲು ಉದ್ದೇಶಿಸಿ ಅದರ ಪ್ರಾಯೋಜಕತ್ವವನ್ನು ವಹಿಸಿಕೊಂಡಿದ್ದರು.

ಈ ಚರ್ಚಾ ಸ್ಪರ್ದೆಯನ್ನು ಮೂರು ಹಂತದಲ್ಲಿ ಆಯೋಜಿಸಲಾಗಿತ್ತು. 1ನೇ ಹಂತ ಕಾಲೇಜುಮಟ್ಟ, 2ನೇ ಹಂತ ತಾಲೂಕಾಮಟ್ಟ 3ನೇ ಹಂತ ಜಿಲ್ಲಾ ಮಟ್ಟ. ಈ ಕಾರ್ಯಕ್ರಮದ ಕುರಿತು ಬ್ರೊಶರ, ಬ್ಯಾನರ ಹಾಗೂ ಇತರ ಸಾಮಾಗ್ರಿಗಳನ್ನು ಜಿಲ್ಲೆಯ ಒಟ್ಟೂ 162 ಕಾಲೇಜುಗಳಿಗೆ ನೀಡಲಾಗಿತ್ತು ಹಾಗೂ ಎಲ್ಲ ಸಂಸ್ಥೆಗಳಿಗೆ ಈ ಕಾರ್ಯಕ್ರಮದ ಉದ್ದೇಶವನ್ನು ತಿಳಿಸಲಾಗಿತ್ತು.

2011 ಡಿಸೆಂಬರ ತಿಂಗಳಲ್ಲಿ ಕಾಲೇಜು ಮಟ್ಟದ ಸ್ಪರ್ಧೆ ಪ್ರಾರಂಭವಾಗಿ ತಾಲೂಕಾ ಮಟ್ಟದ ಸ್ಪರ್ಧೆ ಡಿಸೆಂಬರ ಮತ್ತು ಜನವರಿಯಲ್ಲಿ ಮುಗಿದಿರುತ್ತದೆ. ತಾಲೂಕಾ ಮಟ್ಟದಲ್ಲಿ ಒಟ್ಟೂ 82 ಕಾಲೇಜುಗಳಿಂದ 148 ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ಜಿಲ್ಲಾ ಮಟ್ಟದ ಸ್ಪರ್ಧೆಯನ್ನು ದಿನಾಂಕ 18–02–2012 ರಂದು ಕಾರವಾರದ ದಿವೇಕರ ವಾಣಿಜ್ಯ ಮಹಾವಿದ್ಯಾಲಯದಲ್ಲಿ ಜರುಗಿಸಲಾಯಿತು. ಜಿಲ್ಲಾ ಮಟ್ಟದ ಸ್ಪರ್ಧೆಯಲ್ಲಿ ಒಟ್ಟು 9 ತಾಲೂಕಾ ಕೇಂದ್ರಗಳಿಂದ 18 ಸ್ಪರ್ಧಾಳುಗಳು ಭಾಗವಹಿಸಿದ್ದರು.

ಶ್ರೀ ವಿವೇಕ ತನಕಾ, Additional Solicitor General of Supreme Court, New Delhi, ಅವರು ಮುಖ್ಯ ಅತಿಥಿಯಾಗಿ ಆಗಮಿಸಿ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿ ಬಹುಮಾನ ವಿತರಿಸಿದರು. ಶ್ರೀ ಎಸ್.ಪಿ.ಕಾಮತ, ಅಧ್ಯಕ್ಷರು, ಕೆನರಾ ವೆಲ್ ಫೆರ್ ಟ್ರಸ್ಟ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಈ ಕಾರ್ಯಕ್ರಮದ ಪ್ರಾಯೋಜಕರಾದ ಶ್ರೀ ದೇವದತ್ತ ಕಾಮತರವರು ಉಪಸ್ಥಿತರಿದ್ದರು.

ಈ ಚರ್ಚಾಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿದ ಗೋಖಲೆ ಸೆಂಟಿನರಿ ಪದವಿ ಕಾಲೇಜಿನ ವಿದ್ಯಾರ್ಥಿನಿ ಕುಮಾರಿ ಹೇಮಾ ಶಾಂತಾರಾಮ ನಾಯಕ ಅವರು ರೂ.50,000 ಹಾಗೂ ಇನ್ನಿತರ ಬಹುಮಾನ ಪಡೆದರು. ದ್ವಿತೀಯ ಸ್ಥಾನ ಗಳಿಸಿದ ಶಿರಸಿಯ ಎಮ್.ಇ.ಎಸ್.ಚೈತನ್ಯ ಕಾಲೇಜಿನ ಪಿ.ಯು.ಸಿ. ವಿದ್ಯಾರ್ಥಿನಿ ಕುಮಾರಿ ಅನನ್ಯಾ ಕೆ.ಭಟ್ಟ ಇವರು ರೂ.30,000 ಹಾಗೂ ಇನ್ನಿತರ ಬಹುಮಾನ ಪಡೆದರು. ತೃತೀಯ ಸ್ಥಾನವನ್ನು ಡಾ.ಎ.ವಿ.ಬಾಳಿಗಾ ಪಿ.ಯು.ಕಾಲೇಜು ಕುಮಟಾದ ವಿದ್ಯಾರ್ಥಿನಿ ಕುಮಾರಿ ದೀಕ್ಷಾ ಪಿ.ಭಟ್ಟ ಇವರು ರೂ.20,000 ಹಾಗೂ ಇನ್ನಿತರ ಬಹುಮಾನ ಪಡೆದರು. ಸಮಾಧಾನಕರ ಬಹುಮಾನ ರೂ.5000 ದಂತೆ ಅಂಕೋಲೆಯ ಗೋಖಲೆ ಸೆಂಟಿನರಿ ಪಿ.ಯು.ಕಾಲೇಜಿನ ವಿದ್ಯಾರ್ಥಿನಿ ಕುಮಾರಿ ಶಿವಾಲಿ ನಾಗರಾಜ ನಾಯಕ ಮತ್ತು ಎಮ್.ಜಿ.ಸಿ.ಕಾಲೇಜ್, ಸಿದ್ದಾಪುರದ ವಿದ್ಯಾರ್ಥಿನಿ ಕುಮಾರಿ ಮಾನಸಾ ಎಮ್.ಹೆಗಡೆ ಪಡೆದರು.

ಈ ಒಂದು ಜಿಲ್ಲಾಮಟ್ಟದ ಅಂತರ ಕಾಲೇಜು ಮಟ್ಟದ ಚರ್ಚಾಸ್ಪರ್ಧೆಯ ಕಾರ್ಯಕ್ರಮ ಸಂಘಟನೆಗೆ ಹಾಗೂ ಬಹುಮಾನ ನೀಡುವ ಬಗ್ಗೆ ಒಟ್ಟೂ ರೂ.4,88,300 ಖರ್ಚಾಗಿರುತ್ತದೆ. ಇದರ ಸಂಪೂರ್ಣ ವೆಚ್ಚವನ್ನು ಶ್ರೀಯುತ ದೇವದತ್ತ ಕಾಮತರವರು ಭರಿಸಿರುತ್ತಾರೆ. ಈ ಕಾರ್ಯಕ್ರಮದ ಪ್ರಾಯೋಜಕರಿಗೆ ಹಾಗೂ ಸಂಘಟನೆಯಲ್ಲಿ ಪಾಲುಗೊಂಡು ಯಶಸ್ವಿಯಾಗಿ ಕಾರ್ಯ ನಿರ್ವಹಿಸಿದ ಎಲ್ಲರಿಗೂ ಈ ಸಂದರ್ಭದಲ್ಲಿ ನೆನೆದು ಟ್ರಸ್ಟಿನ ಪರವಾಗಿ ಹೃತ್ಪೂರ್ವಕ ಕೃತಜ್ಞತೆ ಸಲ್ಲಿಸುತ್ತೇನೆ.

## 16. ಉತ್ತಮ ನಾಳೆಗಾಗಿ ಪರಿವರ್ತನಾಗಾರರು (Project Change Makers for a Better Tomorrow)

ಉತ್ತಮ ನಾಳೆಗಾಗಿ ಪರಿವರ್ತನಾಗಾರರು ಎಂಬ ಸಂಕಲ್ಪದ ಅಡಿಯಲ್ಲಿ ಕಾರವಾರದ ಕ್ರುಗರ ಫೌಂಡೇಶನ ಸಂಸ್ಥೆಯು ಕೆನರಾ ವೆಲ್ ಫೆರ್ ಟ್ರಸ್ಟಿನ ಮೂಲಕ ಕೈಗೆತ್ತಿಕೊಂಡ **"Project Change Makers for a Better Tomorrow"** ಎಂಬ ಒಂದು ವಿನೂತನವಾದ ಯೋಜನೆಯ ಮೊದಲ ಹಂತದ ತರಬೇತಿ ಶಿಬಿರವನ್ನು ಜನವರಿ 2008ರಲ್ಲಿ ಪ್ರಾರಂಭಿಸಿ ಎಪ್ರೀಲ 2010ರಂದು ಯಶಸ್ವಿಯಾಗಿ ಮುಕ್ತಾಯಗೊಳಿಸಿದೆ. 3 ವರ್ಷದ ಕಾಲಾವಧಿಯ ಈ ಯೋಜನೆಯನ್ನು ರೂಪಿಸಿ ಮಕ್ಕಳಿಗೆ ತರಬೇತು ನೀಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಪ್ರಥಮ ಹಂತದ ಈ ಯೋಜನೆಯ ಲಾಭ ಉತ್ತರ ಕನ್ನಡ ಜಿಲ್ಲೆಯ 125 ಮಕ್ಕಳು ಪಡೆದಿರುತ್ತಾರೆ. ಈ ಯೋಜನೆಗೆ ತಗಲಿದ ಒಟ್ಟೂ ವೆಚ್ಚ ರೂ.20,25,000 .

**Project Change Makers for a Better Tomorrow** – ಈ ಯೋಜನೆಯ 2ನೇ ಹಂತದ ತಂಡಕ್ಕೆ ಆಯ್ಕೆಯನ್ನು ದಿನಾಂಕ 15-09-2010 ರಂದು ಕಾರವಾರದಲ್ಲಿ ನಡೆಸಲಾಗಿದೆ. ಈ ಯೋಜನೆಯಲ್ಲಿ ಪಾಲ್ಗೊಳ್ಳಲು ಜಿಲ್ಲೆಯ ವಿವಿಧ ಶಾಲೆಗಳಲ್ಲಿ ಕಲಿಯುತ್ತಿರುವ 8ನೇ ವರ್ಗದ 50 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗಿತ್ತು.

ಎರಡನೇ ಹಂತದ ಈ ಯೋಜನೆಯ ಅಂಗವಾಗಿ ಜಿಲ್ಲೆಯಲ್ಲಿ ವಿವಿದೆಡೆ ಇದುವರೆಗೆ ಒಟ್ಟೂ 6 ತರಬೇತಿ ಶಿಬಿರವನ್ನು ಏರ್ಪಡಿಸಲಾಗಿದೆ.

| | | |
|---|---|---|
| 1ನೇ ಶಿಬಿರ | 22-10-2010 ರಿಂದ 23-10-2010 | **ಜಿ.ಸಿ.ಕಾಲೇಜ, ಅಂಕೋಲಾ** |
| 2ನೇ ಶಿಬಿರ | 05-02-2011 ರಿಂದ 07-02-2011 | **ಸಂಸ್ಕೃತ ಪಾಠಶಾಲಾ ಕೆಕ್ಕಾರ, ಕುಮಟಾ** |
| 3ನೇ ಶಿಬಿರ | 14-05-2011 ರಿಂದ 16-05-2011 | **ಗೋಕುಲ, ಕಾರವಾರ** |
| 4ನೇ ಶಿಬಿರ | 10-09-2011 ರಿಂದ 12-09-2011 | **ಪಿ.ಎಂ.ಹೈಸ್ಕೂಲ, ಅಂಕೋಲಾ** |
| 5ನೇ ಶಿಬಿರ | 25-01-2012 ರಿಂದ 29-01-2012 | **ಪಣಜಿ, ಗೋವಾ** |
| 6ನೇ ಶಿಬಿರ | 02-05-2012 ರಿಂದ 04-05-2012 | **ಅಣಶಿ ನೇಚರ ಕ್ಯಾಂಪ** |

7ನೇ ಶಿಬಿರವನ್ನು ಅಂಕೋಲಾದಲ್ಲಿ ದಿನಾಂಕ 27-07-20012 ರಿಂದ 29-07-2012ರ ವರೆಗೆ ನಡೆಸಲಾಗುವದು. ಈ ಶಿಬಿರದ ಪ್ರಯೋಜನವನ್ನು ಎಲ್ಲ ಫಲಾನುಭವಿಗಳು ಪಡೆಯುತ್ತಿದ್ದಾರೆ. ಸಂಪನ್ಮೂಲ ವ್ಯಕ್ತಿಗಳು ಈ ಶಿಬಿರಗಳನ್ನು ಯಶಸ್ವಿಯಾಗಿ ನಡೆಸಲು ತುಂಬಾ ಸಹಕಾರ ನೀಡುತ್ತಿದ್ದಾರೆ. ಈ ಯೋಜನೆ ಯಶಸ್ವಿಯಾಗಿ ನಡೆಸಲು ಸಹಕರಿಸುತ್ತಿರುವ ಎಲ್ಲರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಎರಡನೇ ಹಂತದ ಈ ಯೋಜನೆಗೆ ಇದುವರೆಗೆ ರೂ.7,79,634 ಖರ್ಚು ಮಾಡಲಾಗಿದೆ. ಈ ಯೋಜನೆಯ ಸಂಪೂರ್ಣ ವೆಚ್ಚ ಕ್ರುಗರ ಫೌಂಡೇಶನ ನೀಡಿರುತ್ತದೆ. ಈ ಯೋಜನೆಗಾಗಿ ಕ್ರುಗರ್ ಫೌಂಡೇಶನ್, ಕಾರವಾರ, ಇದುವರೆಗೆ ರೂ.28,04,634 ಖರ್ಚು ಮಾಡಿದೆ. ಈ ಯೋಜನೆಯನ್ನು ಯಶಸ್ವಿಯಾಗಿ ನಿರ್ವಹಿಸುವಲ್ಲಿ ಸಹಕರಿಸುತ್ತಿರುವ ಎಲ್ಲರಿಗೆ ಕೃತಜ್ಞತೆ ಸಲ್ಲಿಸುತ್ತೇನೆ.

## 17. ಟ್ರಸ್ಟಿಗೆ ದೇಣಿಗೆ ನೀಡಿದವರ ವಿವರ

1. ಪ್ರೊ. ಜಿ.ವಿ.ಭಟ್ಟ, ಧರ್ಮದರ್ಶಿ, ಕೆನರಾ ವೆಲ್ ಫೇರ್ ಟ್ರಸ್ಟ, ಕಡತೋಕಾ, ಕೊಂಕೇರಿ ಇವರು ರೂ.5 ಲಕ್ಷ ಟ್ರಸ್ಟಿಗೆ ದೇಣಿಗೆಯಾಗಿ ದಿನಾಂಕ 06–07–2012 ರಂದು ನೀಡಿದ್ದಾರೆ. ಅವರು ಈ ಹಣವನ್ನು ಕಡತೋಕಾದಲ್ಲಿ ಶ್ರೀ ವಿಷ್ಣು ಪರಮ ಭಟ್ಟ, ಕೊಂಕೇರಿ ಮೆಮೊರಿಯಲ ಕಂಪ್ಯೂಟರ ಹಾಲ ಕಟ್ಟಿಸಲು ವಿನಿಯೋಗಿಸಬೇಕೆಂದು ತಿಳಿಸಿದ್ದಾರೆ.
2. ಪ್ರೊ. ಶ್ರೀಮತಿ ನಿರ್ಮಲಾ ಬಿ.ನಾಯಕ ಅವರು ತಮ್ಮ ಪತಿ ದಿವಂಗತ ಪ್ರಿ. ಎಸ್.ಎನ್.ನಾಯಕರ ನೆನಪಿಗಾಗಿ ಪಿ.ಎಂ.ಹೈಸ್ಕೂಲಿನಲ್ಲಿ ಕಟ್ಟುತ್ತಿರುವ ಡಾ. ದಿನಕರ ದೇಸಾಯಿ ಜನ್ಮ ಶತಮಾನೋತ್ಸವದ ಕಟ್ಟಡದ 2ನೇ ಅಂತಸ್ತಿನ ನಿರ್ಮಾಣಕ್ಕೆ ವಿನಿಯೋಗಿಸಲು ರೂ.2 ಲಕ್ಷ ದೇಣಿಗೆಯಾಗಿ ದಿ.21–05–2012 ರಂದು ನೀಡಿರುತ್ತಾರೆ.
3. **N.K.G.S.B.** ಬ್ಯಾಂಕ ಮುಂಬೈ ಇವರು ಪ್ರತಿವರ್ಷ ಟ್ರಸ್ಟಿಗೆ ರೂ.10,000 ದೇಣಿಗೆಯಾಗಿ ನೀಡುತ್ತಿದ್ದಾರೆ. ಕಳೆದ ವರ್ಷ ಈ ದೇಣಿಗೆಯನ್ನು 18–10–2011 ರಂದು ನೀಡಿರುತ್ತಾರೆ.
4. ಶ್ರೀ ವಿಷ್ಣು ನಾಯ್ಕ, ಪ್ರಧಾನ ಸಂಚಾಲಕರು, ಶ್ರೀ ರಾಘವೇಂದ್ರ ಪ್ರಕಾಶನ ಅಂಬಾರಕೊಡ್ಲ ಇವರು ಕಳೆದ ವರ್ಷ ರೂ.1 ಲಕ್ಷ 30 ಸಾವಿರ ಮೌಲ್ಯದ ಪುಸ್ತಕವನ್ನು ದಾನದ ರೂಪದಲ್ಲಿ ಟ್ರಸ್ಟಿಗೆ ನೀಡಿರುತ್ತಾರೆ. ಅವರ ಇಚ್ಛೆಯಂತೆ ಟ್ರಸ್ಟಿನ ಶಿಕ್ಷಣ ಸಂಸ್ಥೆಗಳ ಗ್ರಂಥಾಲಯದ ಗುಣಮಟ್ಟ ಉತ್ತಮ ಪಡಿಸುವ ದೃಷ್ಟಿಯಿಂದ ಟ್ರಸ್ಟಿನ ಎಲ್ಲ ಶಾಲೆ ಹಾಗೂ ಕಾಲೇಜುಗಳಿಗೆ ನೀಡಲಾಗಿದೆ.

ಟ್ರಸ್ಟಿಗೆ ದೇಣಿಗೆ ನೀಡಿದ ಈ ಎಲ್ಲ ಮಹನೀಯರಿಗೆ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

## 18. ಟ್ರಸ್ಟಿಗೆ ಬರುವ ಆದಾಯದ ಕುರಿತು

1. ಟ್ರಸ್ಟು ನಡೆಸುತ್ತಿರುವ ವಿವಿಧ ಸಂಸ್ಥೆಗಳಲ್ಲಿ ಬರುವ ತೋಟದ ಉತ್ಪನ್ನವನ್ನು ಟ್ರಸ್ಟಿಗೆ ಪಾವತಿಸುವಂತೆ ಈ ಹಿಂದಿನ ವರ್ಷಗಳಲ್ಲಿ ವಿನಂತಿಸಲಾಗಿತ್ತು.

   ಟ್ರಸ್ಟಿಗೆ ಸಂದಾಯವಾದ ತೋಟದ ಉತ್ಪನ್ನ ಈ ಕೆಳಗಿನಂತಿರುತ್ತದೆ.

| ವರ್ಷ | ಸಂದಾಯವಾದ ಹಣ |
|---|---|
| 2009–2010 | ರೂ.85,750 |
| 2010–2011 | ರೂ.1,10,283 |
| 2011–2012 | ರೂ.1,53,310 |

2 2011–12ನೇ ಸಾಲಿನಲ್ಲಿ ಜನತಾ ವಿದ್ಯಾಲಯ, ಮುದ್ಗಾ, ಕಡವಾಡ, ಕುಳವೆ–ಬರೂರ, ಧಾರೇಶ್ವರ ಹಾಗೂ ಕತಗಾಲ ಈ ಶಾಲೆಗಳಿಂದ ತೋಟದ ಉತ್ಪನ್ನ ಅತ್ಯಂತ ಕಡಿಮೆ ಬಂದಿದೆ. ಈ ಸಂಸ್ಥೆಯ ಮುಖ್ಯಸ್ಥರು ವಿಶೇಷ ಗಮನ ಹರಿಸಿ ತೋಟವನ್ನು ಅಭಿವೃದ್ಧಿ ಪಡಿಸಿ ತಮ್ಮ ಸಂಸ್ಥೆಯ ತೋಟದ ಉತ್ಪನ್ನ 2012–2013ನೇ ಸಾಲಿನಲ್ಲಿ ಸಾಧ್ಯವಾದಷ್ಟು ಹೆಚ್ಚಿಗೆ ಬರುವಂತೆ ಪ್ರಯತ್ನಿಸಿ ಟ್ರಸ್ಟಿಗೆ ಸಂದಾಯ ಮಾಡುವಂತೆ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಎಲ್ಲ ಸಂಸ್ಥೆಗಳು ತೋಟದ ಅಭಿವೃದ್ಧಿ ಪಡಿಸಿ ತಮ್ಮ ಸಂಸ್ಥೆಗಳಿಂದ ನಿರಂತರವಾಗಿ ತೋಟದ ಉತ್ಪನ್ನವನ್ನು ಟ್ರಸ್ಟಿಗೆ ಸಲ್ಲಿಸುವ ಕಾರ್ಯಕ್ರಮದಲ್ಲಿ ಭಾಗಿಯಾಗಬೇಕೆಂದು ವಿನಂತಿಸುತ್ತೇನೆ.

3. ಟ್ರಸ್ಟು ಕಟ್ಟಿಸಿದ ವಸತಿ ಗ್ರಹಗಳು, 1. ಪಿ.ಎಮ್.ಹೈಸ್ಕೂಲ, ಅಂಕೋಲಾ 2) ಜಿ.ಸಿ.ಕಾಲೇಜ, ಅಂಕೋಲಾ 3) ದಿವೇಕರ ವಾಣಿಜ್ಯ ಕಾಲೇಜ, ಕಾರವಾರ 4) ಜನತಾ ವಿದ್ಯಾಲಯ, ದಾಂಡೇಲಿ 5) ಜನತಾ ವಿದ್ಯಾಲಯ, ಕಡತೋಕಾ 6) ಜನತಾ ವಿದ್ಯಾಲಯ, ಶಿರಾಲಿ 7) ಜನತಾ ವಿದ್ಯಾಲಯ, ಮುರ್ಡೇಶ್ವರ ಮತ್ತು 8) ಜನತಾ ವಿದ್ಯಾಲಯ ಕುಳವೆ–ಬರೂರದಲ್ಲಿ ಇದೆ. ಇದರ ಹೊರತಾಗಿ ಪಿ.ಎಂ.ಹೈಸ್ಕೂಲ ಅಂಕೋಲಾದಲ್ಲಿ ಒಂದು ವಾಣಿಜ್ಯ ಸಂಕೀರ್ಣವಿದೆ. ಹೊನ್ನೆಕೇರಿಯಲ್ಲಿ ಹಾಸ್ಟೇಲ ಕಟ್ಟಡವಿದೆ. ಈ ಎಲ್ಲ ಕಟ್ಟಡದ ಬಾಡಿಗೆ ಹಣ 2011–2012ನೇ ಸಾಲಿನಲ್ಲಿ ಒಟ್ಟೂ ರೂ.3,51,172 ಬಂದಿರುತ್ತದೆ. ಕಳೆದ ವರ್ಷ ರೂ.3,19,896 ಸಂದಾಯವಾಗಿತ್ತು.

ಜನತಾ ವಿದ್ಯಾಲಯ, ಮುರ್ಡೇಶ್ವರ ಶಾಲೆಯ ಆವಾರದಲ್ಲಿ ಎರಡು ವಸತಿ ಗೃಹಗಳಿದ್ದು ಅವು ಅತ್ಯಂತ ಶೋಚನೀಯ ಸ್ಥಿತಿಯಲ್ಲಿದೆ. ಈ ಎರಡು ವಸತಿ ಗೃಹಗಳನ್ನು ರಿಪೇರಿ ಮಾಡಿಸಲು ಟ್ರಸ್ಟಿನ ವತಿಯಿಂದ ಕಾರ್ಪೆಂಟರರನ್ನು ಕಳುಹಿಸಲಾಗಿದೆ. ಈಗ ಈ ಎರಡು ವಸತಿ ಗೃಹಗಳನ್ನು ಸರಿಪಡಿಸಲಾಗಿದೆ. ಸುಣ್ಣ ಬಣ್ಣದ ಕೆಲಸ ಹಾಗೂ ಸಿಮೆಂಟಿನ ಕೆಲಸ ಬಾಕಿ ಇದೆ. ಅದನ್ನು ಮುಗಿದ ನಂತರ ಈ ವಸತಿ ಗೃಹಗಳನ್ನು ಶಿಕ್ಷಕರ ಉಪಯೋಗಕ್ಕಾಗಿ ನೀಡಬಹುದು. ಈ ಬಗ್ಗೆ ಶಾಲೆಯ ಮುಖ್ಯಾಧ್ಯಾಪಕರು ಕಾಳಜಿ ವಹಿಸಿ ಆದಷ್ಟು ಬೇಗನೆ ಈ ವಸತಿ ಗೃಹಗಳನ್ನು ಶಿಕ್ಷಕರಿಗೆ ಉಳಿಯಲು ನೀಡಬೇಕಾಗಿದೆ. ಕುಳವೆ–ಬರೂರ ಶಾಲೆಯ ಆವಾರದಲ್ಲಿರುವ ವಸತಿ ಗೃಹ ಖಾಲಿ ಇದ್ದು ಅಲ್ಲಿ ವಾಸ ಮಾಡಲು ಸಿಬ್ಬಂದಿಯವರಿಗೆ ತಿಳಿಸಬೇಕು.

ಶಾಲಾ–ಕಾಲೇಜು ಆವಾರದಲ್ಲಿರುವ ಟ್ರಸ್ಟಿನ್ ಈ ಎಲ್ಲ ಕಟ್ಟಡಗಳ ರಿಪೇರಿ ಕೆಲಸ, ಸುಣ್ಣಬಣ್ಣ ಮಾಡಿಸುವದು ಹಾಗೂ ಮುನ್ಸಿಪಾಲಿಟಿ/ಪಂಚಾಯತ ಕರವನ್ನು ತುಂಬುವದನ್ನು ಟ್ರಸ್ಟಿನಿಂದಲೇ ನಿರ್ವಹಿಸಲಾಗುತ್ತಿದೆ.

4. ಶಾಲಾ ಕಾಲೇಜಿಗೆ ದಾಖಲಾದ ವಿದ್ಯಾರ್ಥಿಗಳಿಂದ ಹಾಗೂ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕ ಶಿಕ್ಷಕೇತರ ಸಿಬ್ಬಂದಿಯವರಿಂದ ಒಂದು ಶೈಕ್ಷಣಿಕ ವರ್ಷಕ್ಕೆ ರೂ.100 ನ್ನು ರೂಪೀ ರಿಸರ್ವ ಫಂಡ ಆಗಿ ಸಂಗ್ರಹಿಸಿ, ಟ್ರಸ್ಟಿಗೆ ಜಮಾ ಮಾಡುವದು ಟ್ರಸ್ಟಿನ ಯೋಜನೆಯಲ್ಲೊಂದು. 2011–2012ನೇ ಸಾಲಿನಲ್ಲಿ ಈ ಯೋಜನೆಯಡಿಯಲ್ಲಿ ಒಟ್ಟೂ ರೂ.9,74,700 ಸಂಗ್ರಹವಾಗಿದೆ. ಸಂಗ್ರಹಿಸಿದ ಈ ಹಣವನ್ನು ರಿಸರ್ವ ಫಂಡ ಖಾತೆಗೆ ವಿನಿಯೋಗಿಸಬೇಕಾಗುತ್ತದೆ. ಆದರೆ ಶಾಲಾ–ಕಾಲೇಜುಗಳ ನಿರ್ವಹಣೆ ವೆಚ್ಚಕ್ಕಾಗಿ, ಅಭಿವೃದ್ಧಿ ಕಾರ್ಯಕ್ಕೆ, ತಾತ್ಕಾಲಿಕ ಸಿಬ್ಬಂದಿಗಳ ವೇತನಕ್ಕಾಗಿ ಹಾಗೂ ಇನ್ನಿತರ ಕಾರ್ಯಗಳಿಗೆ ಟ್ರಸ್ಟು ಈ ಹಣ ವಿನಿಯೋಗಿಸುವದರಿಂದ ರೂಪಿ ರಿಸರ್ವ ಫಂಡ ನಿಂದ ಸಂಗ್ರಹವಾಗುವ ಹಣ ಪ್ರತ್ಯೇಕ ನಿಧಿಯಾಗಿ ಇಡಲು ಸಾಧ್ಯವಾಗಲಿಲ್ಲ. ಟ್ರಸ್ಟಿಗೆ ಬರುವ ಆದಾಯ, ದೇಣಿಗೆ ಹೆಚ್ಚಾದಲ್ಲಿ ಈ ಹಣವನ್ನು ಪ್ರತ್ಯೇಕ ನಿಧಿಯಾಗಿ ಇಡಲು ಸಾಧ್ಯವಾಗಬಹುದು. ಟ್ರಸ್ಟಿಗೆ ಬರುವ ಆದಾಯ ಇನ್ನೂ ಹೆಚ್ಚಾಗುವಂತೆ ಎಲ್ಲರೂ ಪ್ರಯತ್ನಿಸಬೇಕಾಗಿ ವಿನಂತಿಸುತ್ತೇನೆ.

## 19. 2011–2012ನೇ ಸಾಲಿನಲ್ಲಿ ನಿವೃತ್ತಿ ಹೊಂದಿದ ಬೋಧಕ ಬೋಧಕೇತರರು

1. ಶ್ರೀ ಆರ್.ಎನ್.ನಾಯ್ಕ, ಜವಾನ, ಜಿ.ಸಿ.ಪಿ.ಯು.ಕಾಲೇಜ ಅಂಕೋಲಾ ಇವರು ದಿ.31–12–2011 ರಂದು ನಿವೃತ್ತಿ ಹೊಂದಿರುವರು.
2. ಶ್ರೀ ಪಿ.ಎಸ್.ಗಾಂವಕರ, ದೈಹಿಕ ಶಿಕ್ಷಕರು, ಜಿ.ಸಿ.ಕಾಲೇಜ, ಅಂಕೋಲಾ ಇವರು ದಿ.30–04–2012 ರಂದು ನಿವೃತ್ತಿ ಹೊಂದಿರುವರು.
3. ಶ್ರೀ ಟಿ.ಎಸ್.ಆಗೇರ, ಜವಾನರು, ಜಿ.ಸಿ.ಕಾಲೇಜ, ಅಂಕೋಲಾ ಇವರು ದಿ.31–05–2012 ರಂದು ನಿವೃತ್ತಿ ಹೊಂದಿರುವರು.
4. ಶ್ರೀ ಎಂ.ಡಿ.ನಾಯ್ಕ, ಜವಾನರು, ಜಿ.ಸಿ.ಕಾಲೇಜ, ಅಂಕೋಲಾ ಇವರು ದಿ.31–05–2012 ರಂದು ನಿವೃತ್ತಿ ಹೊಂದಿರುವರು.
5. ಶ್ರೀ ಕೆ.ಕೆ.ಹರಿಜನ, ಜವಾನರು, ಜಿ.ಸಿ.ಕಾಲೇಜ, ಅಂಕೋಲಾ ಇವರು ದಿ.31–05–2012 ರಂದು ನಿವೃತ್ತಿ ಹೊಂದಿರುವರು.
6. ಶ್ರೀ ಜಿ.ವಿ.ಭಟ್ಟ, ಉಪನ್ಯಾಸಕರು, ಜನತಾ ವಿದ್ಯಾಲಯ ಸಂಯುಕ್ತ ಪದವಿ ಪೂರ್ವ ಕಾಲೇಜ, ಕಡತೋಕಾ ಇವರು ದಿ.31–10–2011 ರಂದು ನಿವೃತ್ತಿ ಹೊಂದಿರುವರು.
7. ಶ್ರೀ ಚನ್ನಪ್ಪ ಎಮ್.ನಾಯ್ಕ, ಜವಾನ–ಕಾವಲುಗಾರ, ಪಿ.ಎಂ.ಹೈಸ್ಕೂಲ ಅಂಕೋಲಾ ಇವರು ದಿ.31–01–2012 ರಂದು ನಿವೃತ್ತಿ ಹೊಂದಿರುವರು.

8. ಶ್ರೀ ಎ.ಎಂ.ಮುಲ್ಲಾ, ಮುಖ್ಯಾಧ್ಯಾಪಕರು, ಜನತಾ ವಿದ್ಯಾಲಯ, ಕಾಸರಕೋಡ ಇವರು ದಿ.29–02–2012 ರಂದು ನಿವೃತ್ತಿ ಹೊಂದಿರುವರು.
9. ಶ್ರೀ ಎಸ್.ಡಿ ಹೆಗಡೆ, ಸಹಶಿಕ್ಷಕರು, ಜನತಾ ವಿದ್ಯಾಲಯ, ಮುರ್ಡೇಶ್ವರ ಇವರು ದಿ.31–10–2012 ರಂದು ನಿವೃತ್ತಿ ಹೊಂದಿರುವರು.
10. ಶ್ರೀ ಪಿ.ವಿ.ಭಟ್ಟ, ಮುಖ್ಯಾಧ್ಯಾಪಕರು ಜನತಾ ವಿದ್ಯಾಲಯ, ಮುರ್ಡೇಶ್ವರ ಇವರು ದಿ.31–01–2012 ರಂದು ನಿವೃತ್ತಿ ಹೊಂದಿರುವರು.
11. ಶ್ರೀ ನಂದಾ ಪಿ.ಕಾಮತ, ಜವಾನ ಜನತಾ ವಿದ್ಯಾಲಯ, ಮುರ್ಡೇಶ್ವರ ಇವರು ದಿ.31–05–2012 ರಂದು ನಿವೃತ್ತಿ ಹೊಂದಿರುತ್ತಾರೆ.
12. ಶ್ರೀ ಎಮ್.ಎಮ್.ಹೆಗಡೆ, ಅಟೆಂಡರ ಜನತಾ ವಿದ್ಯಾಲಯ, ಕುಳವೆ–ಬರೂರ ಇವರು ದಿ.31–04–2012 ರಂದು ನಿವೃತ್ತಿ ಹೊಂದಿರುತ್ತಾರೆ.
13. ಶ್ರೀ ಎಮ್.ಎಮ್.ನಾಯ್ಕ, ಆಫೀಸ್ ಸಹಾಯಕರು, ಜನತಾ ವಿದ್ಯಾಲಯ, ಕಾಸರಕೋಡ, ಇವರು 17–04–2012 ರಂದು ಆಕಸ್ಮಿಕವಾಗಿ ನಿಧನ ಹೊಂದಿರುವರು.

ಟ್ರಸ್ಟಿನ ವಿವಿಧ ಶಾಲಾ–ಕಾಲೇಜುಗಳಲ್ಲಿ ಅನೇಕ ವರ್ಷ ಸೇವೆ ಸಲ್ಲಿಸಿ, ಸೇವಾ ನಿವೃತ್ತಿ ಹೊಂದಿದ ಎಲ್ಲರ ಸೇವೆ ಸ್ಮರಿಸಿ, ಅವರ ನಿವೃತ್ತಿ ಜೀವನ ಶುಭದಾಯಕವಾಗಲಿ ಎಂದು ಟ್ರಸ್ಟಿನ ಹಾಗೂ ತಮ್ಮೆಲ್ಲರ ಪರವಾಗಿ ಹಾರೈಸುತ್ತೇನೆ.

## 20. ಶೈಕ್ಷಣಿಕ ಪ್ರಗತಿ ಹಾಗೂ ಲೆಕ್ಕ ಪತ್ರ ಪರಿಶೀಲನಾ ಕಾರ್ಯಕ್ರಮ

ಟ್ರಸ್ಟಿನ ನಿರ್ದೇಶನದಂತೆ ಈ ವರ್ಷವೂ ಕೂಡಾ ಶೈಕ್ಷಣಿಕ ಪ್ರಗತಿ ಪರಿಶೀಲನಾ ತಂಡವು 05–12–2011 ರಿಂದ 21–12–2011 ರವರೆಗೆ 11 ದಿವಸಗಳ ಕಾಲ ಟ್ರಸ್ಟಿನ ವಿವಿಧ ಸಂಸ್ಥೆಗಳಿಗೆ ಭೇಟ್ಟಿ ನೀಡಿ ಎಲ್ಲ ಶಾಲೆಗಳ, ಸಂಯುಕ್ತ ಪದವಿ ಪೂರ್ವ ಕಾಲೇಜುಗಳ ಶೈಕ್ಷಣಿಕ ಪ್ರಗತಿ ಹಾಗೂ ಲೆಕ್ಕ ಪತ್ರ ಪರಿಶೀಲನಾ ಕಾರ್ಯಕ್ರಮ ನಡೆಸಿರುತ್ತದೆ. ಪದವಿ ಹಾಗೂ ಪದವಿ ಪೂರ್ವ ವಿಭಾಗದ ಲೆಕ್ಕ ಪತ್ರಗಳನ್ನು ಕೂಡಾ ಪರಿಶೀಲಿಸಲಾಗಿದೆ. ಪರಿಶೀಲನಾ ಸಂದರ್ಭದಲ್ಲಿ ಕಂಡುಬಂದ ಕೆಲವು ಅಂಶಗಳನ್ನು ಪ್ರತ್ಯೇಕ ವರದಿಯಲ್ಲಿ ನೀಡಲಾಗಿದೆ. ಶೈಕ್ಷಣಿಕ ಪರಿಶೀಲನಾ ವರದಿಯನ್ನು ಎಲ್ಲ ಸಂಸ್ಥೆಗಳ ಮುಖ್ಯಸ್ಥರಿಗೆ ನೀಡಲಾಗಿದೆ.

ಈ ಪರಿಶೀಲನಾ ತಂಡದಲ್ಲಿ ವಿಷಯ ತಜ್ಞರಾಗಿ ಆಫೀಸ ಹಾಗೂ ಲೆಕ್ಕಪತ್ರ ಪರಿಶೀಲಕರಾಗಿ ಈ ಕೆಳಗಿನವರು ಭಾಗವಹಿಸಿದ್ದರು.

| | | |
|---|---|---|
| 1. | **ಪ್ರೊ. ಜಿ.ವಿ.ಭಟ್ಟ** | ಧರ್ಮದರ್ಶಿಗಳು, ಕೆನರಾ ವೆಲ್‌ಫೇರ್ ಟ್ರಸ್ಟ, ಅಂಕೋಲಾ |
| 2. | **ಶ್ರೀ ಕೃಷ್ಣಾನಂದ ವಿ.ಶೆಟ್ಟಿ** | ಆಡಳಿತಾಧಿಕಾರಿ, ಕೆನರಾ ವೆಲ್‌ಫೇರ್ ಟ್ರಸ್ಟ, ಅಂಕೋಲಾ |
| 3. | **ಶ್ರೀ ವಿಷ್ಣು ಎನ್.ನಾಯ್ಕ** | ನಿವೃತ್ತ ಪ್ರಾಚಾರ್ಯರು |
| 4. | **ಶ್ರೀ ರವೀಂದ್ರ ವಿ.ಕೇಣಿ** | ಪ್ರಾಚಾರ್ಯರು, ಪಿ.ಎಂ.ಸಂ.ಪ.ಪೂ.ಕಾಲೇಜ, ಅಂಕೋಲಾ |
| 5. | **ಶ್ರೀ ಎನ್.ಕೆ.ಭಟ್ಟ** | ಉಪನ್ಯಾಸಕರು, ಜ.ವಿ.ಸಂ.ಪ.ಪೂ.ಕಾಲೇಜ, ದಾಂಡೇಲಿ |
| 6. | **ಶ್ರೀ ಎಸ್.ಎಸ್.ಪ್ರಭು** | ನಿವೃತ್ತ ಮುಖ್ಯಾಧ್ಯಾಪಕರು, ಕಾರ್ಯಾಯಿನಿ ಪ್ರೌಢಶಾಲೆ, ಅವರ್ಸಾ |
| 7. | **ಶ್ರೀಮತಿ ಸರೋಜಿನಿ ವೆರ್ಣೇಕರ** | ಉಪನ್ಯಾಸಕರು, ಬಿ.ಎಡ್.ಕಾಲೇಜ್, ದಾಂಡೇಲಿ |
| 8. | **ಶ್ರೀ ಎಸ್.ವಿ.ಮುಳಗುಂದ** | ನಿವೃತ್ತ ಶಿಕ್ಷಕರು, ಪಿ.ಎಂ.ಹೈಸ್ಕೂಲ, ಅಂಕೋಲಾ |
| 9. | **ಶ್ರೀ ಪ್ರಕಾಶ ಎಸ್.ಎಸ್.** | ಉಪನ್ಯಾಸಕರು, ಬಿ.ಎಡ್.ಕಾಲೇಜ, ದಾಂಡೇಲಿ |
| 10. | **ಶ್ರೀ ಪ್ರಶಾಂತ ಎನ್.ರಾವ** | ಸ್ಪೇಷಲ್ ಕೋ–ಆರ್ಡಿನೇಟರ, ಕೆನರಾ ವೆಲ್‌ಫೇರ್ ಟ್ರಸ್ಟ |
| 11. | **ಶ್ರೀ ರಾಜು ಜಿ.ನಾಯ್ಕ** | ಆಫೀಸ ಸಹಾಯಕ,ಕೆನರಾ ವೆಲ್‌ಫೇರ್ ಟ್ರಸ್ಟ್, ಅಂಕೋಲಾ |

ಇವರೆಲ್ಲರ ಸಹಕಾರದಿಂದ ಟ್ರಸ್ಟಿನ ಎಲ್ಲ ಶಾಲೆಗಳ ಪ್ರಗತಿ ಪರಿಶೀಲನಾ ಕಾರ್ಯಕ್ರಮ ಯಶಸ್ವಿಯಾಗಿ ನಡೆಸಲಾಯಿತು. ಪ್ರತಿಯೊಂದು ಶಾಲೆಯ ಶೈಕ್ಷಣಿಕ ಪ್ರಗತಿ ಪರಿಶೀಲಿಸಿ, ಅಲ್ಲಿಯ ಕುಂದುಕೊರತೆಗಳನ್ನು ಶಿಕ್ಷಕರ ಸಮಕ್ಷಮ ಚರ್ಚಿಸಲಾಯಿತು. ಬಹುತೇಕ ಎಲ್ಲ ಶಿಕ್ಷಣ ಸಂಸ್ಥೆಗಳಲ್ಲಿ ಶೈಕ್ಷಣಿಕ ವಾತಾವರಣ ಚೆನ್ನಾಗಿರುವದಾಗಿ ಪರಿಶೀಲನಾ ಸಮಿತಿ ಅಭಿಪ್ರಾಯ ಪಟ್ಟಿದೆ. ಶೈಕ್ಷಣಿಕ ವಾತಾವರಣ ಇನ್ನೂ ಹೆಚ್ಚು ಪರಿಣಾಮಕಾರಿಯಾಗುವ ದಿಶೆಯಲ್ಲಿ ಅನೇಕ ಸಲಹೆ ಸೂಚನೆಗಳನ್ನು ವರದಿಯಲ್ಲಿ ನೀಡಲಾಗಿದೆ. 2011–2012ನೇ ಸಾಲಿನ ಪರಿಶೀಲನಾ ವರದಿಯನ್ನು ಆಯಾ ಸಂಸ್ಥೆಯ ಮುಖ್ಯಸ್ಥರಿಗೆ ನೀಡಲಾಗಿದೆ.

## 21. ಪ್ರಗತಿ ಪರಿಶೀಲನಾ ತಂಡದ ಸಲಹೆಗಳು

- "ಶಿಕ್ಷಣದ ಮೂಲಕ ಸಾಮಾಜಿಕ ಬದಲಾವಣೆ" ಎಂಬ ಟ್ರಸ್ಟಿನ ನಿಲುವನ್ನು ಮನಸಾ ಸ್ವೀಕರಿಸಿ ಆಯಾ ಭಾಗಗಳಲ್ಲಿ ಟ್ರಸ್ಟಿನ ಶಿಕ್ಷಣ ಸಂಸ್ಥೆಗಳು ಸಮಾಜಸೇವಾ ಕಾರ್ಯಕ್ಕೆ ತಮ್ಮನ್ನು ತೊಡಗಿಸಿಕೊಳ್ಳುವದು.
- ಪರಿಹಾರ ಬೋಧನಾ ಕಾರ್ಯವನ್ನು ಹೆಚ್ಚು ಸಮರ್ಪಕವಾಗಿ ಎಲ್ಲ ಶಾಲೆಗಳಲ್ಲಿಯೂ ನಿರ್ವಹಿಸುವದು.
- ಪರೀಕ್ಷಾ ಫಲಿತಾಂಶ ಉತ್ತಮ ಪಡಿಸುವದರ ಜೊತೆಗೆ ಪ್ರತಿಭಾವಂತ ವಿದ್ಯಾರ್ಥಿಗಳ ಬಗ್ಗೆಯೂ ಹೆಚ್ಚಿನ ಗಮನ ಹರಿಸಿ ಅವರ ಸಾಧನೆ ರಾಜ್ಯಮಟ್ಟದಲ್ಲಿ ಗುರುತಿಸುವಂತೆ ಪ್ರಯತ್ನಿಸುವದು.

- ❖ ಪಠ್ಯೇತರ ಚಟುವಟಿಕೆಗಳಲ್ಲೂ ಕುಡಾ ವಿಶೇಷ ಗಮನ ಹರಿಸಿ, ಪ್ರತಿಭೆಯುಳ್ಳ ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡುವದು.
- ❖ ಒಟ್ಟಾರೆಯಾಗಿ ಶಿಕ್ಷಕರು ತಮ್ಮ ಕ್ರೀಯಾಶೀಲತೆಯನ್ನು ಹೆಚ್ಚಿಸಿಕೊಂಡು, ಸಮಾಜದಲ್ಲಿ ಗೌರವ ಸಂಪಾದಿಸಿಕೊಂಡು, ಶಾಲೆಗೂ ಟ್ರಸ್ಟಿಗೂ ಕೀರ್ತಿ ಬರುವರತೆ ಕಾರ್ಯ ನಿರ್ವಹಿಸುವದು.

## 22.ಆಫೀಸ ಹಾಗೂ ಲೆಕ್ಕ ಪತ್ರ ನಿರ್ವಹಣೆ ಕುರಿತು ಪರಿಶೀಲನೆಯ ವರದಿ

2011–2012ನೇ ಸಾಲಿನ ಶೈಕ್ಷಣಿಕ ಪ್ರಗತಿ ಪರಿಶೀಲನಾ ಸಂದರ್ಭದಲ್ಲಿ ಟ್ರಸ್ಟಿನ ಎಲ್ಲ ಕಾಲೇಜ್, ಜ್ಯೂನಿಯರ್ ಕಾಲೇಜ್ ಹಾಗೂ ಹೈಸ್ಕೂಲಿನ ಆಫೀಸ ಕಾರ್ಯನಿರ್ವಹಣೆ ಹಾಗೂ ಲೆಕ್ಕ ಪತ್ರದ ಪರಿಶೀಲನೆಯನ್ನು ಕೈಗೊಳ್ಳಲಾಗಿದೆ. ಈ ಪರಿಶೀಲನೆ ಸಂದರ್ಭದಲ್ಲಿ ಕಂಡುಬಂದ ಲೋಪದೋಷಗಳನ್ನು ಈ ಕೆಳಗೆ ನೀಡಲಾಗಿದೆ.

1. ಹೈಸ್ಕೂಲಗಳಲ್ಲಿ, ಪದವಿ ಪೂರ್ವ ಕಾಲೇಜುಗಳಲ್ಲಿ ಹಾಗೂ ಪದವಿ ಕಾಲೇಜುಗಳಲ್ಲಿ ಮುಖ್ಯವಾಗಿ ಈ ಕೆಳಗೆ ನಮೂದಿಸಿದ 3 ಲೆಕ್ಕವನ್ನು ಪ್ರತ್ಯೇಕವಾಗಿ ನಿರ್ವಹಿಸಲಾಗಿದೆ.
    - Govt. A/c Book
    - Non-Govt. A/c Book
    - Management A/c Book

    - ▪ ಲೆಕ್ಕಪತ್ರ ನಿರ್ವಹಣೆಯ ಸಿಬ್ಬಂದಿಯು ಪ್ರತಿಯೊಂದು ಲೆಕ್ಕದ ವ್ಯವಹಾರವನ್ನು ಆಯಾ ದಿವಸವೇ ಬರೆದು ಅಂತಿಮ ಶಿಲ್ಕು ದಾಖಲಿಸಿದ ನಂತರ ಸಂಸ್ಥೆಯ ಮುಖ್ಯಸ್ಥರು ಅದನ್ನು ಪರಿಶೀಲಿಸಿ ಸಹಿ ಮಾಡುವದು ಕಡ್ಡಾಯ
    - ▪ ಪ್ರತಿ ತಿಂಗಳು ತಪ್ಪದೆ ಪ್ರತಿಯೊಂದು ಲೆಕ್ಕದ ಜಮಾ–ಖರ್ಚು ಪತ್ರಿಕೆ ತಯಾರಿಸಬೇಕು ಹಾಗೂ ಆಡಳಿತ ಮಂಡಳಿಯ ಲೆಕ್ಕದ ಖಾತೆಯ ಜಮಾ–ಖರ್ಚಿನ ಪತ್ರಿಕೆಯ ಪ್ರತಿಯನ್ನು ಟ್ರಸ್ಟಿಗೆ ನಿಯಮಿತವಾಗಿ ಸಲ್ಲಿಸಬೇಕು.
    - ▪ ಶಾಲಾ/ಕಾಲೇಜುಗಳ ಲೆಕ್ಕಪತ್ರ ನಿರ್ವಹಣೆ ಸರಿಯಾಗಿ ನಿರ್ವಹಿಸುವಂತೆ ಸಂಸ್ಥೆಯ ಎಲ್ಲ ಮುಖ್ಯಸ್ಥರೊಂದಿಗೆ ಹಾಗೂ ಶಿಕ್ಷಕ–ಶಿಕ್ಷಕೇತರ ಸಿಬ್ಬಂದಿಯವರೊಡನೆ ಚರ್ಚಿಸಿ ಸಲಹೆ ಸೂಚನೆ ನೀಡಲಾಗಿದೆ.
2. ಲೈಬ್ರರಿ ಪುಸ್ತಕದ ಸ್ಟಾಕ್ ರಜಿಸ್ಟರ್‌ನ್ನು ಸರಿಯಾಗಿ ನಿರ್ವಹಿಸಿ ಪ್ರತಿ ವರ್ಷದ ಕೊನೆಯಲ್ಲಿ ಪುಸ್ತಕಗಳ ಪರಿಶೀಲನೆ ನಡೆಸಿ ಕಳೆದುಹೋದ ಇಲ್ಲವೇ ಹಾಳಾದ ಪುಸ್ತಕಗಳ ಪಟ್ಟಿ ಮಾಡಿ ಅದನ್ನು ಸಂಬಂಧಿಸಿದ

ಇಲಾಖೆಯಿಂದ / ಆಡಳಿತ ಮಂಡಳಿಯಿಂದ ಮಂಜೂರಿ ಪಡೆದು ಸ್ಟಾಕಿನಲ್ಲಿ ಅಷ್ಟು ಪುಸ್ತಕವನ್ನು ಕಡಿಮೆ ಮಾಡಬೇಕು. ಇದನ್ನು ಕೆಲವು ಕಡೆ ನಿರ್ವಹಿಸಿದ್ದಾರೆ. ಇನ್ನೂ ಕೆಲವು ಸಂಸ್ಥೆಗಳು ಸರಿಯಾಗಿ ನಿರ್ವಹಿಸಿದ್ದು ಕಂಡುಬರಲಿಲ್ಲ. ಈ ಬಗ್ಗೆ ಹಿಂದಿನ ವರ್ಷದ ವರದಿಯಲ್ಲಿ ತಿಳಿಸಲಾಗಿತ್ತು. ಪುಸ್ತಕದ ಸ್ಟಾಕ್ ರಜಿಸ್ಟರನ್ನು ಹಾಗೂ ಇನ್ನಿತರ ದಾಖಲೆಗಳನ್ನು ಸರಿಯಾಗಿ ನಿರ್ವಹಿಸಬೇಕು.

3. ಶಾಲೆ / ಕಾಲೇಜಿನ ಹೆಸರಿಗೆ ಮಂಜೂರಾದ ಜಾಗೆಯ ರಿಕಾರ್ಡನ್ನು ಪ್ರತಿ ವರ್ಷ ಸಂಬಂಧಿಸಿದ ತಹಶೀಲದಾರರಿಂದ ಪಡೆಯಬೇಕು. ಲೀಜ್ ಮೇಲೆ ಮಂಜೂರಾದ ಜಾಗೆಯ ಕುರಿತು, ಲೀಜ್ ಅವಧಿ ಮುಗಿಯುವ ಸಾಕಷ್ಟು ಪೂರ್ವದಲ್ಲಿ ಸಂಬಂಧಿಸಿದ ಅಧಿಕಾರಿಗಳಿಗೆ ಅರ್ಜಿ ಸಲ್ಲಿಸಿ ಲೀಜ್ ಅವಧಿಯನ್ನು ವಿಸ್ತರಿಸಿಕೊಳ್ಳಬೇಕು ಹಾಗೂ ಆ ಬಗ್ಗೆ ಟ್ರಸ್ಟಿಗೆ ಕಾಲಕಾಲಕ್ಕೆ ಮಾಹಿತಿ ಸಲ್ಲಿಸಬೇಕು. ಪ್ರತಿ ವರ್ಷ ಶೈಕ್ಷಣಿಕ ಪ್ರಗತಿ ಪರಿಶೀಲನೆ ಸಂದರ್ಭದಲ್ಲಿ ಸಂಸ್ಥೆಯ ಜಾಗದ ಹೊಸ ರಿಕಾರ್ಡ ನೀಡಬೇಕು. ಈ ವರ್ಷ ಎಲ್ಲ ಸಂಸ್ಥೆಯ ಮುಖ್ಯಸ್ಥರು ಸಕಾಲದಲ್ಲಿ ಮಾಹಿತಿಯನ್ನು ಪೂರೈಸಿರುವರು.

4. Kruger Foundation ನಿಂದ ಮಂಜೂರಾದ ಹಣವನ್ನು ಟ್ರಸ್ಟಿನ ವಿವಿಧ ಮಾಧ್ಯಮಿಕ ಶಾಲೆಗಳಲ್ಲಿ ತಾತ್ಕಾಲಿಕವಾಗಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕರಿಗೆ ಪ್ರತಿ ತಿಂಗಳು ರೂ.1000/– ರಂತೆ ನೀಡಲು ಸಂಸ್ಥೆಯ ಅಧ್ಯಕ್ಷರು ತಿಳಿಸಿದಂತೆ ಸಂಸ್ಥೆಗೆ ಹಣ ನೀಡಲಾಗಿದೆ. ಟ್ರಸ್ಟಿನ ವಿವಿಧ ಶಾಲೆಯಲ್ಲಿ ಸೇವೆ ಸಲ್ಲಿಸುತ್ತಿರುವ ತಾತ್ಕಾಲಿಕ ಶಿಕ್ಷಕರು ತಮ್ಮ ಬಿಡುವಿನ ಅವಧಿಯಲ್ಲಿ ಶೈಕ್ಷಣಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ತರಬೇತಿ ನೀಡಿ ಅವರ ಶಿಕ್ಷಣ ಮಟ್ಟ ಸುಧಾರಿಸುವಂತೆ ವಿಶೇಷ ಪ್ರಯತ್ನ ಮಾಡಬೇಕು. ಈ ಕುರಿತು ದಾಖಲೆಯನ್ನು ಇಡಬೇಕು. ಶಾಲೆಯ ಮುಖ್ಯಾಧ್ಯಾಪಕರು ಈ ಬಗ್ಗೆ ಗಮನ ಹರಿಸಿ ಅಭ್ಯಾಸದಲ್ಲಿ ಹಿಂದುಳಿದ ಮಕ್ಕಳಿಗೆ ತಾತ್ಕಾಲಿಕವಾಗಿ ಕಾರ್ಯ ನಿರ್ವಹಿಸುವ ಶಿಕ್ಷಕರು ವಿಶೇಷ ತರಬೇತಿ ಸರಿಯಾಗಿ ನೀಡುತ್ತಿರುವದನ್ನು ಪರಿಶೀಲಿಸಿ ದೃಢೀಕರಿಸಿಕೊಳ್ಳಬೇಕು. ಈ ಕೆಲಸ ಸರಿಯಾಗಿ ನಿರ್ವಹಿಸುವವರಿಗೆ ಮಾತ್ರ ಈ ಸಹಾಯಧನ ನೀಡಬೇಕು.

5. ಈ ಯೋಜನೆಯಿಂದ ಶೈಕ್ಷಣಿಕವಾಗಿ ಹಿಂದುಳಿದ ಮಕ್ಕಳ ಪ್ರಗತಿಗೆ ಸಹಾಯಕಾರಿಯಾಗಿದೆ ಎಂಬುದು ಪರಿಶೀಲನಾ ಸಮಿತಿಯ ಅಭಿಪ್ರಾಯವಾಗಿದೆ. ಈ ಯೋಜನೆಯನ್ನು ಈ ವರ್ಷವೂ ಮುಂದುವರೆಸಿದ ಬಗ್ಗೆ Kruger Foundation ಸಂಸ್ಥೆಗೆ ಹಾಗೂ ಅಧ್ಯಕ್ಷರಿಗೆ ಧನ್ಯವಾದವನ್ನು ಸಲ್ಲಿಸುತ್ತೇವೆ. ಈ ಯೋಜನೆಯ ಲಾಭ ಎಲ್ಲ ಅರ್ಹ ಮಕ್ಕಳಿಗೆ ಲಭಿಸುವಲ್ಲಿ ಸಂಸ್ಥೆಯ ಮುಖ್ಯಸ್ಥರು ವಿಶೇಷ ಗಮನ ನೀಡುವ ಅವಶ್ಯಕತೆ ಇದೆ.

6. ಸಿಬ್ಬಂದಿಗಳ ಸೇವಾ ಪುಸ್ತಕದಲ್ಲಿ ಅವರು ಪಡೆದ ರಜೆಯ ವಿವರಗಳನ್ನು ಸರಿಯಾಗಿ ನಮೂದಿಸಬೇಕು. ವಾರ್ಷಿಕ ಮುಂಭಡ್ತಿ ಹಾಗು ಇನ್ನಿತರ ಸೇವಾ ಭಡ್ತಿಗಳನ್ನು ಕಾಲಕಾಲಕ್ಕೆ ಸರಿಯಾಗಿ ಸೇವಾ ಪುಸ್ತಕದಲ್ಲಿ ನಮೂದಿಸಿ, ಸಂಸ್ಥೆಯ ಮುಖ್ಯಸ್ಥರು ದೃಢೀಕರಿಸಬೇಕು.

7. ಶಾಲಾ / ಕಾಲೇಜಿನ ಮುಖ್ಯಸ್ಥರು ರಜೆಯ ಮೇಲೆ ಹೋಗುವ ಪೂರ್ವದಲ್ಲಿ ತಮ್ಮ ರಜೆಯ ಅರ್ಜಿಯನ್ನು ಟ್ರಸ್ಟಿನ ಕಾರ್ಯಾಲಯಕ್ಕೆ ಸಾಕಷ್ಟು ಮುಂಚಿತವಾಗಿ ಕಳುಹಿಸಬೇಕು. ಹಾಗೂ ತಮ್ಮ ಸಂಸ್ಥೆಯ ಹಿರಿಯ ಸಹೋದ್ಯೋಗಿಯವರಿಗೆ ತಮ್ಮ ರಜಾ ಅವಧಿಯಲ್ಲಿ In-charge ಆಗಿ ಕಾರ್ಯನಿರ್ವಹಿಸುವಂತೆ ಲಿಖಿತವಾಗಿ ತಿಳಿಸಬೇಕು. ವಾರ್ಷಿಕ ತಪಾಸಣಾ ಸಂದರ್ಭದಲ್ಲಿ ಕೆಲವು ಸಂಸ್ಥೆಗಳು ಇದನ್ನು ಪಾಲಿಸದೇ ಇರುವದು ಗಮನಕ್ಕೆ ಬಂದಿರುತ್ತದೆ. ಅವರಿಗೆ ಈ ಹಿಂದೆಯೂ ಕೂಡಾ ಸೂಚನೆ ನೀಡಲಾಗಿತ್ತು. ಈ ಕುರಿತು ಸುತ್ತೋಲೆಯನ್ನು ಕೂಡಾ ಹೊರಡಿಸಲಾಗಿದೆ. ಸಂಸ್ಥೆಯ ಮುಖ್ಯಸ್ಥರು ತಮ್ಮ ರಜೆಯ ಅರ್ಜಿಯನ್ನು ಮುಂಚಿತವಾಗಿ ಮಂಜೂರಿ ಮಾಡಿಸಿಕೊಳ್ಳದೆ ಇರುವದು ತಮ್ಮ ರಜಾ ಅವಧಿಯಲ್ಲಿ In-charge ವ್ಯವಸ್ಥೆ ಮಾಡದೆ ಇರುವದು ಕಂಡುಬಂದಿದೆ. ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು ತಮ್ಮ ರಜೆ ಅರ್ಜಿಯನ್ನು ಟ್ರಸ್ಟಿಗೆ ಸಲ್ಲಿಸಿ ಮುಂಚಿತವಾಗಿ ಮಂಜೂರಿ ಮಾಡಿಸಿಕೊಳ್ಳುವಂತೆ ಇನ್ನೊಮ್ಮೆ ತಿಳಿಸಲಾಗಿದೆ. ಇದನ್ನು ಪಾಲಿಸದಿದ್ದರೆ ಆಡಳಿತಾತ್ಮಕವಾದ ತೊಂದರೆ ಉಂಟಾಗುತ್ತದೆ.
8. ಕೆಲವು ಶಾಲಾ/ಕಾಲೇಜುಗಳಲ್ಲಿ ಸಿಬ್ಬಂದಿಗಳ ಹಾಜರಿ ಪುಸ್ತಕದ ಮೇಲೆ ಮುಂಜಾನೆ ಹಾಗೂ ಮದ್ಯಾಹ್ನ ಪ್ರತ್ಯೇಕವಾಗಿ ಸಹಿ ಮಾಡುವ ಬದಲು ಮುಂಜಾನೆ ಬಂದಾಗಲೇ ಎರಡು ಸಹಿ ಮಾಡಿರುವದು ಕಂಡು ಬಂದಿದೆ. ಇದು ಸರಿಯಾದ ಕ್ರಮವಲ್ಲ. ಈ ಬಗ್ಗೆ ಸಂಬಂಧಿಸಿದ ಮುಖ್ಯಸ್ಥರಿಗೆ ತಿಳಿಸಲಾಗಿದೆ.

## 23. ಸಾಮಾನ್ಯ ಸೂಚನೆಗಳು

1. ಶಾಲಾ ಅಭಿವೃದ್ಧಿ ಕೆಲಸ ನಿರ್ವಹಿಸುವಾಗ ಇಲ್ಲವೆ ಲೈಬ್ರರಿ / ಲೆಬೋರೆಟರಿ / ಸ್ಪೋರ್ಟ್ಸ್ / ಪುಸ್ತಕ / ಸಲಕರಣೆ ಇತ್ಯಾದಿ ಖರೀದಿಸುವ ಸಂದರ್ಭದಲ್ಲಿ ಪ್ರತಿವರ್ಷ ಶೈಕ್ಷಣಿಕ ವರ್ಷ ಪ್ರಾರಂಭವಾದ ಕೂಡಲೆ ಈ ಕೆಳಗೆ ನಮೂದಿಸಿದವರ ಒಂದು ಉಪಸಮಿತಿ ನೇಮಿಸಿಕೊಂಡು ಕಾರ್ಯ ನಿರ್ವಹಿಸಲು ಸೂಚಿಸಲಾಗಿದೆ. ಕಾಲಕಾಲಕ್ಕೆ ಈ ಸಮಿತಿಯು ಅಭಿವೃದ್ಧಿ ಕಾರ್ಯದ ಜೊತೆಗೆ ಅದರ ಮೇಲ್ವಿಚಾರಣೆ ಕೂಡಾ ನಡೆಸುತ್ತಿರಬೇಕು ಈ ಉಪಸಮಿತಿಯಲ್ಲಿ –

    - ಸಂಸ್ಥೆಯ ಮುಖ್ಯಸ್ಥರು
    - ಹಿರಿಯ ಅಧ್ಯಾಪಕರು
    - ಸ್ಟಾಫ್ ಕೌನ್ಸಿಲ ಕಾರ್ಯದರ್ಶಿ ಹಾಗೂ
    - ಆಫೀಸನಲ್ಲಿ ಕಾರ್ಯ ನಿರ್ವಹಿಸುವ ಹಿರಿಯ ಸಿಬ್ಬಂದಿ ಇರಬೇಕು

ಈ ಉಪಸಮಿತಿ ಕಾಲಕಾಲಕ್ಕೆ ಸಭೆ ಸೇರಿ ಅಭಿವೃದ್ಧಿ ಕೆಲಸದ ಬಗ್ಗೆ ಇಲ್ಲವೆ ಸಲಕರಣೆ ಖರೀದಿಸುವ ಕುರಿತು ನಿರ್ಣಯ ತೆಗೆದುಕೊಂಡು ಕಾರ್ಯ ನಿರ್ವಹಿಸಿದರೆ ಹಾಗೂ ಹಣ ಪಾವತಿಸುವಾಗಲೂ ಈ ಸಮಿತಿಯ ಒಪ್ಪಿಗೆ ಪಡೆದು ಹಣ ಪಾವತಿಸಿದರೆ ಸಂಸ್ಥೆಯಲ್ಲಿ ಇನ್ನೂ ಹೆಚ್ಚಿನ ಪಾರದರ್ಶಕತೆ ಕಾಣಬಹುದು. ಈ ಕುರಿತು ಹಿಂದಿನ ವರ್ಷಗಳ ವರದಿಯಲ್ಲಿ ನಮೂದಿಸಲಾಗಿತ್ತು. ಆದರೆ ಕೆಲವು ಸಂಸ್ಥೆಗಳ ಮುಖ್ಯಸ್ಥರು ಈ ಬಗ್ಗೆ ಗಮನ ಹರಿಸಿದ ಹಾಗೆ ಕಂಡುಬರುವದಿಲ್ಲ ಹಾಗೂ ಇದನ್ನು ಕಾರ್ಯರೂಪಕ್ಕೆ ತಂದಿರುವದಿಲ್ಲ. ಶಾಲಾ/ಕಾಲೇಜಿನ ಲೆಕ್ಕಪತ್ರದಲ್ಲಿ ಲೆಕ್ಕಪತ್ರ ಸರಿಯಾಗಿ ನಿರ್ವಹಣೆಯಾಗಬೇಕಾದರೆ ಈ ನಿಯಮವನ್ನು ಪಾಲಿಸುವದು ಅವಶ್ಯ.

2. ಇಲಾಖೆಯಿಂದ ವಿದ್ಯಾರ್ಥಿಗಳಿಗೆ ಬರುವ ಸ್ಕಾಲರಶಿಪ್ / ವಿದ್ಯಾರ್ಥಿ ವೇತನ ಇತ್ಯಾದಿ ಹಣವನ್ನು ವಿದ್ಯಾರ್ಥಿಗಳಿಗೆ ಚೆಕ್ ಮೂಲಕ ಆಯಾ ವರ್ಷವೇ ಪಾವತಿಸಬೇಕು. ಕೆಲವು ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳಿಗೆ ನೀಡಿದ ಸ್ಕಾಲರಶಿಫ ಚೆಕ್ಕುಗಳನ್ನು ವಿದ್ಯಾರ್ಥಿಗಳಿಗೆ ನೀಡದೆ ಹಾಗೆಯೆ ಇಟ್ಟುಕೊಂಡಿದ್ದು ಆಡಿಟ ವೇಳೆಯಲ್ಲಿ ಕಂಡುಬಂದಿದೆ. ಇದರಿಂದ Bank Reconciliation ಸರಿಯಾಗುವದಿಲ್ಲ. ಯಾವದೇ ಕಾರಣಕ್ಕೂ ವಿದ್ಯಾರ್ಥಿಗಳ ಹೆಸರಿಗೆ ನೀಡಿದ ಚೆಕ್ಕನ್ನು ಕೂಡಲೆ ಸಂಬಂಧಿಸಿದವರಿಗೆ ನೀಡಬೇಕು. ಮಾರ್ಚ 31ರ ನಂತರ ಅದನ್ನು ಇಟ್ಟುಕೊಳ್ಳಬಾರದು. ಈ ಬಗ್ಗೆ ಸಂಸ್ಥೆಯ ಮುಖ್ಯಸ್ಥರು ಪರಿಶೀಲಿಸಿ ಕ್ರಮ ತೆಗೆದುಕೊಳ್ಳುವದು ಅವಶ್ಯ.

3. ಅನುಮೋದಿತ ಶಿಕ್ಷಕರಿಗೆ ವಿಷಯ ಹೊಂದಾಣಿಕೆ ಮಾಡಿಕೊಂಡು ಇಲಾಖೆ ನಿಗದಿಪಡಿಸಿದ ಕಾರ್ಯಭಾರವನ್ನು ನೀಡಬೇಕು. ಹಾಗೂ ಮುಖ್ಯಾಧ್ಯಾಪಕರು/ಪ್ರಾಚಾರ್ಯರು ಇಲಾಖಾ ನಿಗದಿಪಡಿಸಿದ ಕಾರ್ಯಭಾರವನ್ನು ತಪ್ಪದೆ ತೆಗೆದುಕೊಳ್ಳಬೇಕು. ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಉಪನ್ಯಾಸಕರಿಗೆ ಕೇವಲ 8 ತಾಸಿನ ಕಾರ್ಯಭಾರವಿದ್ದರೆ ಅವರಿಗೆ 8 ತಾಸಿನ ಕಾರ್ಯಭಾರವನ್ನು ಹೈಸ್ಕೂಲ ವಿಭಾಗದಲ್ಲಿ ನೀಡುವಂತೆ ಈ ಹಿಂದೆ ತಿಳಿಸಲಾಗಿತ್ತು. ಸಂಬಂಧಪಟ್ಟ ಕಾಲೇಜಿನ ಪ್ರಾಚಾರ್ಯರು ಈ ಕುರಿತು ಗಮನ ಹರಿಸುವಂತೆ ಕೋರಲಾಗಿದೆ. ಪಿ.ಎಂ.ಸಂಯುಕ್ತ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರಿಗೆ 8 ತಾಸಿನ ಕಾರ್ಯಭಾರವನ್ನು ಜಿ.ಸಿ.ಪದವಿ ಪೂರ್ವ ವಿಭಾಗದಲ್ಲಿ 2012–13ನೇ ಶೈಕ್ಷಣಿಕ ವರ್ಷದಿಂದ ನೀಡಲಾಗಿದೆ. ಪದವಿ ಪೂರ್ವ ಕಾಲೇಜಿನಲ್ಲಿ ವಾರಕ್ಕೆ 8 ತಸಿನ ಕಾರ್ಯಭಾರ ಇರುವ ಉಪನ್ಯಾಸಕರಿಗೆ ಹೈಸ್ಕೂಲ ವಿಭಾಗದಲ್ಲಿ ಕಾರ್ಯಭಾರ ನೀಡಿ ಕೂಡಲೆ ಪ್ರಾಚಾರ್ಯರು ವರದಿಯನ್ನು ಟ್ರಸ್ಟಿಗೆ ಸಲ್ಲಿಸಬೇಕು.

4. ಟ್ರಸ್ಟಿನ ಶಾಲಾ/ಕಾಲೇಜುಗಳ ಮುಖ್ಯಸ್ಥರು ಅನಿವಾರ್ಯ ಪ್ರಸಂಗದಲ್ಲಿ ಶಾಲಾ/ಕಾಲೇಜಿಗೆ ಸಂಬಂಧಪಟ್ಟ ಯಾವದಾದರೂ ಉದ್ದೇಶಕ್ಕಾಗಿ ಮುಂಗಡ ಹಣ ಪಡೆದಿದ್ದರೆ, ಅದರ ಲೆಕ್ಕವನ್ನು ಒಂದು ವಾರದ ಒಳಗೆ ಮುಕ್ತಾಯಗೊಳಿಸಬೇಕೆಂದು ಈ ಹಿಂದೆಯೇ ಅನೇಕ ಬಾರಿ ತಿಳಿಸಲಾಗಿದೆ. ಇದನ್ನು ಕಟ್ಟು ನಿಟ್ಟಾಗಿ ಸಂಸ್ಥೆಯ ಮುಖ್ಯಸ್ಥರು ಪಾಲಿಸಬೇಕು.

5. ಶಾಲಾ/ಕಾಲೇಜಿನಿಂದ ಇಲ್ಲವೇ ಆಡಳಿತ ಮಂಡಳಿ ವತಿಯಿಂದ ನೀಡುವ ರಸೀದಿಗಳ ಮೇಲೆ ಕೆಲವು ಸಂಸ್ಥೆಗಳಲ್ಲಿ ಸಹಿ ಮಾಡದೆ ರಸೀದಿ ನೀಡುತ್ತಿರುವದು ಪರಿಶೀಲನೆ ವೇಳೆ ಕಂಡು ಬಂದಿದೆ. ಯಾವದೇ ರಸೀದಿಯನ್ನು ಸಹಿ ಇಲ್ಲದೇ ನೀಡಬಾರದು. ಈ ಕುರಿತು ಕಳೆದ ಸಾಲಿನ ವರದಿಯಲ್ಲೂ ತಿಳಿಸಲಾಗಿತ್ತು.
6. ಶಾಲಾ/ಕಾಲೇಜು ವತಿಯಿಂದ ಪಾವತಿಸಿದ ಹಣಕ್ಕೆ ರಸೀದಿ ಮತ್ತು ಬಿಲ್ಲು / ವಿವರಣೆ ಪತ್ರ ಸರಿಯಾಗಿ ಇಟ್ಟಿದ್ದು ಕೆಲವು ಸಂಸ್ಥೆಗಳಲ್ಲಿ ಕಂಡು ಬಂದಿರುವದಿಲ್ಲ. ಪ್ರತಿಯೊಂದು ಬಿಲ್ಲಿನ ಹಣವನ್ನು ನಿಯಮದ ಪ್ರಕಾರ ಪಾವತಿಸಿ ಸರಿಯಾದ ಓಚರನ್ನು ಇಡಬೇಕು ಪ್ರತಿಯೊಂದು ಬಿಲ್ಲು ಪಾವತಿಸಿದ ಕೂಡಲೆ ಅದರ ಮೇಲೆ Head of Account ಕಡ್ಡಾಯವಾಗಿ ನಮೂದಿಸಬೇಕು. ಇದನ್ನು ಸಂಸ್ಥೆಯ ಮುಖ್ಯಸ್ಥರು ಪರಿಶೀಲಿಸಿ ಲೆಕ್ಕಪತ್ರದ ನಿರ್ವಹಣೆ ಪುಸ್ತಕದ ಮೇಲೆ ಸಹಿ ಮಾಡಬೇಕು.
7. ಕೆನರಾ ವೆಲ್‌ಫೇರ್ ಟ್ರಸ್ಟಿಗೆ ನೀಡುವ ದೇಣಿಗೆಗೆ ಸೆಕ್ಷನ 80G ಪ್ರಕಾರ ಆದಾಯಕರ ವಿನಾಯ್ತಿಯನ್ನು, ಆದಾಯಕರ ಇಲಾಖೆಯವರು ದಿನಾಂಕ 03–06–2011 ರಂದು ಆದೇಶ ಹೊರಡಿಸಿ ಸೆಕ್ಷನ 80G ಪ್ರಕಾರ ದೇಣಿಗೆ ಹಣಕ್ಕೆ ನೀಡುವ ವಿನಾಯ್ತಿಯನ್ನು ಮುಂದುವರೆಸಿದ್ದಾರೆ. ಈ ಬಗ್ಗೆ ಇಲಾಖೆಗೆ ಕೃತಜ್ಞತೆ ಸಲ್ಲಿಸುತ್ತೇನೆ.

## 24. ಶಿಕ್ಷಣಕ್ಕಾಗಿ ಆರ್ಥಿಕ ನೆರವು – 2012–13ನೇ ಸಾಲಿನಲ್ಲಿ ಟ್ರಸ್ಟು ರೂಪಿಸಿದ ಹೊಸದಾದ ಯೋಜನೆ

ಕೆನರಾ ವೆಲ್‌ಪೇರ್ ಟ್ರಸ್ಟು ಕಳೆದ ಆರು ದಶಕಗಳಿಂದ ಶೈಕ್ಷಣಿಕ ಹಾಗೂ ಸಾಮಾಜಿಕ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತ ಬಂದಿದೆ. ಜಿಲ್ಲಾ ಮಟ್ಟದಲ್ಲಿ ಆರ್ಥಿಕವಾಗಿ ತೀರ ಹಿಂದುಳಿದ ಹಾಗೂ ಶೋಷಿತರನ್ನು ಶೈಕ್ಷಣಿಕವಾಗಿ ಮೇಲಕ್ಕೆ ತರುವದು ಟ್ರಸ್ಟಿನ ಮುಖ್ಯ ಕಾಳಜಿಗಳಲ್ಲೊಂದು. ಈ ಕಾರಣಕ್ಕಾಗಿ ಟ್ರಸ್ಟು ಶಾಲಾ/ಕಾಲೇಜುಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಗ್ರಾಮೀಣ ಭಾಗದಲ್ಲಿ ಪ್ರಾರಂಭಿಸಿದೆ. ಟ್ರಸ್ಟು ತನ್ನ ಧ್ಯೆಯೋದ್ದೇಶಗಳಿಗನುಗುಣವಾಗಿ ಕಾರ್ಯನಿರ್ವಹಿಸುತ ಬಂದಿದೆ. **ಆರ್ಥಿಕ ಕಾರಣಗಳಿಗಾಗಿ ಬಡ ಹಾಗೂ ಅರ್ಹ ವಿದ್ಯಾರ್ಥಿಗಳು ಶಿಕ್ಷಣದಿಂದ ವಂಚಿತರಾಗಬಹುದಾದ ಕಾರಣದಿಂದ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡುವ ಒಂದು ಹೊಸ ಯೋಜನೆ "ಶಿಕ್ಷಣಕ್ಕಾಗಿ ಆರ್ಥಿಕ ನೆರವು" 2012–13ನೇ ಸಾಲಿನಿಂದ ಪ್ರಾರಂಬಿಸಲು ಕುಗ್ರರ ಫೌಂಡೇಶನ ಹಾಗೂ ಉಚ್ಚ ನ್ಯಾಯಾಲಯದ ನ್ಯಾಯವಾದಿಗಳಾದ ಶ್ರೀ ದೇವದತ್ತ ಕಾಮತ ಇವರು ಮುಂದೆ ಬಂದು ಈ ಮಹತ್ವದ ಯೋಜನೆಗೆ ಪ್ರಾಯೋಜಕರಾಗಿದ್ದಾರೆ.** ಟ್ರಸ್ಟು ಈ ಯೋಜನೆಯನ್ನು ಕಾರ್ಯಗತಗೊಳಿಸಲಿದೆ. ಆರ್ಥಿಕ ತೊಂದರೆಯಿಂದ ನಮ್ಮ ಜಿಲ್ಲೆಯ ವಿದ್ಯಾರ್ಥಿಗಳು ಉನ್ನತ ಶಿಕ್ಷಣದಿಂದ ವಂಚಿತರಾಗಕೂಡದು ಎಂಬುದೇ ಟ್ರಸ್ಟು ಮತ್ತು ಪ್ರಾಯೋಜಕರ ಆಶಯವಾಗಿದೆ.

2012–2013ನೇ ಶೈಕ್ಷಣಿಕ ವರ್ಷದಲ್ಲಿ ಈ ಯೋಜನೆಯ ಮೇರೆಗೆ ಅರ್ಹ ಮತ್ತು ಬಡ ವಿದ್ಯಾರ್ಥಿಗಳಿಗೆ ಶಿಕ್ಷಣಕ್ಕಾಗಿ ಆರ್ಥಿಕ ನೆರವು ನೀಡುವ ಉದ್ದೇಶದಿಂದ ಉತ್ತರ ಕನ್ನಡ ಜಿಲ್ಲೆಯ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಈ ಯೋಜನೆಯ ಮುಖ್ಯಾಂಶಗಳು:

1. ಅರ್ಜಿ ನೀಡುವ ವಿದ್ಯಾರ್ಥಿಗಳು ಆರ್ಥಿಕವಾಗಿ ಬಡವರಾಗಿದ್ದು ಎಸ್.ಎಸ್.ಎಲ್.ಸಿ.ಯಲ್ಲಿ 80% ಪಿ.ಯು.ಸಿ. ದ್ವಿತೀಯ ವರ್ಷದಲ್ಲಿ 70% ಅಥವಾ ಹೆಚ್ಚು ಅಂಕ ಪಡೆದಿರಬೇಕು
2. ಆಯ್ಕೆಗೊಂಡ ವಿದ್ಯಾರ್ಥಿಗಳು ಭರಿಸಬೇಕಾದ ಫೀ ಶುಲ್ಕದಲ್ಲಿ ಗರಿಷ್ಟ ರೂ.3000 ಹಣವನ್ನು ಪಾವತಿಸಲಾಗುವದು.
3. ಈ ಸಹಾಯಧನ ಮುಂದುವರಿಕೆಯನ್ನು ಪರೀಕ್ಷೆಯಲ್ಲಿ ಫಲಾನುಭವಿ ವಿದ್ಯಾರ್ಥಿಗಳು ತೋರುವ ಶೈಕ್ಷಣಿಕ ಪ್ರಗತಿಯನ್ನು ಅವಲಂಬಿಸಿರುತ್ತದೆ.

ಈ ವರ್ಷ ಎಸ್.ಎಲ್.ಎಲ್.ಸಿ. ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಶೇಕಡಾ 80ಕ್ಕಿಂತ ಹೆಚ್ಚು ಅಂಕ ಪಡೆದು ಪ್ರಥಮ ಪಿ.ಯು.ಸಿ.ಯಲ್ಲಿ ಓದುತ್ತಿರುವ ಅರ್ಹ ಬಡ 100 ವಿದ್ಯಾರ್ಥಿಗಳಿಗೆ ಹಾಗೂ ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ ಶೇಕಡಾ 70ಕ್ಕಿಂತ ಹೆಚ್ಚು ಅಂಕ ಪಡೆದ ಬಡ ಹಾಗೂ ಅರ್ಹ 200 ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ನೀಡುವ ಯೋಜನೆ ಪ್ರಾಯೋಜಕರಿಗಿದೆ. ಈ ಯೋಜನೆಯಡಿ ಈ ವರ್ಷ ಒಟ್ಟು ರೂ.9 ಲಕ್ಷ ವಿದ್ಯಾರ್ಥಿಗಳಿಗೆ ಪಾವತಿಸಬೇಕಾಗಬಹುದು. 2012–2013 ರಿಂದ 2016–2017ರ ವರೆಗೆ ಅಂದರೆ 5 ವರ್ಷದಲ್ಲಿ ಈ ಯೋಜನೆಯಡಿ ವಿದ್ಯಾರ್ಥಿಗಳಿಗೆ ಸುಮಾರು ರೂ.1 ಕೋಟಿ ಸ್ಕಾಲರ್‌ಶಿಪ್ ರೂಪದಲ್ಲಿ ದೊರೆಯಲಿದೆ.

ಈ ಯೋಜನೆಯ ಲಾಭ ಬಡ ಹಾಗೂ ಅರ್ಹ ವಿದ್ಯಾರ್ಥಿಗಳಿಗೆ ದೊರೆಯಬೇಕೆಂಬ ಆಶಯದೊಂದಿಗೆ ಜಿಲ್ಲೆಯ ಎಲ್ಲ ಪ್ರೌಢ ಶಾಲೆ ಹಾಗೂ ಕಾಲೇಜುಗಳ ಮುಖ್ಯಸ್ಥರಿಗೆ ಈ ಯೋಜನೆಯ ಮಾಹಿತಿ ಪತ್ರ ಹಾಗೂ ಅರ್ಜಿಯ ನಮೂನೆಗಳನ್ನು ವ್ಯಾಪಕವಾಗಿ ವಿದ್ಯಾರ್ಥಿಗಳ ಗಮನಕ್ಕೆ ತರಲು ಕಳುಹಿಸಲಾಗಿದೆ.

ಟ್ರಸ್ಟು ನಡೆಸುತ್ತಿರುವ ಎಲ್ಲ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು ಮುಂಬರುವ ವರ್ಷಗಳಲ್ಲಿ ಈ ಯೋಜನೆಯ ಕುರಿತು ಅರ್ಹ ಹಾಗೂ ಬಡ ವಿದ್ಯಾರ್ಥಿಗಳ ಗಮನಕ್ಕೆ ತಂದು ಅರ್ಹ ವಿದ್ಯಾರ್ಥಿಗಳು ಇದರ ಲಾಭ ಪಡೆಯುವಂತೆ ತಿಳುವಳಿಕೆ ನೀಡಬೇಕಾಗಿ ಈ ಮೂಲಕ ವಿನಂತಿಸುತ್ತೇನೆ.

ಹೊಸದಾಗಿ ಪ್ರಾರಂಭಿಸಿದ ಈ ಯೋಜನೆಯ ಪ್ರಯೋಜನ ಪಡೆಯಲು ಜಿಲ್ಲೆಯಿಂದ ಇದುವರೆಗೆ 600ಕ್ಕೂ ಹೆಚ್ಚು ವಿದ್ಯಾರ್ಥಿಗಳು ಅರ್ಜಿಯನ್ನು ಸಲ್ಲಿಸಿದ್ದಾರೆ. ಇನ್ನೂ ಅರ್ಜಿಗಳು ಬರುತ್ತಲೇ ಇದೆ. ಟ್ರಸ್ಟು ನೇಮಿಸಿದ ಪರಿಶೀಲನಾ ಸಮಿತಿಯು ಈ ಅರ್ಜಿಗಳನ್ನು ಪರಿಶೀಲಿಸಿ ಅರ್ಹ ಅಭ್ಯರ್ಥಿಗಳಿಗೆ ಸಹಾಯಧನ ಮಂಜೂರ ಮಾಡುವಂತೆ ಅಧ್ಯಕ್ಷರಿಗೆ ಶಿಫಾರಸು ಮಾಡಲಿದೆ.

ಈ ಯೋಜನೆಯನ್ನು ಜಾರಿಗೆ ತಂದಿರುವ ಟ್ರಸ್ಟಿನ ಅಧ್ಯಕ್ಷರನ್ನು ಹಾಗೂ ಪ್ರಾಯೋಜಕರಾಗಿರುವ ಕ್ರುಗರ ಪೌಂಡೇಶನ ಹಾಗೂ ಉಚ್ಚ ನ್ಯಾಯಾಲಯದ ನ್ಯಾಯವಾದಿಗಳಾದ ಶ್ರೀ ದೇವದತ್ತ ಕಾಮತರಿಗೆ ಟ್ರಸ್ಟಿನ ಪರವಾಗಿ ಹಾಗೂ ತಮ್ಮೆಲ್ಲರ ಪರವಾಗಿ ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

## 25. ಕೆನರಾ ವೆಲ್‌ಫೆರ್ ಟ್ರಸ್ಟಿಗೆ 2012ರ ಶೈಕ್ಷಣಿಕ ರಂಗದ ಸಾಧನೆಗೆ ಪುರಸ್ಕಾರ

ಉತ್ತರ ಕನ್ನಡ ಜಿಲ್ಲೆಯಲ್ಲಿ ಕೆನರಾ ವೆಲ್‌ಪೆರ್ ಟ್ರಸ್ಟು ಕಳೆದ ಆರು ದಶಕಗಳಿಂದ ಶೈಕ್ಷಣಿಕ ರಂಗದಲ್ಲಿ ಉತ್ತಮ ಸಾಧನೆ ಹಾಗೂ ಆಡಳಿತ ನೀಡಿದ ಬಗ್ಗೆ, ಸಂಸ್ಕೃತಿ ಸಂಪದ, ಶ್ರೀ ಶೃಂಗೇರಿ ಶಂಕರ ಮಠ, ಸಿದ್ದಾಪುರ ದೊಡ್ಮನೆ ಗಣೇಶ ಹೆಗಡೆ ಪುರಸ್ಕಾರ ಸಮಿತಿಯವರು ಆಯೋಜಿಸಿದ 2012ರ ಶೈಕ್ಷಣಿಕ ರಂಗದ ಪ್ರಥಮ ಪುರಸ್ಕಾರಕ್ಕೆ ಕೆನರಾ ವೆಲ್‌ಪೆರ್ ಟ್ರಸ್ಟನ್ನು ಆಯ್ಕೆ ಮಾಡಿದೆ. ಈ ಪುರಸ್ಕಾರವನ್ನು ಜುಲೈ 20, 2012 ರಂದು ಸಿದ್ದಾಪುರದಲ್ಲಿ ನೀಡಲಿದ್ದಾರೆ. ಟ್ರಸ್ಟಿನ ಪರವಾಗಿ ಅಧ್ಯಕ್ಷರು ಈ ಪುರಸ್ಕಾರವನ್ನು ಸ್ವೀಕರಿಸಲಿದ್ದಾರೆ. ಸಂಸ್ಥೆಯ ಅಭಿವೃದ್ಧಿಯಲ್ಲಿ, ಬೆಳವಣಿಗೆಯಲ್ಲಿ ಉತ್ತಮ ಆಡಳಿತ ನೀಡುವಲ್ಲಿ ಸ್ಥಾಪನೆಯಿಂದ ಇಲ್ಲಿಯವರೆಗೆ ದುಡಿದ, ಸಹಕರಿಸಿದ, ಸೇವೆ ಸಲ್ಲಿಸಿದ ಎಲ್ಲರನ್ನು ನೆನೆದು ಅವರಿಗೆ ಟ್ರಸ್ಟಿನ ಪರವಾಗಿ ಕೃತಜ್ಞತೆ ಸಲ್ಲಿಸುತ್ತೇನೆ.

## 26. ಆಡಳಿತ ಮಂಡಳಿಯ ನೋಂದಣಿ

ನಮ್ಮ ಟ್ರಸ್ಟು 1953ರಲ್ಲಿ Bombay Public Trust Act ಪ್ರಕಾರ ನೋಂದಣಿಯಾದದ್ದು ಇರುತ್ತದೆ. ಆದರೆ ಈ ಎಕ್ಟ 2003 ರಲ್ಲಿಯೇ ನಿರಸನಗೊಂಡಿರುತ್ತದೆ. ಈ ಕಾರಣದಿಂದ ಸರಕಾರದವರು/ಇಲಾಖೆಯವರು B.P.T. Act ಪ್ರಕಾರ ನೋಂದಣಿ ಆದ ಸಂಸ್ಥೆಗಳು Society Registration Act ಪ್ರಕಾರ ಇಲ್ಲವೇ ಬೇರೆ ಯಾವದೇ ಸೂಕ್ತ ಪ್ರಾಧಿಕಾರದ ಅಡಿ ನೋಂದಣಿ ಮಾಡಿಕೊಂಡು ಹೊಸ ಪಿ.ಟಿ.ಆರ್ ಹಾಗೂ ಆಡಳಿತ ಮಂಡಳಿಯ ಸದಸ್ಯರ ಯಾದಿ ಕಳುಹಿಸಬೇಕೆಂದು ಮೇಲಿಂದ ಮೇಲೆ ಸುತ್ತೋಲೆಗಳನ್ನು ಹೊರಡಿಸುತ್ತಿದ್ದಾರೆ. ಅವರು ತಿಳಿಸಿದಂತೆ ನಾವು Society Registration Act ಪ್ರಕಾರ ನೋಂದಣಿ ಮಾಡಲು ಅರ್ಜಿ ಸಲ್ಲಿಸಿದಾಗ ಸಹಕಾರಿ ಸಂಘಗಳ ಉಪನಿಬಂಧಕರು ಈ ರೀತಿ ಅಭಿಪ್ರಾಯ ಪಟ್ಟಿರುವರು. **“ಕೆನರಾ ವೆಲ್‌ಫೆರ್ ಟ್ರಸ್ಟು ಬಾಂಬೆ ಪಬ್ಲಿಕ್ ಟ್ರಸ್ಟ ಎಕ್ಟ ಅಡಿ ನೋಂದಣಿಯಾದುದರಿಂದ ಈ ಟ್ರಸ್ಟು ತಮ್ಮ ಕಚೇರಿ ವ್ಯಾಪ್ತಿಯಲ್ಲಿ ಬಾರದೇ ಇರುವದರಿಂದ ತಮ್ಮ ಪ್ರಸ್ತಾವನೆ ಮರಳಿಸಿದೆ”** ಈ

ವಿಷಯವನ್ನು ನಾವು ಇಲಾಖೆಯ ಗಮನಕ್ಕೆ, ಸರಕಾರದ ಗಮನಕ್ಕೆ ಹಾಗೂ ಶಿಕ್ಷಣ ಮಂತ್ರಿಗಳ ಗಮನಕ್ಕೆ ತಂದರೂ ಯಾವದೇ ಪ್ರಯೋಜನವಾಗಿರುವದಿಲ್ಲ. ಇಲಾಖೆಯವರು ಸೂಕ್ತ ಪ್ರಾಧಿಕಾರದ ಅಡಿಯಲ್ಲಿ ನೋಂದಣಿ ಮಾಡುವಂತೆ ತಿಳಿಸಿರುವದರಿಂದ ಸೂಕ್ತ ಪ್ರಾಧಿಕಾರ ಯಾವದು ಎಂದು ಅವರಿಗೆ ಪತ್ರ ಬರೆದರೂ ಅವರಿಂದ ಉತ್ತರ ಬಂದಿರುವದಿಲ್ಲ. ಸರ್ಕಾರ ಕರ್ನಾಟಕ ಪಬ್ಲಿಕ್ ಟ್ರಸ್ಟ್ ಕಾಯ್ದೆ ರೂಪಿಸಿದ್ದರು ಅದನ್ನು ಸರ್ಕಾರದಲ್ಲಿ ಪಾಸುಮಾಡಿ ಆಚರಣೆಗೆ ತರದೇ ಇದ್ದುದರಿಂದ ಈ ಸಮಸ್ಯೆ ಉದ್ಭವಿಸಿದೆ. ಈ ಎಲ್ಲ ವಿಷಯಗಳನ್ನು ಸರ್ಕಾರದ ಹಾಗೂ ಇಲಾಖೆಯ ಗಮನಕ್ಕೆ ತಂದರೂ ಕೂಡ ಇಲಾಖೆಯವರು ಮಾನ್ಯತೆ ನವೀಕರಣ, ನೇಮಕಾತಿ ಪ್ರಸ್ತಾವನೆ, ಇನ್ನಿತರ ಎಲ್ಲ ಆಡಾಳಿತಾತ್ಮಕ ವಿಷಯಗಳಿಗೆ ಅನುಮೋದನೆ ನೀಡುತ್ತಿಲ್ಲ. ಮಾನ್ಯತೆ ನವೀಕರಣಗೊಳ್ಳದೆ ವೇತನ ಅನುದಾನ ಬಿಡುಗಡೆ ಮಾಡಲು ಸಾಧ್ಯವಾಗುವದಿಲ್ಲವೆಂದು ಇಲಾಖೆಯವರು ಜ್ಞಾಪನಾ ಪತ್ರ ಹೊರಡಿಸಿರುತ್ತಾರೆ.

ಈ ವಿಷಯ ಎಲ್ಲ ಸಂಸ್ಥೆಗಳಿಗೆ ಒಂದು ಸಮಸ್ಯೆಯಾಗಿದೆ. ಆದ್ದರಿಂದ ಮಾನ್ಯ ಅಧ್ಯಕ್ಷರು ಈ ಸಮಸ್ಯೆಯ ಪರಿಹಾರದ ಕುರಿತು ಸೂಕ್ತ ಮಾರ್ಗದರ್ಶನ ನೀಡಬೇಕಾಗಿ ತಮ್ಮೆಲ್ಲರ ಪರವಾಗಿ ವಿನಂತಿಸುತ್ತೇನೆ.

## 27. ಕೊನೆಯ ಮಾತು ಹಾಗೂ ಉಪಕಾರ ಸ್ಮರಣೆ

ಸಾಮಾನ್ಯವಾಗಿ ಶಾಲೆ–ಕಾಲೇಜುಗಳಲ್ಲಿ ಪಠ್ಯಪುಸ್ತಕದಲ್ಲಿರುವ ಪಾಠಗಳನ್ನು ಅಧ್ಯಾಪಕರು ಮುಗಿಸಿದರೆ ವರ್ಷದ ಕರ್ತವ್ಯ ಮುಗಿದಂತೆ ಹಾಗೂ ಪರೀಕ್ಷೆಯ ಪರಿಣಾಮವೇ ಶಿಕ್ಷಣ ಸಂಸ್ಥೆಯ ತರಗತಿಯ ಅಳತೆಗೋಲು ಎಂಬ ಕಲ್ಪನೆಯಿದೆ. ಪಠ್ಯಪುಸ್ತಕದ ಆಚೆಯೂ ಇರುವ ಹೊರಗಿನ ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆ, ರಾಜಕೀಯ ಚಿಂತನೆ (ಅಣಕು ಸಂಸತ್ತಿನ ಮೂಲಕ) ಹಾಗೂ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳ ಬಗ್ಗೆ ನಮ್ಮ ವಿದ್ಯಾರ್ಥಿಗಳು ಜ್ಞಾನಸಂಪತ್ತನ್ನು ಹೆಚ್ಚಿಸಿಕೊಳ್ಳುವಂಥ ಬಹುಮುಖ ವ್ಯಕ್ತಿತ್ವ ವಿಕಸನ ಶಿಕ್ಷಣ ಪದ್ಧತಿಗೆ ಬೋಧಕ ಸಿಬ್ಬಂದಿಗಳು ವಿಶೇಷ ಗಮನ ನೀಡಬೇಕೆಂದು ಈ ಸಂದರ್ಭದಲ್ಲಿ ತಿಳಿಸಲು ಬಯಸುತ್ತೇನೆ.

ಕ್ರುಗರ್ ಫೌಂಡೇಶನ್ ನೀಡಿದ ಹೆಚ್ಚುವರಿ ಆರ್ಥಿಕ ಸೌಲಭ್ಯ ಪಡೆಯುತ್ತಿರುವ ತಾತ್ಕಾಲಿಕ ಶಿಕ್ಷಕರು ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ತೀರ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಬಗ್ಗೆ ಆದ್ಯತೆ ಮೇರೆಗೆ ವಿಶೇಷ ಗಮನ ನೀಡಲು ಸೂಚಿಸಿದೆ. ಆಯಾ ಶಾಲೆಯ ಮುಖ್ಯಸ್ಥರು ಈ ಕುರಿತು ಹೆಚ್ಚು ಗಮನ ಹರಿಸಿ ಕ್ರುಗರ ಫೌಂಡೇಶನ್ ನೀಡುತ್ತಿರುವ ಸಹಾಯ ಧನದ ಹಿಂದೆ ಇರುವ ಸಾಮಾಜಿಕ ಕಳಕಳಿ ಸಾರ್ಥಕಗೊಳಿಸಲು ಪ್ರಾಮಾಣಿಕ ಪ್ರಯತ್ನ ಮಾಡಬೇಕು.

ಕೆನರಾ ವೆಲ್‌ಫೇರ್ ಟ್ರಸ್ಟು ಎಲ್ಲ ಸಂಸ್ಥೆಗಳ ಶೈಕ್ಷಣಿಕ ಪರಿಶೀಲನೆ ಹಾಗೂ ಲೆಕ್ಕಪತ್ರ ಪರಿಶೀಲನೆ ನಡೆಸುವಂತ ಈ ಒಂದು ಹೊಸ ಯೋಜನೆಯನ್ನು ಕಳೆದ ಕೆಲವು ವರ್ಷಗಳಿಂದ ನಡೆಸುತ್ತ ಬಂದಿದೆ. ಇದರಿಂದ ಶಾಲೆಯ ಶೈಕ್ಷಣಿಕ ಪ್ರಗತಿಗೆ ಹೆಚ್ಚು ಅನುಕೂಲವಾಗುವದರ ಜೊತೆಗೆ ಶಾಲೆಯ ಆಡಳಿತ, ಲೆಕ್ಕಪತ್ರ ನಿರ್ವಹಣೆಗೆ ಹಾಗೂ ಎದುರಿಸುತ್ತಿರುವ ಅನೇಕ ಸಮಸ್ಯೆಗಳಿಗೆ ಸ್ಥಳದಲ್ಲೆ ಪರಿಹಾರ ದೊರೆಯುವದರಿಂದ ಶಾಲೆಯ ಮುಖ್ಯಾಧ್ಯಾಪಕರಿಗೆ / ಪ್ರಾಚಾರ್ಯರಿಗೆ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಲು ಹಾಗೂ ಶಾಲೆಯ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಲು ಸಹಕಾರಿಯಾಗುತ್ತದೆ ಎಂಬುದು ಪರಿಶೀಲನಾ ತಂಡದ ಅನಿಸಿಕೆ. ಸಂಸ್ಥೆಯ ಮುಖ್ಯಸ್ಥರು ವರದಿಯಲ್ಲಿ ನಮೂದಿಸಿದ ನ್ಯೂನತೆಗಳಿಗೆ ಹೆಚ್ಚು ಒತ್ತು ನೀಡಿ ಕಾರ್ಯ ನಿರ್ವಹಿಸಿದರೆ ಮುಂಬರುವ ದಿನಗಳಲ್ಲಿ ಇನ್ನೂ ಹೆಚ್ಚು ಪ್ರಗತಿ ತೋರಿಸಲು ಸಾಧ್ಯವಿದೆ.

- ❖ ಮಾನ್ಯ ಟ್ರಸ್ಟಿಗಳಾದ ಪ್ರೊ. ಜಿ.ವಿ.ಭಟ್ಟರವರು ಟ್ರಸ್ಟು ನಡೆಸುತ್ತಿರುವ ಶಾಲಾ ಕಾಲೇಜುಗಳಿಗೆ ಶೈಕ್ಷಣಿಕ ಪ್ರಗತಿ ಪರಿಶೀಲನಾ ತಂಡದ ಜೊತೆಗೆ ಭಾಗವಹಿಸಿ ಪ್ರಗತಿ ಪರಿಶೀಲನಾ ಕಾರ್ಯದಲ್ಲಿ ಪಾಲುಗೊಂಡು ಅಮೂಲ್ಯ ಸಲಹೆ ಸೂಚನೆಗಳನ್ನು ನೀಡಿರುತ್ತಾರೆ, ಅವರಿಗೆ ಧನ್ಯಾವಾದಗಳು.
- ❖ 2010–11ನೇ ಸಾಲಿನ ಪ್ರಗತಿ ಪರಿಶೀಲನಾ ಕಾರ್ಯದಲ್ಲಿ ಎಲ್ಲ ವಿಷಯ ತಜ್ಞರು ಸಂಪೂರ್ಣ ಸಹಕಾರ ನೀಡಿ ತಮ್ಮ ಕಾರ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಿ, ಪ್ರತಿಯೊಂದು ಶಾಲೆಯ ಶೈಕ್ಷಣಿಕ ಕಾರ್ಯವನ್ನು ವೀಕ್ಷಿಸಿ ಕೊನೆಯಲ್ಲಿ ತಮ್ಮ ಪ್ರಾಮಾಣಿಕ ಅನಿಸಿಕೆಗಳನ್ನು ಅಧ್ಯಾಪಕರಲ್ಲಿ ಹಾಗೂ ಪರಿಶೀಲನಾ ತಂಡದಲ್ಲಿ ವ್ಯಕ್ತಪಡಿಸಿ, ಮುಂಬರುವ ದಿನಗಳಲ್ಲಿ ಶಾಲೆಗಳ ಪ್ರಗತಿಗಾಗಿ ಹಾಕಿಕೊಳ್ಳಬೇಕಾದ ಕಾರ್ಯಯೋಜನೆ ಕುರಿತು ತಿಳುವಳಿಕೆ ನೀಡಿರುತ್ತಾರೆ. ಈ ಒಂದು ಮಹತ್ವದ ಕಾರ್ಯದಲ್ಲಿ ಪಾಲುಗೊಂಡು ತಮ್ಮ ಅಮೂಲ್ಯವಾದ ವೇಳೆಯನ್ನು ಈ ಕಾರ್ಯಕ್ಕೆ ನೀಡಿದ ಎಲ್ಲರನ್ನು ಹೃತ್ಪೂರ್ವಕವಾಗಿ ಅಭಿನಂದಿಸಿ ಬರುವ ವರ್ಷಗಳಲ್ಲಿ ಕೂಡ ಅವರಿಂದ ಇದೇ ರೀತಿಯ ಸಹಕಾರ ನಿರೀಕ್ಷಿಸಲಾಗಿದೆ.

ಪ್ರಗತಿ ಪರಿಶೀಲನೆಗಾಗಿ ಭೇಟಿ ನೀಡಿದ ಸಂದರ್ಭದಲ್ಲಿ ಟ್ರಸ್ಟಿನ ಎಲ್ಲ ಶಾಲೆಗಳ/ ಕಾಲೇಜುಗಳ ಮುಖ್ಯಾಧ್ಯಾಪಕರು / ಪ್ರಾಚಾರ್ಯರು ಹಾಗೂ ಅಧ್ಯಾಪಕ ವೃಂದದವರು, ಅಧ್ಯಾಪಕೇತರರು ಸಂಪೂರ್ಣ ಸಹಕಾರ ನೀಡಿದ್ದಾರೆ. ಅವರಿಗೂ ಈ ಸಂದರ್ಭದಲ್ಲಿ ವಂದನೆಗಳನ್ನು ಸಲ್ಲಿಸುತ್ತೇನೆ. ಈ ಪರಿಶೀಲನಾ ಕಾರ್ಯ ನೆರವೇರಿಸಲು ಪ್ರೇರಣೆ ನೀಡಿದ ಟ್ರಸ್ಟಿನ ಅಧ್ಯಕ್ಷರು ಮತ್ತು ಎಲ್ಲ ಧರ್ಮದರ್ಶಿಗಳಿಗೆ ಹೃತ್ಪೂರ್ವಕ ವಂದನೆ ಸಲ್ಲಿಸುತ್ತೇನೆ.

ಪ್ರಗತಿ ಪರಿಶೀಲನಾ ಹಾಗೂ ಲೆಕ್ಕ ಪತ್ರ ತಪಾಸಣಾ ವರದಿಯನ್ನು ಸಂಸ್ಥೆಯ ಎಲ್ಲ ಮುಖ್ಯಸ್ಥರಿಗೆ ನೀಡಲಾಗಿದೆ. ಈ ಹಿಂದಿನ ಪರಿಶೀಲನಾ ಸಮಿತಿಯ ವರದಿಯಲ್ಲಿ ಸೂಚಿಸಿದ ಸಲಹೆಗಳನ್ನು ಕೆಲವು ಸಂಸ್ಥೆಯ ಮುಖ್ಯಸ್ಥರು ಗಂಭೀರವಾಗಿ ಪರಿಗಣಿಸಿದಂತೆ ಕಂಡುಬರುವದಿಲ್ಲ. ಆದ್ದರಿಂದ ಸಂಸ್ಥೆಯ ಎಲ್ಲ ಮುಖ್ಯಸ್ಥರು ಪರಿಶೀಲನಾ ವರದಿಯಲ್ಲಿ ನಮೂದಿಸಿದ ಎಲ್ಲ ಅಂಶಗಳಿಗೆ ಗಮನ ನೀಡಿ ಮುಂಬರುವ ದಿನಗಳಲ್ಲಿ ಎಲ್ಲ ನ್ಯೂನತೆಗಳನ್ನು ಸರಿಪಡಿಸಿಕೊಂಡು ಹೆಚ್ಚಿನ ಪ್ರಗತಿ ಸಾಧಿಸಲು ಈ ಮೂಲಕ ವಿನಂತಿಸಲಾಗಿದೆ.

2011–2012ನೇ ಶೈಕ್ಷಣಿಕ ವರ್ಷದ ಎಲ್ಲ ಶಾಲೆ, ಕಾಲೇಜುಗಳ ಹಾಗೂ ಕೆನರಾ ವೆಲ್‌ಫೇರ್ ಟ್ರಸ್ಟಿನ ಲೆಕ್ಕಪತ್ರವನ್ನು ಲೆಕ್ಕಪರಿಶೋಧಕರಾದ ಶ್ರೀ ಯು.ಕೆ.ಅಶ್ವೇಕರ ಹಾಗೂ ಅವರ ಸಿಬ್ಬಂದಿ ವರ್ಗ ಸಕಾಲದಲ್ಲಿ ಮುಗಿಸಿ ಕೊಟ್ಟಿರುತ್ತಾರೆ. ಅವರಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಟ್ರಸ್ಟಿನ ದೈನಂದಿನ ವ್ಯವಹಾರದಲ್ಲಿ, ಅಭಿವೃದ್ಧಿ ಕೆಲಸದಲ್ಲಿ ಲೆಕ್ಕ ಪತ್ರ ನಿರ್ವಹಣೆಯಲ್ಲಿ, ಟ್ರಸ್ಟಿನ ಆಡಳಿತ ನಿರ್ವಹಣೆಯಲ್ಲಿ ಸದಾ ಮಾರ್ಗದರ್ಶನ ನೀಡುತ್ತಿರುವ ಟ್ರಸ್ಟಿನ ಅಧ್ಯಕ್ಷರಾದ ಮಾನ್ಯ ಶ್ರೀ ಎಸ್.ಪಿ.ಕಾಮತರವರಿಗೆ, ಟ್ರಸ್ಟಿಗಳಾದ ಪ್ರೊ. ಜಿ.ವಿ.ಭಟ್ಟರವರಿಗೆ ಹಾಗೂ ಶ್ರೀಮತಿ ಉಷಾ ಪ್ರಧಾನ ಅವರಿಗೆ ಈ ಸಂದರ್ಭದಲ್ಲಿ ನೆನದು ಅವರಿಗೆ ಹೃತ್ಪೂರ್ವಕವಾದ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ತಾವೆಲ್ಲರೂ ಮುಕ್ತ ಮನಸ್ಸಿನಿಂದ ಮುಂದೆ ನಡೆಯುವ ಚರ್ಚೆಯಲ್ಲಿ ಭಾಗವಹಿಸಿ ಉಪಯುಕ್ತ ಸಲಹೆ ಸೂಚನೆ ನೀಡಿ ಸಭೆಯಲ್ಲಿ ಒಳ್ಳೆಯ ನಿರ್ಧಾರಗಳನ್ನು ತೆಗೆದುಕೊಳ್ಳಲು ಟ್ರಸ್ಟಿನ ಅಧ್ಯಕ್ಷರಿಗೆ ಸಹಕರಿಸಬೇಕಾಗಿ ವಿನಂತಿಸುತ್ತೇನೆ. ಈ ಒಂದು ಮಹತ್ವಪೂರ್ಣವಾದ ಸಭೆಯಲ್ಲಿ ಪಾಲ್ಗೊಳ್ಳಲು ಆಗಮಿಸಿದ ತಮಗೆಲ್ಲರಿಗೆ ಇನ್ನೊಮ್ಮೆ ಹೃತ್ಪೂರ್ವಕವಾಗಿ ಸ್ವಾಗತಿಸಿ ನನ್ನ ವರದಿಯನ್ನು ಮುಗಿಸುತ್ತೇನೆ.


**ಜೈ ಹಿಂದ!**

**ಅಂಕೋಲಾ**
ದಿ. 15–07–2012

**ಕೃಷ್ಣಾನಂದ ವಿ.ಶೆಟ್ಟಿ**
**ಆಡಳಿತಾಧಿಕಾರಿ**
**ಕೆನರಾ ವೆಲ್‌ಫೇರ್ ಟ್ರಸ್ಟ್, ಅಂಕೋಲಾ**

# INSTITUTIONS RUN BY KANARA WELFARE TRUST

| Sl.No. | Name of the Institution | Place | Estd. | Head of the Institution |
|---|---|---|---|---|
| | **DEGREE COLLEGES** | | | |
| 1 | Gokhale Centenary College | Ankola | 1966 | Shri V.R.Kamat |
| 2 | Divekar College Of Commerce | Karwar | 1970 | Dr. R.G.Gundi |
| 3 | KWT's College of Education | Dandeli | 2005 | Smt. Jayashree V.Korati |
| 4 | B.C.A. College | Karwar | 2008 | Dr. R.G.Gundi |
| | **JUNIOR COLLEGES** | | | |
| 5 | Gokhale Centenary Pre-University College | Ankola | 2001 | Smt. Shailaja M.Bhat |
| 6 | Divekar Pre-University Commerce College | Karwar | 2001 | Smt. Veena J.Torke |
| 7 | Janata Vidyalaya Composite Junior College | Dandeli | 1971 | Shri M.S.Lamani |
| 8 | Janata Vidyalaya Composite Junior College | Kadtoka, Honnavar | 1971 | Shri Bhimraj R. |
| 9 | Janata Vidyalaya Composite Junior College | Shirali, Bhatkal | 1982 | Shri A.B.Ramrath |
| 10 | P.M. Composite Junior College | Ankola | 1993 | Shri R.V.Keni |
| 11 | Divekar Pre-University Science College | Karwar | 2004 | Smt. Veena J.Torke |
| | **HIGH SCHOOLS** | | | |
| 12 | People's Multipurpose High School | Ankola | 1953 | Shri R.V.Keni |
| 13 | People's Multipurpose High School (English Medium) | Ankola | 2011 | Shri R.V.Keni |
| 14 | Janata Vidyalaya | Baad-Kagal, Kumta | 1954 | Shri S.N.Nayak |
| 15 | Janata Vidyalaya | Shirali, Bhatkal | 1955 | Smt. Savitri Naik |
| 16 | Janata Vidyalaya | Dandeli | 1956 | Smt. Radhika Honnavar |
| 17 | Janata Vidyalaya | Kadwad, Karwar | 1960 | Shri F.B.Talwar |
| 18 | Janata Vidyalaya | Kasarkod, Honnavar | 1960 | Shri L.V.Bhat (I/c) |
| 19 | Janata Vidyalaya | Murdeshwar, Bhatkal | 1960 | Shri V.N.Hebbar (I/c) |
| 20 | Janata Vidyalaya | Mirjan-Kodkani, Kumta | 1961 | Smt. Usha N.Nayak |
| 21 | Janata Vidyalaya | Kadtoka, Honnavar | 1962 | Smt. Usha G.Bhat |
| 22 | Janata Vidyalaya | Mudga, Karwar | 1963 | Shri S.G.Sheregar |
| 23 | Janata Vidyalaya | Dhareshwar, Kumta | 1964 | Smt. Laxmi Kasmadi |
| 24 | Janata Vidyalaya | Bedkani, Siddapur | 1965 | Shri A.R.Kondli |
| 25 | Smt. Kamalabai Pikale High School | Katgal, Kumta | 1966 | Shri I.V.Hebbar |
| 26 | Janata Vidyalaya | Anilgod, Honnavar | 1966 | Shri K.G.Hulswar |
| 27 | Janata Vidyalaya | Kulve-Baroor, Sirsi | 1968 | Shri T.D.Lamani |
| | **PRIMARY AND PRE-PRIMARY SCHOOLS** | | | |
| 28 | English Medium Primary School | Dandeli | 1958 | Smt. Anusuya C.Revankar |
| 29 | Kannada Medium Primary School | Dandeli | 1999 | Smt. Anusuya C.Revankar |
| 30 | Dr. Dinkar Desai Primary School | Ankola | 2004 | Shri Sandeep R.Tengse |
| 31 | Janata Vidyalaya Dinkar Primary School | Dhareshwar, Kumta | 2006 | Smt. Radha K.Bhandari |
| 32 | Shrimat Sadyojat Shankarashram Swamiji Balamandir | Shirali, Bhatkal | 2008 | Shri A.B.Ramrath |
| 33 | English Medium Nursery School | Dandeli | 1958 | Smt. Anusuya C.Revankar |
| 34 | Kannada Medium Nursery School | Dandeli | 1999 | Smt. Anusuya C.Revankar |
| 35 | Thakkar Bapa Nursery School | Ankola | 2003 | Smt. Poornima S.Achari |
| 36 | Janata Vidyalaya Dinkar Pre-Primary School | Dhareshwar, Kumta | 2005 | Smt. Radha K.Bhandari |
| 37 | Bala Vikasa Kendra | Mundgod | 1969 | Smt. Sujata N.Harihar |
| | **OTHER SOCIAL SERVICE INSTITUTIONS** | | | |
| 38 | Thakkar Bapa Tailoring School | Ankola | 1956 | Shri R.V.Keni |
| 39 | Anandashram Tailoring School | Mundgod | 1969 | Smt. Sujata N.Harihar |
| 40 | Dinkar Kalaniketan Music School | Ankola | 1990 | Shri V.G.Patil |
| 41 | Dinkar Kalaniketan Music School | Karwar | 1990 | Shri V.G.Patil |
| 42 | Satyasai Balawadi & Balavikas Kendra | Kodibag, Karwar | 1985 | Dr. R.G.Gundi |
| 43 | Computer Training Centre | Karwar | 1998 | Dr. R.G.Gundi |
| 44 | Computer Training Centre | Dandeli | 1998 | Shri M.S.Lamani |


UTTARA KANNADA DISTRICT
LOCATIONS HAVING INSTITUTION/S
UNDER KANARA WELFARE TRUST, ANKOLA
N
W
E
S
INDIA
Karnataka
Uttara Kannada
KARNATAKA
BELGAUM DISTRICT
DHARWADDISTRICT
HAVERIDISTRICT
SHIMOGADISTRICT
UDUPI DISTRICT
GOA STATE
ARABIAN SEA
HALIYAL
Dandeli
JOIDA
(SUPA)
KARWAR
Kodibag
Kadwad
Karwar
Mudga
YELLAPUR
MUNDGOD
Mundgod
ANKOLA
Ankola
SIRSI
Kulve Baroor
KUMTA
Mirjan
Katgal
Baad Kagal
Dhareshwar
Kadtoka
SIDDAPUR
Bedkani
HONNAVAR
Kasarkod
Anilgod
Murudeshwar
BHATKAL
Shirali
0
15
30
kilometres